# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಸಂಪೂರ್ಣ ರಾಮಾಯಣ

ಕವಿ

## ಬೆಳಸಲಿಗೆ ಗಣಪತಿ ಹೆಗಡೆ


ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ಜುಲೈ ೩೦, ೨೦೧೯

ಯಕ್ಷವಾಹಿನಿ®

Email: yakshaprasangakosha@co.gmailm, yakshavahini@co.gmailm Blog: www.yakshaprasangakosha.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠೆ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

# ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

# ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ರಾಮಾಯಣ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಬೆಳಸಲಿಗೆ ಕೃತಿ ಸಂಪುಟ, ದಿ. ಬೆಳಸಲಿಗೆ ಗಣಪತಿ ಹೆಗಡೆ ಕೃತಿ ಪ್ರಕಾಶನ, ಸಿದ್ದಾಪುರ, ಉತ್ತರ ಕನ್ನಡ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೪೫೨

**ಪಾತ್ರಗಳು:**

ಶ್ರೀರಾಮ, ಲಕ್ಷ್ಮಣ, ಶತ್ರುಘ್ನ, ಸೀತೆ, ತಾರೆ, ದಶರಥ, ಕೌಸಲ್ಯೆ, ಕೈಕೆ, ಕಪಟ ಯತಿ, ಸಂಪಾತಿ, ವಿಭೀಷಣ, ಸುಮಂತ್ರ, ರಾವಣ, ವಸಿಷ್ಠ, ಆಂಜನೇಯ, ದಾಸಿ, ಶಬರಿ, ಅನುಕೂಲ ಸ್ತ್ರೀ, ಮಾಯಾಶೂರ್ಪನಖಿ, ಸ್ವಯಂಪ್ರಭೆ, ಮಂಡೋದರಿ, ಭರತ , ಅಕ್ಷಕುಮಾರ, ಅತಿಕಾಯ, ಇಂದ್ರ, ಖರಾಸುರ, ಸುಗ್ರೀವ, ಮಂಥರೆ, ಗುಹ, ಶೂರ್ಪನಖಿ, ಲಂಕಿಣಿ, ಪ್ರಹಸ್ತ, ಗರುಡ, ಬ್ರಹ್ಮ, ದೂಷಣ, ವಾಲಿ, ಇಂದ್ರಜಿತು, ಮಾತಲಿ, ಪೌರರು, ಮಾರೀಚ, ಜಟಾಯು, ಅಂಗದ, ವಿರಾಧ, ಕಬಂಧ, ಜಾಂಬವ, ಕುಂಭಕರ್ಣ, ಶುಕ್ರ, ಕಾಂಚನ ಮೃಗ, ಚಾರಕರು, ದಾನವರು, ಋಷಿಗಳು, ಸಿಂಹಿಕೆ, ಸುದರ್ಶನ, ದೇವತೆಗಳು

**ಕಥಾ ಸಾರಾಂಶ:**

ಶ್ರೀರಾಮ ಪಟ್ಟಾಭಿಷೇಕದ ಸಿದ್ಧತೆಯಾದರೂ ಕೈಕೆಯು ದಶರಥನಲ್ಲಿ ಕೇಳಿದ ಎರಡು ವರಗಳಿಂದಾಗಿ ಅದು ನೆರವೇರದೆ ಸೀತಾ ಲಕ್ಷ್ಮಣರೊಂದಿಗೆ ರಾಮನ ವನವಾಸ - ಭರತನಿಗೆ ಪಾದುಕಾಪ್ರದಾನ - ಶೂರ್ಪನಖಿಯ ಪ್ರಕರಣ - ಸೀತಾಪಹಾರ - ಸುಗ್ರೀವಸಖ್ಯ - ವಾಲಿಯ ವಧೆ – ಸೀತಾನ್ವೇಷಣೆ - ಹನುಮಂತನಿಂದ ಸೀತೆಗೆ ಅಂಗುಳೀಯಕದ ಅರ್ಪಣೆ - ಸೀತೆಯಿಂದ ಚೂಡಾಮಣಿಯನ್ನು ಪಡೆದ ಹನುಮಂತನಿಂದ ಲಂಕಾದಹನ - ರಾಮನಿಗೆ ವೃತ್ತಾಂತವನ್ನರುಹಿ ಚೂಡಾಮಣಿಯ ಅರ್ಪಣೆ - ವಿಭೀಷಣ ಶರಣಾಗತಿ - ಅಂಗದ ಸಂಧಾನ - ಅತಿಕಾಯ ಕಾಳಗ - ಕುಂಭಕರ್ಣ ಕಾಳಗ - ಇಂದ್ರಜಿತು ಕಾಳಗ - ರಾವಣ ವಧೆ - ಅಗ್ನಿಪರೀಕ್ಷಾನಂತರ ಸೀತಾಸ್ವೀಕಾರ - ರಾಮನ ಅಯೋಧ್ಯಾ ಪ್ರವೇಶ - ಪಟ್ಟಾಭಿಷೇಕ.

**ಕವಿ ಪರಿಚಯ:**

ಬೆಳಸಲಿಗೆ ಗಣಪತಿ ಹೆಗಡೆಯವರು (೧೯೨೧-೧೯೯೭) ಉತ್ತರ ಕನ್ನಡದ ಸಿದ್ದಾಪುರ ತಾಲೂಕಿನ ಬೆಳಸಲಿಗೆಯವರು. ತಂದೆ ವಿಠ್ಠಪ್ಪ ಹೆಗಡೆ, ತಾಯಿ ಲಕ್ಷ್ಮಮ್ಮ, ಪತ್ನಿ ಕಲಾವತಿ. ಕೃಷಿಕ, ಯಕ್ಷಗಾನ ಕಲಾವಿದ. ಬಾಲ್ಯದಲ್ಲಿ ದೊರಕಿದ ಅಲ್ಪಸ್ವಲ್ಪ ಓದುಬರಹವೇ ಇವರ ವಿದ್ಯಾಭ್ಯಾಸ. ಆದರೆ ಇವರ ಕಾವ್ಯರಚನಾ ಪ್ರೌಢಿಮೆಯು ಪಂಡಿತರೂ ತಲೆದೂಗುವಂತಿದೆ. ಸಮಗ್ರ ಮಹಾಭಾರತ (ಅರ್ಥಾತ್ ಕುರುಕ್ಷೇತ್ರ) ವು ಇವರ ಮೊದಲ ಕೃತಿ. ಕಾರಣಾಂತರಗಳಿಂದ ಯಕ್ಷಗಾನದ ಕವಿಗಳ ಸಾಲಿನಲ್ಲಿ ಇವರಿಗೆ ಸಿಗಬೇಕಾಗಿದ್ದ ಸ್ಥಾನ ಸಿಕ್ಕಿಲ್ಲವೆಂದು ಕಾಣುತ್ತದೆ.

ಇವರು ಬರೆದ ಪ್ರಸಂಗಗಳು: ಸಮಗ್ರಭಾರತ, ಸಂಪೂರ್ಣ ರಾಮಾಯಣ, ಕೌಂತೇಯ ಕರ್ಣ, ಆಂಜನೇಯ ಪರಾಜಯ, ವಸಂತಸೇನಾ, ಕಲಿಗರ್ವಭಂಗ, ಶ್ರೀಮತೀಪರಿಗ್ರಹ, ಪಾರ್ವತೀ ಆಗ್ರಹ, ಪುತ್ರಬಲಿದಾನ, ತ್ರಿಭುವನ ವಿಜಯ, ಸತೀಸಾಮರ್ಥ್ಯ, ಅಹಲ್ಯೋದ್ಧಾರ, ಇಟಗಿ ಕ್ಷೇತ್ರಮಹಾತ್ಮೆ, ಮಾಯಾ ಮಂದಾರವತಿ, ಗಂಗಾವತರಣ, ಚ್ಯವನ – ಸುಕನ್ಯಾ, ಓಘವತೀ ಪರಿಣಯ, ವಿಕ್ರಮಾದಿತ್ಯ ವಿಜಯ, ಸೀತಾರಾಮ ಪರಂಧಾಮ, ದುಷ್ಯಂತ ಶಾಕುಂತಲಾ, ಮಹಾಸತಿ ಮಂಡೋದರಿ, ಭಾನುತೇಜಸ್ವಿ, ಕನ್ನಡ ಕೇಸರಿ, ಕನ್ಯಾರತ್ನ, ಸೌಭಾಗ್ಯಪ್ರದಾನ

**ಟಿಪ್ಪಣಿ:**

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತ ವೃತ್ತ**
ಶ್ರೀಮದ್ ಭಾನುಕುಲಪ್ರದೀಪ ವಿನುತಪ್ರೇಮಂ ಜಗದ್ವಂದಿತಂ |
ರಾಮಂ ಸಜ್ಜನರಿಷ್ಟದಾತೃ ಖಲಹೃದ್‌ಭೀಮಂ ಸುರೇಶಾರ್ಚಿತಂ ||
ಶ್ಯಾಮಂ ಲೋಕಸಮಸ್ತ ಶಾಂತಿನಿಲಯಂ ಭೌಮೀ ಮನೋವಲ್ಲಭಂ |
ಸೋಮಾರ್ಕಾಮಿತತೇಜಸಂ ಕವಿಗಣಕ್ಷೇಮಂ ಪರೇಶಂ ಭಜೇ || ೧ ||

**ನಾಟಿ - ಝಂಪೆ**
ಜಯತು ಜಯ ಗಜವದನ | ಜಯತು ನಗಜಾತರುಣ |
ಜಯತು ದೀನೋದ್ಧರಣ | ಜಯ ವಿಘ್ನಹರಣ ||
ಜಯತು ಜಯ ಖಳಹನನ | ಜಯತು ಸರ್ಪಾಭರಣ |
ಜಯತು ಪಾವನಚರಣ | ಜಯ ಸಿದ್ಧಿರಮಣ || ಜಯತು || ೨ ||
ಜಯತು ಜಯ ಸರ್ವೇಶ | ಜಯತು ರವಿಸಂಕಾಶ |
ಜಯತು ಭವಭಯನಾಶ | ಜಯ ಭಕ್ತಪೋಷ ||
ಜಯತು ಜಯ ಶ್ರುತಿಘೋಷ | ಜಯತು ಗಾನವಿಲಾಸ |
ಜಯತು ಕವಿಕುಲತೋಷ | ಜಯ ರಕ್ಷಿಸನಿಶ || ಜಯತು || ೩ ||
ಜಯತು ಜಯ ಚಿದ್ರೂಪ | ಜಯತು ಚಂದನಲೇಪ |
ಜಯತು ಕೀರ್ತಿಕಲಾಪ | ಜಯ ಸುಪ್ರತಾಪ ||
ಜಯತು ನುತವಿಧಿಸುರಪ | ಜಯತು ಜಗನಿಷ್ಪಾಪ |
ಜಯತು ಕಪಿಲಾವನಿಪ | ಜಯವೀಯೋ ಗಣಪ || ಜಯತು || ೪ ||

**ನಾಟಿ ಬೇಹಾಗ್ - ರೂಪಕ**
ವಾಣಿ ಭುಜಗವೇಣಿ ಅಜನ | ರಾಣಿ ಶಾರದೆ ||
ನೀನೆ ದಯದಿ ಗಾನ ಗೈಸ | ಲೇನು ಬಾರದೆ || ಪಲ್ಲ ||
ಪ್ರಾಕೃತರೆನಿಪಾ ಕವಿಗಳ | ನೇಕ ಜನರನ ||
ಪ್ರಾಕೃತರ ಗೈದಾ ಕರುಣದೊ | ಳೀ ಕುಮಾರನ || ವಾಣಿ || ೫ ||
ವಾಕು ಮತಿಯೋಳೈಕ್ಯಳೆನಿಸಿ | ಲೋಕ ಸತ್ಕೃತಿ ||
ನೀ ಕರುಣಿಪುದೀಕೃತಿಗೆ ವಿ | ವೇಕಿ ಭಾರತಿ || ವಾಣಿ || ೬ ||
ಮಾತೆಯೆ ಪ್ರಣಿಪಾತ ನಾಂ ಪ್ರ | ಪೂತಪಾದದ ||
ಖ್ಯಾತೆ ಖಗವರೂಥೆ ಸಲಹು | ಜಾತನಂ ಸದಾ || ವಾಣಿ || ೭ ||

**ವಾರ್ಧಕ**
ಶೇಷಾದ್ರಿಪತಿ ವೆಂಕಟೇಶನಂ ನುತಿಸಿ ಸ |
ರ್ವೇಶ ಹರಿಹರ ಸರಸಿಜಾಸನರ್ಗೆರಗಿ ಕೈ |
ಲಾಸನರ್ಧಾಂಗಿ ಸಿರಿ ವಾಗ್ದೇವಿಯರ ಭಜಿಸಿ ವಾಸವಾದ್ಯಮರ ತತಿಯ ||
ತೋಷದಲಿ ಪೊಡಮಡುತ್ತಾ ಸುಕವಿ ವಾಲ್ಮೀಕಿ |
ವ್ಯಾಸಭಾಸಾದ್ಯಖಿಲ ಭೂಸುರೋತ್ತಮರ ಮಣಿ |
ದಾ ಸಕಲ ಗುರುಹಿರಿಯರಂ ಸ್ಮರಿಸಿ ಭಕ್ತಿಯಿಂದೀ ಸುಕಾವ್ಯವ ಗೈವೆನು || ೮ ||

**ಭಾಮಿನಿ**
ಆದಿಯಲಿ ಶಿವನುಮೆಗೆ ಬೋಧಿಸಿ |
ದಾದಿ ಕಥೆಯನನಂತ ರೀತಿಯ |
ಲಾದಿ ಕವಿ ವಾಲ್ಮೀಕಿ ಮುನಿವರ್ಯಾದಿಗಳು ಬರೆದ ||
ಆದಿಪುರುಷನ ಚರಿತೆಯಿದರನ |
ನಾದಿ ಮೂರುತಿ ನುಡಿಸೆ ನವ್ಯತೆ |
ಗಾದಿಯೆನಲಾನೊರೆವೆ  ಕನ್ನಡದೆಕ್ಷಗಾನದಲಿ || ೯ ||

**ಸೌರಾಷ್ಟ್ರ - ತ್ರಿವುಡೆ**
ತ್ರಿಣಯ ಕರುಣದೊಳನಘ ರಾಮಾ |
ಯಣವನಭಿವರ್ಣಿಸುತಲಿರೆ ಮಣಿ |
ದಿನಿಯನನು ಬೆಸಗೊಂಡಳುಮೆಯತಿ | ವಿನಯದಿಂದ || ೧೦ ||
ಕೇಳಿ ದಣಿಯವು ಕಿವಿಗಳಿವು ಮುದ |
ತಾಳಿ ತಣಿಯದು ಮನವು ಶ್ರೀಹರಿ |
ಲೀಲೆಗಳ ಕೊಂಡಾಡಿ ಜಿಹ್ವೆಯು | ಸೋಲದೈಸೆ || ೧೧ ||
ನಾರಿಯವರಜರೊಡನಯೋಧ್ಯಾ |
ಧಾರುಣಿಯನುಳಿದಾ ರಘೂತ್ತಮ |
ಸೇರಿದನದೆಂತಮಮ ದುರ್ಗಮ | ಘೋರಟವಿಯ || ೧೨ ||
ಇರೆ ಜನಸ್ಥಾನದಲಿ ಸೀತಾ |
ತರುಣಿಯನು ಕೊಂಡೊಯ್ದು ರಾಮನ |
ಧುರದಿ ಪಡೆದನದೆಂತು ದಶಶಿರ | ಪರಮ ಪದವ || ೧೩ ||
ಅರುಹು ರಾಘವನಿಳೆಯ ಭಾರರ |
ತರಿದು ಜಾನಕಿ ಸಹಿತ ರಾಜ್ಯವ |
ಪೊರೆದನೆನೆ ತಕ್ಕೈಸಿ ಪೇಳಿದ ಹರನು ಮುದದಿ || ೧೪ ||

**ವಾರ್ಧಕ**
ರವಿಕುಲೋತ್ತುಂಗ ನೃಪ ಕೀರ್ತಿಕುಜಫಲರೂಪ |
ದಿವಿಜಸಖನಹಿತಗಜ ಪಂಚಾಸ್ಯನೆನಿಸುವಜ |
ಕುವರ ದಶರಥನಾಳುತಿಳೆಯ ಮೂವೆಂಡಿರೊಳು ವಿವಿಧದತಿ ವೈಭವದೊಳು ||
ಸವೆದುದರುವತ್ತು ಸಾವಿರ ವರುಷ ಸುತರುದಿಸ |
ದವ ಪುತ್ರಕಾಮೇಷ್ಟಿ ಗೈದು ಲೋಕ ಸಮಷ್ಟಿ |
ಧವನ ಶಿಶುತುಲ್ಯೆಯಿಂ ಪಡೆಯೆ ಕೌಸಲ್ಯೆಯಿಂ ಭುವನನುತ ರಾಮಾಖ್ಯೆಯಿಂ || ೧೫ ||

**ಭಾಮಿನಿ**
ಅರಸನಚ್ಚಿನ ಕೈಕೆಯೆಂಬವ |
ಳೆರಡನೆಯ ಸತಿಗುದಿಸೆ ಭರತನು |
ಕಿರಿಸುಮಿತ್ರೆಯೊಳವಳಿ ಲಕ್ಷ್ಮಣ ಶತ್ರುಹರರೆನುವ ||
ತರಳರೊಡನತ್ಯಧಿಕ ಹರುಷದೊ |
ಳಿರುತ ನೃಪ ಕಾಲೋಚಿತದ ಸಂ |
ಸ್ಕರಣಗಳ ವಿರಚಿಸಿದ ನಿರದೆ ವಸಿಷ್ಠರಭಿಮತದಿ || ೧೬ ||

**ವಾರ್ಧಕ**
ದಕ್ಷಸುತೆ ಕೇಳು ಶ್ರೀವಕ್ಷ ದಿನದಿನದಿ ಸಿತ |
ಪಕ್ಷ ಶಶಿಯಂತೆ ಬೆಳೆದುಕ್ಕಿಬಹ ಜವ್ವನದಿ |
ಲಕ್ಷ್ಮಣನ ಜತೆಯೊಳೈದಕ್ಕರದಿ ರಕ್ಕಸರನಿಕ್ಕಿ ಕೌಶಿಕನ ಮಖವ ||
ರಕ್ಷಿಸುತಹಲ್ಯೆಯಂ ಸತ್ಕರಿಸಿ ಮಿಥಿಲೆಗೈ |
ದಕ್ಕಜದಿ ಧನುವೆತ್ತುತಕ್ಷರಂ ಜಾನಕಿಗೆ |
ತಕ್ಕ ಪತಿಯೆಂದೆನಿಸಿ ವಿಕ್ರಮದಿ ಭಾರ್ಗವನ ಮಿಕ್ಕಯೋಧ್ಯೆಗೆ ಬಂದನು || ೧೭ ||

**ಶಾರ್ದೂಲ ವಿಕ್ರೀಡಿತ ವೃತ್ತ**
ಸೀತಾವಕ್ತ್ರಸರೋರುಹಾಪ್ತ ಸವಿತಾ ಮಾತಾಪಿತಾಸ್ಸರ್ವದಾ |
ಪ್ರೀತ್ಯಾಗಾರ ಸುದೀಪ್ತ ದೀಪ ವರಖಿದ್ಯೋತಾನ್ವಯಾಖ್ಯಾರ್ಣವ ||
ಶೀತಾಂಶೂಪಮ ರಾಮಚಂದ್ರನಿರೆ ಭೂಜಾತಾಸಹಾನಂದದೊಳ್ |
ಏತತ್ಕಾಲದಿ ತೋರ್ದುದಲ್ಲಿ ಮಹದು | ತ್ಪಾತಂ ಮನೋಭೀಕರಂ || ೧೮ ||

**ಭಾಮಿನಿ**
ವನಿತೆ ಕೇಳದ ಕೋಸಲೇಶ್ವರ |
ನೆಣಿಸುತಿನಿತುತ್ಪಾತವಿದು ಮತ್ |
ಪಣೆಯ ಲಿಪಿಯ ವಿಧಾತ ಚಿತ್ರಿಸಿ ತೋರ್ದ ಬಾನ್‌ಪಟದಿ ||
ತನುವನಿಶ್ಚಿತವವನಿಪಟ್ಟವ |
ನಣುಗ ರಾಘವಗೀವೆನೆನುತಲಿ |
ಮನದೊಳರಿತೋಲಗಕೆ ನಡೆತಂದೆಂದನುತ್ಸವದಿ || ೧೯ ||

**ಕಾಂಬೋಧಿ - ಝಂಪೆ**
ಆಲಿಸೈ ಮಂತ್ರಿ ಬಹು | ಕಾಲ ಭಾಗ್ಯದೊಳಿಳೆಯ |
ನಾಳಿದೆ ಸಮಸ್ತ ಸಿರಿ | ಯಾಲಯವಿದೆನಿಸಿ ||
ಹಾಳು ಜರೆಯಡಸಿತೀ | ವೇಳೆ ಸುತರಭ್ಯುದಯ |
ದಾಲೋಚನಯದೊಂದೆ | ಮೇಲೆ ಮೇಲುದಿಸಿ || ೨೦ ||
ಕೆಟ್ಟ ವಿಧಿಯೆಂತಿಹುದೊ | ಪಟ್ಟವನು ರಾಘವಗೆ |
ಕಟ್ಟುವೆನು ನಾಳೆಯೆ ವ | ಶಿಷ್ಟ ಮೊದಲಾಗಿ ||
ಇಷ್ಟಭೂಸುರರಖಿಲ | ಸೃಷ್ಟಿಪರ ಬರಿಸುತ ವಿ |
ಶಿಷ್ಟ ಸಂಗ್ರಹವ ಸಂ | ಘಟ್ಟಿಸನುವಾಗಿ || ೨೧ ||
ಭರತ ಶತ್ರುಹರಿಲ್ಲ | ಕರೆವಡೀಗಳವಲ್ಲ |
ಮರುಗಿ ಫಲವಿಲ್ಲ ಸಿಂ | ಗರಿಸು ಪುರವೆಲ್ಲ ||
ಅರಸನುಕ್ತಿಗೆ ಹರುಷ | ಭರದಿ ಸಭೆಯೋಲಾಡೆ |
ತರಳ ರಾಮನ ಬರಿಸು | ತೊರೆದನೀ ಸೊಲ್ಲ || ೨೨ ||

**ಸೌರಾಷ್ಟ್ರ - ತ್ರಿವುಡೆ**
ಮಗನೆ ಬಾ ಬಾ ಸುಗುಣ ವಾರಿಧಿ |
ಖಗಕುಲಾನ್ವಯದೀಪ ನೀನೀ |
ಜಗತಿಯನು ಪಾಲಿಪುದು ಪೂರ್ವಜ | ರುಗಳ ಮಿಗಿಸಿ || ೨೩ ||
ತಾತ ಬಿನ್ನಹ ಖ್ಯಾತರಿಂಗಹ |
ಜೈತ್ರ ಯಾತ್ರೆಯ ಗೈದು ಕ್ಷಾತ್ರಿಯ |
ನೀತಿಯಲಿ ಕೈಗೊಂಬೆನವಸರ | ವೇತಕೀಗ || ೨೪ ||
ಲೇಸು ಮನುಜ ಸುರಾಸುರರು ಮಣಿ |
ದಾ ಸದಾಶಿವಧನುವ ಮುರಿದವ |
ಗೇಸರದು ಭೂತಳವ ಜೈಸುವು | ದೇ ಸುನೀತ || ೨೫ ||
ಲೋಕಕಂಟಕರಿಹನೇಕರ |
ನೀಕವನು ಮರ್ದಿಸದೆ ರಾಜ್ಯವ |
ಸ್ವೀಕರಿಸೆ ಬಳಿಕಹುದೆ ಮತ್ಪಿತ | ವ್ಯಾಕುಲವಿದು || ೨೬ ||
ಶೀಲವಹುದೆಲೆ ಬಾಲ ತನ್ನಯ |
ಬಾಳದಕೆ ಪ್ರತಿಕೂಲವವನಿಯ |
ಪಾಲನೆಯ ಕೈಕೊಂಬುದೀಗಳೆ | ನಾಳೆಯೆನದೆ || ೨೭ ||

**ಭಾಮಿನಿ**
ಎನೆ ಪ್ರಸಾದವೆನುತ್ತ ರಾಘವ |
ಜನಕನಡಿಗಭಿನಮಿಸಿ ತೆರಳಲು |
ಜನಪನಪ್ಪಣೆಯಲಿ ಸುಮಂತ್ರನು ಬರೆಸಿ ಲೇಖನವ ||
ಮುನಿವಸಿಷ್ಠಾದ್ಯಖಿಲ ಭೂಸುರ |
ಗಣವ ನೃಪರಾಪ್ತೇಷ್ಟ ಬಂಧುಗ |
ಳನು ಕರೆಸಿ ಶೃಂಗರಿಸಿ ಸಂಭಾರಗಳ ನೆರಹಿದನು || ೨೮ ||

**ವಾರ್ಧಕ**
ಮೊದಲೆ ಸಿರಿಸುಖನಿಕರದಾಗಾರಮಾ ನಗರ |
ವದರೊಳು ರಘೂದ್ವಹನ ಪಟ್ಟ ಸಂಘಟ್ಟ ಸಂ |
ಪದವ ಬಣ್ಣಿಸಲಹಿಪಗಳವಲ್ಲ ಕಳವಲ್ಲ ವಿಧಿ ವಿಷ್ಣು ಸುರಪುರಗಳ ||
ಬಿದಿಗಿಕ್ಕುತತುಲ ರಂಜನಗಳಿಂ ಜನಗಳಿಂ |
ದಧಿಕತರ ಶಿಲ್ಪ ವೈಚಿತ್ರ್ಯದಿಂ ಚಿತ್ರದಿಂ |
ಸದನಂಗಳಖಿಲ ಸೌರಂಭದಿಂ ರಂಭದಿಂ ಕೆದರಿ ಶೋಭಿಸುತುದಯದಿ || ೨೯ ||

**ಭಾಮಿನಿ**
ನೆರದರಖಿಲಾಪ್ತರುಗಳವನೀ |
ಶ್ವರರು ಭೂಸುರ ಪರಮಹಂಸರ |
ನೆರವಿಯಲಿ ಕಿಕ್ಕಿರಿದುದಾಪುರ ಪರಿಜನಾದಿಗಳ ||
ಮೊರೆವ ಮಂಗಲವಾದ್ಯರವಕೆ |
ಚ್ಚರಿತು ಮಂಥರೆ ಕಂಡಿದೇನ |
ಚ್ಚರಿಯೆನುತ ಕಾತರದಿ ಪೊರಟಳು ರಾಜ ಬೀದಿಯಲಿ || ೩೦ ||

**ಘಂಟಾರವ - ಅಷ್ಟ**
ಏನಿದೇನೆಂದು | ಕೇಳುಂತ್ತೈತರೆ ಸರ್ವ ||
ರಾನನವ ತಿರುಹಿದರಮಂಗಳ | ತಾನಿದೆನುತಲಸಹ್ಯದಿ || ೩೧ ||
ಬಳಿಕ ಸೀತೆಯ | ದಾಸಿಯ ಕಂಡಿದ ||
ರೊಳವನರಿವುತ ಕುಬ್ಜೆ ಬಾಂದಳ | ಕಳಚಿತೆನೆ ಕಳವಳಿಸುತ || ೩೨ ||
ಉದಯವಾಯ್ತೆನ | ಗಾಗಿಯೆ ಭರತನ ||
ಸಡಗರಕ್ಕೆಡೆಯೆನಿಸಿ ರವಿ ಶಶಿ | ಪೊಡವಿ ಸಚರಾಚರಗಳು || ೩೩ ||
ರಾಮಗೀಯಲು | ಬಿಡೆನೀಗ ಜಗದಭಿ ||
ರಾಮ ಭರತನ ಸಿರಿಯನಿದ ಸು | ತ್ರಾಮ ತಡೆದಡೆನುತ್ತಲಿ || ೩೪ ||

**ವಾರ್ಧಕ**
ಬಿಲ್ಲು ಬಾಗಿನ ತೊನ್ನು ಚುಕ್ಕೆಗಳ ಕಾಳ್ಮೈಯ್ಯ |
ಪಲ್ಲುದುರಿ ಜೊಲ್ಲಿಳಿವ ಬಚ್ಚು ಬಾಯಿಯ ಸ್ಥವಿರ |
ಟೊಳ್ಳುಕಾಯದ ಗೂಳಿಹಿಣಿಲಂತೆಸೆವ ಗೂನ ಕುಳ್ನಿಲುವ ಮರಡು ಮೊಗದ ||
ಬೆಳ್ವಕ್ಕಿ ತುಪ್ಪುಳೆನೆ ನೆರೆತು ಕೆದರಿದ ನವಿರ |
ಜೊಳ್ಳುಗೆನ್ನೆಯ ಮೆಳ್ಳು ದೃಷ್ಟಿಯ ತ್ರಿವಕ್ರೆ ತಾ |
ನೆಲ್ಲ ವೈರೂಪ್ಯ ಮೈವೆತ್ತು ಬಹುದೆನೆ ತೆರಳಿ ಚೆಲ್ವೆ ಕೈಕೆಯ ಕಂಡಳು || ೩೫ ||

**ಭಾಮಿನಿ**
ಕೆಟ್ಟೆ ಹಾ ಹಾ ಕೈಕೆ ಕಂದೆರೆ |
ಸೃಷ್ಟಿಗುರುಳಿದುದಿಷ್ಟ ಗೋಪುರ |
ಪಟ್ಟವದ ಕೌಸಲ್ಯೆಯಣುಗಂಗೀವರಿಂದಕಟ ||
ಕಷ್ಟವೆನೆ ಭರತಾಂಬೆಯತಿ ಸಂ |
ತುಷ್ಟಿಯಲಿ ಶುಭವಾರ್ತೆಯೆನುತ ವಿ |
ಶಿಷ್ಟ ಮೌಕ್ತಿಕಹಾರವಿತ್ತಳು ಪಾರಿತೋಷಕವ || ೩೬ ||

**ತೋಡಿ - ಮಟ್ಟೆ**
ಸಿಡುಕಿ ಸರವನಿಡುಕಿ ಗೂನಿ | ನುಡಿದಳೆಲೆಗೆ ಜಡಮತಿಯಲಿ ||
ಪಡೆದ ಸುತನ ಮಡುಹಿದೆಯಲ | ದಡಿಗ ರಕ್ಕಸಿ || ೩೭ ||
ಕಡುಗಿ ಕೈಕೆ ನುಡಿದಳರಿಯೆ | ಬಡಿದು ಕಳೆವರಸುರೆ ನಿನ್ನ ||
ಮುದುವಿ ಮುಚ್ಚು ಬಾಯ ಭೇದ | ಹುಡುಗರೊಳುಂಟೆ || ೩೮ ||
ಧರಣಿ ರಾಮಗಾಗಲವನ | ಚರಣಸೇವೆ | ಭರತಗಹುದು ||
ಮರುಳೆ ನೀ ಕೌಸಲ್ಯೆ ತೊತ್ತೆಂ |ದರಿಯೆಯಾ ಕೈಕೆ || ೩೯ ||

ಆಗಲೊಳ್ಳಿತಾ ಗರುವನು | ತ್ಯಾಗಶೀಲ ಪಿರಿಯನಿಳೆಯ ||
ಭೋಗವಡೆಯೆ ಕುಂದೇನೆಮಗೆ | ಗೂಗೆ ತೊಲಗೆಲೆ || ೪೦ ||

**ಭಾಮಿನಿ**

ನೀನರಿಯೆ ಬೇನೆಯಲಿ ಭರತನು |
ತಾನೆ ಮೊದಲುದಿಸಿದನು ಪಟ್ಟದ |
ರಾಣಿಯಲಿ ಸಂಜನಿಸಿ ರಾಘವ ಜ್ಯೇಷ್ಠನಾದನಲ ||
ಆ ನರಾಧಿಪ ಗುರು ಸುಮಂತ್ರರ |
ಹೀನ ತಂತ್ರಗಳಿಂದು ನಿನ್ನಯ |
ಸೂನುವನು ಹೊರತಳ್ಳಿ ರಾಮಂಗೀವರೊಡೆತನವ || ೪೧ ||

**ಶಂಕರಾಭರಣ - ಏಕ**

ಆಳಿಯ ದುರ್ನುಡಿಯೊ ವಿಧಿಯ | ಲೀಲೆಯೋ ಲಂಕೇಶಾದಿಗಳ ||
ಭಾಳಲಿಪಿಯೊ ನೃಪತಿಗಿರ್ದ | ಹಾಳು ಶಾಪವೊ || ೪೨ ||
ಆಲಿಸಿದಳಾ ನುಡಿಯ ಕೈಕೆ | ಆಲಿಗಳ್ ಕೆಂಪಡರೆ ತನ್ನ ||
ಆಳಿದನಲಿ ಮುಳಿದು ಮುಂದಿ | ನಾಲೋಚನೆಗಳ || ೪೩ ||
ಅರುಹು ತನಗೆ ಹಿತವರನ್ಯ | ರಿರರು ಮತ್ತೀ ಧರೆಯೊಳೆಂದು ||
ಭರದಿ ಬಿಗಿದಪ್ಪಿದಳು ಕೈಕೆ | ಜರಠೆಯಂಗವ || ೪೪ ||
ಮರೆತಯ ಭೂವರನು ನಿನಗೆ | ಮರುಳುಗೊಂಡು ವರಗಳೆರಡ ||
ಕರುಣಿಸಿಹನು ಪರಿಣಯದ | ವರ ಮುಹೂರ್ತದಿ || ೪೫ ||
ಭರತಗೊಂದು ವರದಿ ರಾಜ್ಯ | ಸ್ಥಿರತೆಗಿಳೆಯನಗಲಿ ರಘುಜ ||
ತೆರಳಲೀರೇಳ್ ವರುಷ ವಚನ | ವೆರಡಕಡವಿಗೆ || ೪೬ ||

**ಕಂದ ಪದ್ಯ**

ಈ ಪರಿಯುಸುರಲ್ ಮಂಥರೆ |
ಭಾಪೆನುತಲಿ ಕೈಕಾರಾಣಿ ತಾನತಿ ಮುದದಿಂ ||
ಓಪನ ಕರೆಸುವೆನೆನುತಲೆ |
ಕೋಪಗೃಹವ ನೆರೆ ಪೊಕ್ಕಳ್ ಕಡುಜವದಿಂದಂ || ೪೭ ||

**ಸಾಂಗತ್ಯ - ರೂಪಕ**

ಇತ್ತ ರಾಮನ ಪಟ್ಟ | ದುತ್ಸವಾಂಗಣದಿ ವಿ |
ಪ್ರೋತ್ತಮರಖಿಲ ನಾಡಿಗರು ||
ಮತ್ತೆ ಸಾಮಂತ ಸ | ಮಸ್ತಾಪ್ತ ಪರಿಜನ |
ಮತ್ತಕಾಶಿನಿಯರೊಪ್ಪಿದರು || ೪೮ ||
ನೆರೆದ ಸರ್ವರನುಪ | ಚರಿಸುತರಸ ಮೋಹ |
ದರಸಿ ಕೈಕೆಯ ಕಾಣದಲ್ಲಿ ||
ಕರಗಿ ಚಿತ್ತದೊಳೇನೋ | ಸ್ಮರಿಸಿ ಬಂದವಳಂತಃ |
ಪುರವ ಕಂಡಡೆ ಶೂನ್ಯವಲ್ಲಿ || ೪೯ ||
ತಿರುಗಿ ಕಂಡನು ಕ್ರೋಧಾ | ಗೃಹವ ಪೊಕ್ಕಲ್ಲಲ್ಲಿ |
ಹರಿದು ಚೆಲ್ಲಿಹ ತೊಡವುಗಳ ||
ಬರಿ ನೆಲನೊಳು ಮುಸು | ಕಿರಿಸಿ ಕಟ್ಟುಗ್ರದಿಂ |
ದರೆ ಬಂಡೆಯೆನೆ ಮಲಗಿಹಳ || ೫೦ ||

**ಭಾಮಿನಿ**
ಪೃಥ್ವಿಪತಿ ಕಾತರಿಸಿ ಕಾಂತೆಯ |
ನೆತ್ತಿ ತನ್ನಂಕದಲಿ ಕುಳ್ಳಿರಿ |
ಸುತ್ತವಳ ತಳ್ಕಿಸುತ ಕಂಬನಿಯೊರಸಿ ಮುದ್ದಿಸುತ ||
ಮತ್ತಧಿಕ ಸಂತೈಸುತಿರೆ ಕೆಲ |
ಕೊತ್ತಿ ಮೊಗದಿರುಹಿದಳು ರವಿಕುಲ |
ಸತ್ತಮನು ಮಗುಳೆಂದನುರು ಮೃದು ಮಧುರ ವಚನದಲಿ || ೫೧ ||

**ಸಾವೇರಿ - ರೂಪಕ**
ಈ ಶೋಕವೇನೆ | ಕೋಕನಯನೆ | ಶ್ರೀಕರಾನನೆ ||
ನಾ ಕರುಣಿಪೆನೇಕೆ ತಿಳುಪೆ | ಲೋಕ ಮೂರನೆ || ಈ ಶೋಕ || ೫೨ ||
ಶ್ರೀರಾಮನೆಂತೊ | ಪುರುಷರೊಳು ನೀ | ಕಾಮಿನಿಯರಲಿ ||
ಪ್ರೇಮ ಮೂರ್ತಿ | ಯೈಸೆ ತನಗೀ | ರೇಳ್ಮಹಿಗಳಲಿ || ಈ || ೫೩ ||
ಆ ಕಂದ ರಾಮ | ಚಂದ್ರನಾಣೆ | ಸಂದುದೆಂದರಿ ||
ಬಂದ ಬವಣೆ | ಯಂದವರುಹಿ | ಸಿಂದು ಸುಂದರಿ || ಈ || ೫೪ ||

**ಶಂಕರಾಭರಣ - ತ್ರಿವುಡೆ**
ಎಂದ ನುಡಿಗಾ ಕೈಕೆಯಿನಿಯನ | ಕಂಧರವನೂ | ತಳ್ಕಿಸಿ ||
ಹಿಂದಣದ ಸ್ಮರಿಸೆಮ್ಮ ಪ್ರಣಯ ಪ್ರ | ಬಂಧದನುವ || ೫೫ ||
ಮರೆತೆಯಾ ವರವೆರಡನಿತ್ತುದ | ಕರುಣಿಸುವೆ ನೀ | ನಾದರೆ ||
ಧರೆಯ ಭರತನಿಗೀವುದಾರ್ಜಿತ | ಪರಿಕರದಲಿ || ೫೬ ||
ಅಟ್ಟು ವರ ಮತ್ತೊಂದಕೀರೇಳ್ | ವತ್ಸರಾ ಮುನಿವೇಷದಿ ||
ಪಟ್ಟದರಸಿಯ ಸುತನ ಗಹನಕೆ | ಮೊಟ್ಟ ಮೊದಲು || ೫೭ ||

**ಭಾಮಿನಿ**
ಆ ಲತಾಂಗಿಯ ಕಠಿಣ ವಚನ ಕ |
ರಾಳ ವಿಷವಾವರಿಸುತವನೀ |
ಪಾಲನಖಿಲೇಂದ್ರಿಯದೊಳುರಿ ಡಾವರಿಸಿ ಕಾತರಿಸಿ ||
ಮೇಲೆ ವಶವಳಿದಶನಿ ಹೊಯ್ಲಿಗೆ |
ಬೀಳ್ವ ಹೆಮ್ಮರನಂತೆ ಮೂರ್ಛೆಯ |
ತಾಳಿ ದೊಪ್ಪನೆ ಕೆಡೆವುತೊಯ್ಯನೆ ತಿಳಿದು ಹಾಯೆನುತ || ೫೮ ||

**ಕಂದ ಪದ್ಯ**
ಅಳಿಗಾಲದೊಳಮೃತ ಹಲಾಹಲ |
ಸಲೆ ಪಥ್ಯಮಪಥ್ಯಮಾಪ್ತರಹಿತರ್ ಜಗದೊಳ್ ||
ಚಲುವದು ವಿಕೃತ ಕುರೂಪಂ |
ತಿಳಿಯಲ್ ನಾರಿ ಮಾರಿಯಾದಳಿಂದೆನಗಕಟ || ೫೯ ||

**ನೀಲಾಂಬರಿ - ಆದಿ**
ಚಿಂಣರಿಲ್ಲ | ದನ್ವಯಾ ವಿ | ವರ್ಣವಾಗೆ ಮಖದಿ ||
ಸ್ವರ್ಣತೇಜ | ರುದಿಸೆ ನಾಲ್ವ | ರನ್ನು ಕೂಡಿ ಸುಖದಿ || ೬೦ ||
ಬಾಳಲೆನ್ನ | ಹಾಳು ಪುಣ್ಯ | ಕೋಳುಹೋಯ್ತು ಮುನ್ನ ||
ಖೂಳನೆಂತಾ | ನಗಲಿ ಸುತನ | ತಾಳಲಿ ದುರ್ವ್ಯಸನ || ೬೧ ||
ಮಲಿನವಾಯ್ತೀ | ಕುಲದ ಖ್ಯಾತಿ | ಖಿಲ ನಾ ಜನ್ಮವೆತ್ತಿ ||
ಇಳೆಗೆ ಭಾರ | ನೆಂದು ಹಲುಬೆ | ಲಲನೆಗಾಯ್ತು ಭೀತಿ || ೬೨ ||

**ಕಮಾಚ್ - ರೂಪಕ**
ತರಹರಿಸುತಲೆರಗಿ ನುಡಿದ | ಳರಸ ನಿನ್ನಯ ||
ಕರುಣವೊಂದೆ ಸಾಕು ವರವ | ದಿರಲಿ ನಿರ್ಣಯ || ೬೩ ||

ಮರುಕಬೇಡವೆನುತ ಕರವ | ಪಿಡಿಯೆ ಸ್ನೇಹದಿ ||
ಅರಸಗಾಯ್ತು ಮೂದಲಿಕೆಯ | ತೆರದೊಳಾನುಡಿ || ೧೪ ||
ನಿಲ್ಲದಿದಿರು ತೊಲಗು ಪಾಪಿ | ಖುಲ್ಲೆ ನಿನ್ನಯ ||
ಚಲ್ವಿಗೊಲಿದು ಕೆಟ್ಟೆನಲ್ಲ | ದಿಲ್ಲ ದುರ್ಣಯ || ೧೫ ||
ಮಿರುಪ ಹಾರವೆನುತ ಕೊರಳೊ | ಳುರುಳುಗಣ್ಣಿಯ ||
ಧರಿಸಿದಂತೆ ಸುಮದ ಬೆಮೆಯೊಳ್ | ಶಿರದೊಳಹಿಣಿಯ || ೧೬ ||
ಮುಡಿವ ವೋಲು ಮಂಚವೆನುತ | ಮಡುವ ಧುಮುಕುವ ||
ಜಡರ ಗತಿಗೆ ನಡೆದೆ ಕೈವಿಡಿದು ಕುವಪುವ || ೧೭ ||

**ಭಾಮಿನಿ**

ಖೋಡಿ ರಕ್ಕಸಿ ಮೊದಲು ವರಗಳ |
ಬೇಡಿ ಬೇಡೆಂದುಸುರಿ ಕೀರ್ತಿಯ |
ನೀಡಿರಿದು ವೋಡಿಸುವೆಯಾ ರೌರವಕೆ ಪಿತೃಗಳನು ||
ಕಾಡಿಗಟ್ಟುವ ನೆವದಿ ರಘುಜನ |
ದೂಡುತಿಹೆ ಮಾಂಗಲ್ಯವನು ಕುಲ |
ಗೇಡಿ ನಿನ್ನಿಂದಾಯ್ತು ಹರಿದರಿಯೆನಗೆ ಕೆಲ ಬಲದಿ || ೧೮ ||

**ಸೌರಾಷ್ಟ್ರ - ತ್ರಿವುಡೆ**

ನುಡಿಗೆ ಕುದಿದಳು ಕೈಕೆ ಬಾಲವ |
ನೊದೆದ ನಾಗಿಣಿಯೆನೆ ಮಹೋಗ್ರದ |
ಹೆಡೆಯರಳಿ ವಾಗ್ವಿಷವನುಗುಳಿದ | ಳದುಭುತದಲಿ || ೧೯ ||
ಬೇಡು ನೀನೆಂದಿತ್ತೆ ಭಾಷೆಯ |
ಬೇಡಲದಕೆದೆಗರಗಿ ಮರುಗಿದೆ |
ಬೇಡವೆನೆ ಮತಿಗೆಟ್ಟು ಜರೆವೆಯ ಮೂಢರಂತೆ || ೨೦ ||
ಭಾಷೆಗಳುಕುವರುಂಟೆ ಸೂನೃತ |
ಭಾಷಿಗಳು ರವಿಕುಲಜರವದಿರ |
ವಾಸಿಗೆಡಿಸದೆ ಸಲಿಸು ನುಡಿದಭಿ | ಲಾಷೆಗಳನು || ೨೧ ||

**ಭಾಮಿನಿ**

ವರ್ಮವಿಡಿದಿಂತೆಂದಡಾ ಸಹ |
ಧರ್ಮಿಣಿಯ ನುಡಿಯಲಗು ರಾಯನ |
ಮರ್ಮದಲಿ ಥಟ್ಟುಗಿಯೆ ನೊಂದತಿ ಧರ್ಮಸಂಕಟದಿ ||
ಉಮ್ಮಳಿಸಿ ಮೈಮರೆಯೆ ಮಂಥರೆ |
ಬೊಮ್ಮಪಿತಗಿದನರುಹಲೇನಿದು |
ಕರ್ಮಗತಿ ಯೆನುತೈದಿ ರಾಘವನೆತ್ತಿದನು ಪಿತನ || ೨೨ ||

**ಹಿಂದೂಸ್ತಾನಿ - ರೂಪಕ**

ತಾತ ಚಿಂತೆ ಏತಕಿದುವೆ |
ಜಾತನಿರಲು ಸನಿಹದಿ ||
ಮಾತೆ ಕುಪಿತಳಾಗಿ ಕುಳಿತ ರೀತಿಯರುಹು ಕರುಣದಿ || ೨೩ ||
ವಾಸುಕೀಯ ಶಿರದ ಮಣಿಯೊ |
ಳಾಸೆಯಾಯ್ತೆ ಜನಕನೆ ||
ಆ ಸುರೇಂದ್ರಗಜವ ತರುವೆ | ನೀ ಸಮಯದಿ ಬೇಕೆನೆ || ೨೪ ||
ಸೀತೆ ಮನ್ಮನ ಪ್ರೀತೆ ಸರುವ |
ಪೂತೆ ದ್ವಿಕುಲ ಪಾವನೆ ||
ಪ್ರೀತಿಯಹುದೆ ನಾ ತೊರೆವೆ ಮ | ಹಾತಿಶಯದ ತನುವನೆ || ೨೫ ||

**ಕಂದ ಪದ್ಯ**
ರಾಘವನಿಂತೆನೆ ದ್ವಿಗುಣಿತ |
ಮಾಗೆ ಶೋಕ ನೃಪ ಮೂಗನಾಗಿ ಕಂಬನಿಯಿಳುಹಲ್ ||
ಆಗಮವರಿದಪುದೆಂತೆನು |
ತಾ ಗರುವಂ ಮಾತೆಯನೀಕ್ಷಿಸೆ ನಗುತೆಂದಳ್ || ೭೬ ||

**ಸುರುಟಿ - ಏಕ**
ಕೇಳು ಸುಗುಣ ಶೀಲ | ವಿವರವ | ಪೇಳುವೆ ಭೂಪಾಲ ||
ತಾಳಿದ ದುಗುಡದ | ಮೂಲವ ನಿನಗದ |
ಪೇಳಲಭೀಷ್ಟವ | ಪಾಲನೆ ಗೈವೆಯ || ೭೭ ||
ಜನುಮದಾತನ ನುಡಿಯ | ಮೀರುವ | ನಣುಗನೆ ಕೇಳ್ ಸ್ಥಿತಿಯ ||
ಎಣಿಸಲವನಮಲ | ಕೆಣೆಯಹ ಸತ್ಸುತ |
ಮನವರಿದೆಸಗುವ | ನೆನಗೊಲಿದುಸುರೌ || ೭೮ ||
ವರವೆರಡೆನಗಿತ್ತ | ಒಂದಕೆ | ಭರತಗವನಿ ಪಟ್ಟ ||
ಕರುಣಿಸಿದನು ವನ | ವರುಷ ಚತುರ್ದಶ |
ತರಳ ನಿನಗೆ ಪರಿ | ಯರುಹಲು ಮರುಗುವ || ೭೯ ||

**ಮಧುಮಾಧವಿ - ತ್ರಿವುಡೆ**
ಧನ್ಯನಾದೆನು ತಾತ ಮರುಗದಿ |
ರನ್ಯನೇ ಭರತಾಂಕನಾಳಲಿ ||
ಕನ್ನೆ ಚಿಕ್ಕವಳವ್ವೆ ನಿರ್ಬಲ |
ಳಿನ್ನು ಸಲಹಿಕೊ ಜತನದಿ || ೮೦ ||
ಒಡಲು ಸತಿಸುತ ಪೊಡವಿ ಸಿರಿ ಸುಖ |
ವಡಗುವವು ಋಣದೊಡನೆ ದಿಟ ಮಿಗಿ ||
ಲೊಡೆತನದ ಬದಲೆಮಗೆ ಬಡತನ |
ದಡವಿ ಸಾವಿರ ಗುಣದಲಿ || ೮೧ ||
ಎನುತ ಬಲಬಂದೆರಗಿ ಭಕ್ತಿಯೊ |
ಳನುಪಮನು ನಡೆತಂದು ಜನನಿಗೆ ||
ಮಣಿಯೆ ಬಿಗಿವಡೆದೆತ್ತಿ ರಿಕ್ತಗ |
ಮನವಿದೇನೆನಲೆಂದನು || ೮೨ ||

**ಭಾಮಿನಿ**
ಮಾತೆ ಕೈಕೆಯ ಮಾತಿನಲಿ ಸಹ |
ಜಾತ ಭರತಂಗವನಿಪಟ್ಟವ |
ತಾತನೊಲಿದೆನಗಿತ್ತ ದಂಡಕ ಧಾತ್ರಿಯೊಡೆತನವ ||
ಜಾತನನು ಹರಸೆನಲು ವಜ್ರಾ |
ಘಾತದಲಿ ಹಾಯೆನುತುರುಳೆ ರಘು |
ನಾಥನುಪಚರಿಸುತಿರಲೂರ್ಮಿಳೆಯಾಣ್ಮ ಖಾತಿಯಲಿ || ೮೩ ||

**ಭೈರವಿ - ಅಷ್ಟ**
ಏನಗ್ರಭವ ಪಿತನು | ಕಾಮುಕನಾಗಿ |
ಮಾನಿನಿಯೊಳಗಾದನು || ಮಾನ್ಯನಲ್ಲವ ಮತಿ |
ಗೇಡುಕ ಲಂಪಟ ಧರ್ಮ | ಹೀನ ಶಿಕ್ಷಾರ್ಹನಯ್ಯ || ೮೪ ||
ಪೂಜ್ಯರೆಂಮನ್ವಯದಿ | ಜ್ಯೇಷ್ಠನ ಬಿಟ್ಟು |
ರಾಜ್ಯವ ದುರ್ಣಯದಿ || ತ್ಯಾಜ್ಯ ಕಿರಿಯರಿಗಿತ್ತ |
ಕಜ್ಜವಿಪ್ಪುದೆ ಪಿರಿ | ಪ್ರಾಜ್ಞ ನಂದನನಿರಲು || ೮೫ ||
ಮುಡಿಯ ತುಡುಕಿ ವಿಧಿಯ | ಭಾಳದ ಲಿಪಿ |
ತೊಡೆವೆನಾಹವದಿ ಕೈಯ್ಯ || ತಡೆವವದಿರ ನೆಲ |
ಕಿಡುವೆ ಕೈಕೆಗೆ ಸರ್ವ | ಪೊಡವಿ ಮಾರಿತೆ ರಾಘವ || ೮೬ ||

**ಬೇಗಡೆ - ತ್ರಿವುಡೆ**
ಏತಕೀಪರಿ ಮುನಿಸು | ಸೈರಿಸು ಸಹ |
ಜಾತ ಸುಗುಣನೆನಿಸು || ಪಲ್ಲ ||
ಏತಕೀಪರಿ ಮುನಿಸು ಶಸ್ತ್ರ |
ವ್ರಾತ ಪಂಡಿತನಹುದು ಮಗುಳಭಿ |
ಘಾತದಲಿ ನಾ ಭೀತನೇ ಗುಹ |
ತಾತವಿಧಿ ಪುರುಹೂತರಳುಕುವ || ರೇತಕೀಪರಿ || ಅ. ಪಲ್ಲ ||
ಆದರೋರ್ವನ ಸೌಖ್ಯಕೆ | ಕಾದಲು ನಿಜ | ಸೋದರರೊಳು ಮರ್ತ್ಯಕೆ ||
ಹಾದಿಯ | ತಪ್ಪಿಸಿದನಹೆ ದಾಯಾದಿಯ | ಮಾತ್ಸರ್ಯ ಶಿಖಿ ಜಗ |
ದಾದಿಯ | ಸುಟ್ಟುರುಹುವುದು ನಿ | ವ್ಯಾಧಿಯ || ಕಾನನವ ಪೊಗಲು ||
ಮೇದಿನಿಗೆ ಹಿತಮಾದಪುದು ನಾ | ಪೋದರೊಂಟಿಗ ಖೇದವೇ ಮಹ |
ದಾದ ಸಿದ್ಧಿಗಳಾದಿ ಕಷ್ಟವ | ದಾದಡಲ್ಲವು ಸಾಧುವಿದು ಮಗು || ಏತಕೀಪರಿ || ೮೭ ||
ಸದರ ಲಂಪಟ ಕಾಮುಕ | ನಿಂದ್ಯನೆ ಪಿತ | ವಿದಿತ ಸುವ್ರತ ಧಾರ್ಮಿಕ ||
ಬಿದಿಯೊಳು | ಬೆರೆತರೆಯ ಕಲಿ ಹಲ ವಿಧಿಯೊಳು | ಮಾರ್ಮಲೆಯೆ ಬಲಿ ನಿರ |
ವಧಿಯೊಳು | ಬಿಗುಹಿಹುದೆನುತ ಶಿರ | ದುದಿಯೊಳು || ಹಾಯ್ದಪರೆ ಶಿಲೆಯ ||
ಪಡೆದವರ ಋಣವಧಿಕ ವಚನವ | ನಡೆಸದಣುಗನ ಪೊಡವಿ ಹೊರುವಳೆ |
ದುಡುಕದಿರು ತೆಗೆ ಹುಡುಗತನವೆಂ | ದೊಡನೆ ಕರುಣದಿ ಮುಡಿಯ ಸವರಿದ || ಏತಕೀಪರಿ || ೮೮ ||

**ಕಂದ ಪದ್ಯ**
ರಾಘವನಿಂತೆನೆ ವಿನಯದಿ |
ನಾಗಸರವ ಕೇಳ್ದಹಿಯೆನೆ  ಲಕ್ಷ್ಮಣ ಶಿರವಂ ||
ಬಾಗಲ್ ಕೌಸಲೆ ಚಿಂತಾ |
ಸಾಗರದೋಳ್ ತೇಲಾಡುತ ಗೋಳಿಡುತೆಂದಳ್ || ೮೯ ||

**ನೀಲಾಂಬರಿ - ರೂಪಕ**
ಪುತ್ರರ ಕಾಣದೆ ಮೊದಲಲಿ | ಹೊತ್ತಿದೆ ವ್ಯಥೆಯಲಿ ಹರಿಯೊಲಿ |
ದಿತ್ತನು ಸುಗುಣನ ಕಡೆಯಲಿ | ದೆತ್ತಣ ವಿಧಿಯಗಲಿ ||
ಹೆತ್ತ ಕರುಳ ಕಾಂತಾರದ | ಮೃತ್ಯುವಿಗಿತ್ತಪುದೆಂತಿದ |
ಮತ್ತಾರ್ಗೆಂಬೆನು ಪತಿ ಪದ | ತೊತ್ತು ಸವತಿಗಾದ || ೯೦ ||
ಧರೆಯನು ಪ್ರಿಯ ಸುತಗೀಯಲಿ | ಇರಲೇನ್ ಕೊರೆ ನೀನೂರಲಿ |
ಬರುವೆನು ತೆರಳಲು ಜತೆಯಲಿ | ಇರಲೆಂತಾನಗಲಿ ||
ಹರಣವನುಳಿದೀ ತನು ಬಾ | ಳಿರುವುದೆ ಕರೆದೊಯ್ಯೆನುತಲಿ |
ಮರುಗುವ ಜನನಿಯ ಕಂಬನಿ | ಯೊರೆಸುತ ಚಿನ್ಮಯನು || ೯೧ ||

**ನವರೋಜು - ಆದಿ**
ಸೈರಿಸು ಶೋಕವ ತಾಯೆ | ಮಮ |
ಕಾರವು ಲೋಕದ ಮಾಯೆ ||
ಸಾರಸಭವ ಲಿಪಿ | ಮೀರಲು ಪುನರಪಿ |
ಆರಿಗಳವು ಸಂ | ಸಾರವಸಾರ || ಸೈರಿಸು || ೯೨ ||
ಧರ್ಮವೆ ಶಾಶ್ವತವಮ್ಮ | ಸ |
ತ್ಕರ್ಮವೆ ಪಾಲಿಪುದೆಮ್ಮ ||
ನೆಮ್ಮುವುದರಮನೆ | ಗಿಮ್ಮಡಿ ವಿಪಿನದಿ |
ನೆಮ್ಮದಿಯದು ತಾ | ಯ್ನಿಮ್ಮುಡಿಲಹುದೌ || ಸೈರಿಸು || ೯೩ ||
ತಾತನ ನೇಮವು ತನಗೆ | ಮ | ತ್ತಾತನ ಸೇವೆಯು ನಿನಗೆ ||
ನೀತಿಗಳಿದು ವಿಪ | ರೀತವ ನೆನೆವರೆ |
ಮಾತೆ ಹರಸು ಬಹೆ | ನಾತಿ ವಿಲಂಬದಿ || ಸೈರಿಸು || ೯೪ ||

**ಭಾಮಿನಿ**

ಇಂತೆನುತ ಬಲಬಂದು ಪಣೆಯನು |
ಕಂತುಪಿತ ಪದಕೊತ್ತಿ ತದ್ರುಜ |
ವಂ ತಳೆದು ಕೈಮುಗಿದು ನಿಂತನು ತಾಯೆ ಕಳುಹೆನುತ ||
ಚಿಂತೆಯನು ತೊರೆದಾಗ ಬಾಲನ |
ಕಾಂತೆ ಗಲ್ಲವನಲುಗಿ ಮುದ್ದಿಸಿ |
ನಿಂತು ಶಿರ ವಾಸನಿಸಿ ಕಂಬನಿದುಂಬಿ ತಲೆವಾಗಿ || ೯೫ ||

**ವಾರ್ಧಕ**

ಎಲೆ ತಾಯೆ ಭೂದೇವಿ ಗಿರಿ ವನ ಸ್ಥಳಗಳಿರ |
ಎಲೆ ದೇವ ಹರಿ ಹರ ವಿರಿಂಚಿ ದಿಕ್ಪತಿಗಳಿರ |
ಎಲೆ ಭುಜಗ ಸುರ ದನುಜ ಮನುಜ ಖಗ ಮೃಗಗಳಿರ ಎಲೆ ನದಿನದಾದಿಗಳಿರ ||
ತಲೆ ಬಾಗಿ ಬೇಡುವೆನು ಸಲೆ ಧರ್ಮ ಪಥವಿಡಿದು |
ಹಳುವಕೈತರುವೆನ್ನ ಮೊಲೆಹಾಲ ಮೂರ್ತಿಯಂ |
ಒಲಿದು ರಕ್ಷಿಪುದಳುಪೆ ತಾಯಾಣೆ ನಿಮಗೆಂದು ತಿಳುಪಿ ಹರಸಿದಳಣುಗನ || ೯೬ ||

**ಕಂದ ಪದ್ಯ**

ಮಾತೆಯೊಳಪ್ಪಣೆಗೊಂಡಾ |
ಪೀತಾಂಬರನೈದಿದ ತಾನಿನಿಯಳ ಗೃಹಕಂ ||
ಪ್ರೀತನ ರಿಕ್ತಾಗಮವಂ |
ಕಾಂತಾಮಣಿ ಕಂಡಚ್ಚರಿಯೇನೆನಲೆಂದಂ || ೯೭ ||

**ಭಾಮಿನಿ**

ಧಾರಿಣಿಯು ಭರತಾಂಕಗೆನಗೆಂ |
ಟಾರು ವತ್ಸರ ವನವು ತಂದೆಯ |
ಚಾರುಮತ ಪೂರೈಸಿ ಬಹೆ ನೀನಿರು ನಿಜಾಲಯದಿ ||
ನಾರಿ ಬೆದರದಿರೆನಲು ಕೋಸಲ |
ಕಾರು ವಲಿದರು ರಘುಜಗಲ್ಲದೆ |
ನೀರ ನಿನ್ನಗಲಿಹೆನೆ ಬಹೆ ತಾನೆಂದಳಿಂದುಮುಖಿ || ೯೮ ||

**ಬೇಹಾಗ್ - ರೂಪಕ**

ವನವದೋರ್ವ | ಗೆನಗೆ ಮಿಕ್ಕ | ಜನಕೆ ಸಲ್ಲದಂಗನೆ ||
ಇನಿಯ ನಿನ್ನ | ವನಿತೆಗನ್ಯ | ತನುವಿಹುದೆ ಶುಭಾಂಗನೆ || ೯೯ ||
ಸಾವ ಪೂಜ್ಯ | ಹಿರಿಯರಡಿಯ | ಸೇವೆಗೈವುದನುಪಮ ||
ದೇವ ಸತಿಗೆ | ಪತಿಚರಣ | ಕಾವುದಿಹುದು ಸರಿಸಮ || ೧೦೦ ||
ವನಿತೆಯೊಡನೆ | ವನವು ಕಠಿಣ | ಮನೆಯೊಳಿರುವುದೇ ಘನ ||
ತನಗೆ ರಮಣ | ನೆದೆಯ ಹೊರತು | ಮನೆಯದೆಲ್ಲಿ ಮೋಹನ || ೧೦೧ ||

**ಕೇದಾರಗೌಳ - ಝಂಪೆ**

ತರುಣಿ ಬಿಡು ಛಲವಿದೇನೆ | ವನದೊಳುಣಿ |
ಸಿರದು ಫಲ ಜಲವು ಕಾಣೆ ||
ಒರಗಲರೆ ದರಗಿನೆಲೆಯು | ಬಿಡು ವ್ಯಥೆಯ |
ದುರುಳ ಮೃಗ ಖಳರ ನೆಲೆಯು || ೧೦೨ ||
ನಿನ್ನ ನೋವಿಂಗಲ್ಲದೆ | ಮರುಕವೆನ |
ಗಿನ್ನುಂಟೆ ನೀನಿರ್ದೊಡೆ ||
ಬಣ್ಣನೆಯ ವನ ತ್ರಿದಿವವು |
ನೀನಿರದ | ರಣ್ಯಕಿಮ್ಮಡಿ ಭವನವು || ೧೦೩ ||

ತರೆನು ತವ ವ್ರತಕೆ ಭಂಗ | ಸತಿಧರ್ಮ |
ವರಿಯೆಯಾ ಮಂಗಳಾಂಗ ||
ತೊರೆಯಲಾಗದು ಸರ್ವಥಾ | ಕೈ ಬಿಡದೆ |
ಕರೆದೊಯ್ಯೊ ಪ್ರಾಣನಾಥ || ೧೦೪ ||

**ಭಾಮಿನಿ**
ಉಸುರುತಿಂತಳುತೆರಗಿದಬಲೆಯ |
ಬಿಸಜಲೋಚನನೆತ್ತಿ ನೀನೆ |
ನ್ನುಸಿರು ಬಾಳ್ವೆನೆ ತೊರೆದಡಸುವನೆನುತ್ತವಳ ವೆರಸಿ ||
ವಸುಧೆಸುರರಿಗೆ ತಮ್ಮ ಭೂಷಣ |
ವಸನವಖಿಲವನಿತ್ತು ಪೊರಮಡ |
ಲಸುರ ಹರನಂಘ್ರಿಯಲಿ ಮುಡಿಯಿಕ್ಕಿದನು ಸೌಮಿತ್ರಿ || ೧೦೫ ||

**ಕಂದ ಪದ್ಯ**
ಅಡಿಗೆರಗಿದ ಸಹಭವನಂ |
ಜಡಜಾಂಬಕ ನೆಗಹಲ್ಕೇಳದೆಯಿಹನಂ ||
ಒಡಗೊಂಬೆನು ಬಹುದೆನುತಿವ |
ರೊಡನೈದಿದ ಪಿತನಾಜ್ಞೆಯ ಪಡೆಯಲ್ ಜವದೋಳ್ || ೧೦೬ ||

**ಕಾಂಬೋಧಿ - ಝಂಪೆ**
ಈ ತೆರದಿ ಮೂವರಿವ | ರೈತಂದು ನಮಿಸೆ ಭೂ |
ನಾಥ ಕೊರಳಪ್ಪಿ ಹಾಯೆನುತ ||
ಧಾತ್ರಿಗೊರಗಲು ನೆಗಹಿ | ಸಂತೈಸುತೊಡನೆ ರಘು |
ನಾಥ ಕಿರಿಜನನಿಗೊಂದಿಸುತ || ೧೦೭ ||
ವನಿತೆಯವರಜರೆನ್ನ | ನನುಸರಿಸಿದರೆ ನಿನ್ನ |
ಮನಕೆ ಹರುಷವೆ ನೀಡಪ್ಪಣೆಯ ||
ಎನೆ ರೋದಿಸುತ ಸುಮಂತ್ರನ ಕರೆದು ರಥದಿ ಸುತ |
ರನು ಕಳುಹಿ ಬಾರೆಂದ ರಾಯ || ೧೦೮ ||
ತಂದು ಕೊಟ್ಟಳು ಕೈಕೆ | ನಾರುಡೆಯ ಮೂವರದ |
ಕೊಂಡು ತಾಯ್ ಯಮಗೆ ದಿಟವೆನುತ ||
ವಂದಿಸುತ ಪಿತಗೆ ಬಲ | ಬಂದು ರಘುವರ ಪೊರಡೆ |
ಕಂಡು ನೃಪ ಮೂರ್ಛಿಸಿದನಳುತ || ೧೦೯ ||

**ವಾರ್ಧಕ**
ಮಂಗಲಂ ಮನೆಯನುಳಿವಂದದಿಂ ರಥದಿ ರಘು |
ಪುಂಗವಂ ಪೊರಡೆ ಕಂಡಖಿಲ ಪುರಜನರಳುತ |
ಸಂಗಡಿಸಿ ತೆರಳೆ ತಮಸಾನದಿಯ ದಂಡೆಯೋಳ್ ತಂಗಿರಲ್ಕಂದಿನಿರುಳು ||
ತಿಂಗಳೇಳಲು ಪೌರರನ್ನಗಲಿ ಜವದಿ ಹೊಳೆ |
ಯಂಗಳೆದು ಮಂತ್ರಿಯೊಡನೈದಿ ಗಂಗಾ ತಟದಿ |
ತುಂಗ ವಿಕ್ರಮ ತೇರನಿಳಿದು ಗುಹನಾತಿಥ್ಯಮಂಗೊಂಡು ಮರುವುದಯದಿ || ೧೧೦ ||

**ಭಾಮಿನಿ**
ತರಲು ನಾವೆಯ ಗುಹ ಸುಮಂತ್ರನ |
ಕರೆದು ನೀತಿಯನರುಹಿ ರಾಘವ |
ಪುರಕೆ ತೆರಳಿಸುತೇರ್ದನೊತ್ತಿಗರೊಡನೆ ಹರಿಗೋಲ ||
ಸರಿದು ಗಂಗೆಯ ದಾಟಿ ಗಿರಿ ಗ |
ಹ್ವರವ ಕಳೆವುತ ವಲ್ಮಿಕಾದ್ರ್ಯರ |
ದರುಶನಾಂತದಿ ಮೂವರಿರ್ದರು ಚಿತ್ರಕೂಟದಲಿ || ೧೧೧ ||

**ಕಂದ ಪದ್ಯ**
ಬಿಸಜಾಂಬಕ ನಗಲಿಕೆಯಿಂ |
ಮಸಣವ ಪುಗುವೊಲಯೋಧ್ಯೆಯ ಪೊಕ್ಕಾಸಚಿವಂ ||
ದಶರಥನೆಡೆಗೈತರೆ ಸುತ |
ರೊಸಗೆಯದೇನೆಂದಳಲುವ ನೃಪಗಳುತೆಂದಂ || ೧೧೨ ||

**ಕಾಂಬೋಧಿ - ಝಂಪೆ**
ಮರುಕ ಬೇಡೆಮಗಾಗಿ | ಭರತ ಸೇವಿಪ ಮುದದಿ |
ಬರುವೆನಾಜ್ಞೆಯ ನಡೆಸೆ ತಿರುಗಿ ||
ಅರುಹು ತೆರಳೆನುತೆನ್ನ | ತಿರುಹಿ ಗಂಗೆಯ ದಾಂಟಿ |
ಸರಿದರೆನೆ ಭೂಪನಿಳೆಗೊರಗಿ || ೧೧೩ ||
ಹಾ ರಾಮ ಮಮ ಪಂಚ | ಪ್ರಾಣ ದುಷ್ಟವಿರಾಮ |
ಹೇ ರಾಮ ಲೋಕಾಭಿರಾಮ ||
ಓ ರಾಮ ಸರ್ವಜನ | ಪ್ರೇಮ ಸುಂದರ ಶ್ಯಾಮ |
ಶ್ರೀರಾಮ ರವಿಕುಲಲಲಾಮ || ೧೧೪ ||
ಮರುಗುತೀಪರಿ ಚಿತ್ತ | ಜ್ವರ ವಿರಹ ಸನ್ನಿಯಲಿ |
ಕರೆದು ಕಂಡವರ ರಾಮೆನುತ ||
ಭರದೊಳಪ್ಪುತ ಮರಳಿ | ಕೆರಳಿ ಥೂಯೆಂದುಗುಳಿ |
ದುರುಳೆ ರಕ್ಕಸಿ ಕೈಕೆಯೆನುತ || ೧೧೫ ||

**ವಾರ್ಧಕ**
ಸೃಷ್ಟಿಪತಿಯಿಂತು ಮತಿವೈಕಲ್ಯವಾಂತು ದೆಸೆ |
ಗೆಟ್ಟೋಡುತಿರಲಾ ಸುಮಿತ್ರೆ ಕೌಸಲೆ ಮುನಿ ವ |
ಶಿಷ್ಠಾದಿಗಳು ಪಿಡಿದು ಪರ್ಯಂಕಕೊಯ್ಯೆ ಕೈಗೊಟ್ಟ ಕೈಕೆಯ ಕಾಣುತ ||
ಮುಟ್ಟದಿರು ತೊಲಗು ತಂನಿದಿರು ನಿಲದಿರು ಪಾಪಿ |
ದುಷ್ಟೆ ನಿನ್ನನು ಕಂಡನರ್ಥಕೆಡೆ ಗೈದವೀ |
ದೃಷ್ಟಿ ತನಗೇಕೆನುತ ಕಿತ್ತೆಸೆದು ಋಷಿ ಹತ್ಯ ಕೃತ್ಯಕಿದೆ ಶಾಪವೆನುತ || ೧೧೬ ||

**ಕಂದ ಪದ್ಯ**
ಎತ್ತಣ ಶಾಂತಿಯಿದೋ ಕಾಂತಿಯಿ |
ದೆತ್ತಣ ದಿವ್ಯ ಮೂರ್ತಿ ಸಂದರ್ಶನವಮಮ ||
ಪುತ್ರನು ನೀನೆಂದೆನಿಸಿದ |
ಕಿತ್ತೆನಿದೋ ಮಸ್ತಕವ ದೇವ ನಿನ್ನಡಿಗೆನುತಂ || ೧೧೭ ||

**ಭಾಮಿನಿ**
ಮಂಚದಿಂದಿಳೆಗುರುಳಿ ದಶರಥ |
ಪಂಚತುವವೈದಿದನು ಕಂಡರ |
ಸಂಚೆಗಮನೆಯರಳಲ ಗುರು ಸಂತೈಸಲಾ ರಾತ್ರಿ ||
ಮಿಂಚಿತತಿ ದುಃಸ್ವಪ್ನ ತಿಳಿದಾ |
ಕುಂಚಮಾನಸನಾಗುತುದಯದ |
ಮುಂಚೆ ಪೊರಟನು ಭರತನನುಜ ಸಮೇತ ನಿಜಪುರಕೆ || ೧೧೮ ||

**ಸೌರಾಷ್ಟ್ರ - ತ್ರಿವುಡೆ**
ತ್ವರಿತ ಗಮನದಿ ಬರುತಯೋಧ್ಯಾ |
ಪುರದ ಶೋಭೆಗೆ ಕರಗಿ ಜನನಿಯ |
ಚರಣಕೆರಗಿದಡೆತ್ತಿ ಪೇಳ್ದಳು | ಸರುವವನ್ನು || ೧೧೯ ||
ಕೇಳಿ ಹಾಯೆಂದುರುಳಲಾ ನಿಜ |
ಬಾಲಕನ ತೆಗೆದಪ್ಪಿ ಮುದ್ದಿಸಿ |
ಹಾಳು ವ್ಯಸನವ ತ್ಯಜಿಸುತವನಿಯ | ಪಾಲಿಸೆನಲು || ೧೨೦ ||

ನುಡಿಗೆ ಕಿಡಿ ಕಿಡಿಯಾಗಿ ತೊಲಗೆ |
ನ್ನಿದಿರು ನಿಲದಿರು ಪಾಪಿ ಹಾಲಿ |
ತ್ತೆದೆಯೊಳುಗುಳಿದೆ ವಿಷವ ನಿರಿಕಿಸೆ | ವದನವನ್ನು || ೧೨೧ ||
ಅಂಣನನು ವನಕಟ್ಟಿ ತಾತನ |
ಮಣ್ಣುಗೂಡಿಸಿದಸುರೆ ಪಾಪಿಗ |
ಳಿನ್ನು ನಿನಗೆಣೆಯಾರು ಕೆಟ್ಟೆನು | ನಿನ್ನೊಳುದಿಸಿ || ೧೨೨ ||
ತೊರೆವೆನಸುವಿದ ತರಳ ಪತಿಹತ |
ದುರಿತವೊದಗಲಿ ನಿನಗೆನುತ ಕೈ |
ಯಿರಿಸೆ ಖಡುಗಕೆ ತಡೆದ ಶತ್ರುಹ | ನೊರೆದು ನಯವ || ೧೨೩ ||

**ಭಾಮಿನಿ**

ಗುರುವಿನಪ್ಪಣೆಯಂತೆ ಪಿತಗು |
ತ್ತರ ವಿಧಿಯ ಪೂರೈಸಿ ಭರತನು |
ಪೊರಡೆ ರಘುವರನೆಡೆಗೆ ಪದವಿಡಿದಪ್ಪಿ ಕೈಕೇಯಿ ||
ತರಳ ಹಾ ಕೈ ಬಿಡದಿರೊರೆದಂ |
ತಿರುವೆನೆನೆ ಜತೆಗೊಂಡು ಕೌಸಲೆ |
ವರ ಸುಮಿತ್ರೆ ಸಮಸ್ತ ಪರಿಜನವೆರೆದು ಹೊರವಂಟ || ೧೨೪ |

**ವಾರ್ಧಕ**

ಭರದಿ ತಮಸಾನದಿಯನುತ್ತರಿಸುತಮರ ನಿ |
ರ್ಝರಿಣಿಯಂ ದಾಂಟಿ ನಡೆದಾ ಚಿತ್ರಕೂಟದೋಳ್ |
ಹರಿಯ ಪದ ಚಿಹ್ನಮಂ ಕಂಡು ಭಕ್ತಿಯಲಿ ದಿಂಡುರುಳಿ ಪಣೆಗಾರೇಣುವ ||
ಧರಿಸಿ ಮುಂದೆಸೆ ನೋಡಿ ರವಿಕೋಟಿ ಭಾಸದಿಂ |
ವರ ಜಟಾಮಂಡಲದಿ ಮೆರೆವ ರಾಘವನಡಿಗೆ |
ಶರಜಮಂ ಕಂಡೆರಗುವಾರಡಿಯೆನಲ್ ಭರತನೆರಗಿದಂ ಸಾಷ್ಟಾಂಗದಿ || ೧೨೫ ||

**ಭಾಮಿನಿ**

ಕರುಣದಿಂ ತೆಗೆದಪ್ಪಿ ರಾಘವ |
ಶಿರದಿ ಜಟೆ ವಲ್ಕಲವಿದೇನೈ |
ಅರುಹು ಕುಶಲವೆ ಯೆನಲು ಸಕಲವನೊರೆದ ಭರತಾಂಕ |
ಧರಣಿಜಾಪತಿ ಪಿತನ ಮರಣಕೆ |
ಮರುಗಿ ಜನಕಂಗೌರ್ಧ್ವದೈಹಿಕ |
ವಿರಚಿಸುತ ಮಾತೆಯರ ಮನ್ನಿಸುತಿರಲು ಗುರು ನುಡಿದ || ೧೨೬ ||

**ಬೇಗಡೆ - ಅಷ್ಟ**

ಏನು ರಾಘವ ರಾಜ್ಯ ಪಾಲನವೊ | ನಿತ್ಯಾತ್ಮ ಜನ್ಮವಿ |
ಧಾನ ವಿಸ್ಮೃತ ವಿಶ್ವಚಿಂತನವೋ ||
ಕಾನನದಿ ಬರಿ ಕಾಲ ಹರಣವೋ | ಆನತರ ರಕ್ಷಣವೊ ತಿಳುಹೆನ |
ಲಾ ನರಾಧಿಪನರಿತು ಗುರುಪದ | ಕಾನಿಸುತ ಸಿರಿ ಮುಡಿಯ ನೆಂದನು || ೧೨೭ ||
ಆಲಿಸೆನ್ನಭಿಮತವ ಗುರುವರ್ಯ | ಪಿತೃವಾಕ್ಯ ವನಸಂ |
ಚಾಲನವು ಮೇಣಾದ್ಯ ಕರ್ತವ್ಯ ||
ಮೇಲು ಮೇಲೀಜನನಿಯರ ಕಂ | ಗಾಲು ಭರತನ ಸಹಜ ಸ್ನೇಹ |
ವ್ಯಾಳ ಕಾಲ್ವಿಡಿದರೆಯು ಮನ್ಮನ | ದೇಳಿಗೆಗೆ ಪ್ರತಿಕೂಲವಿಲ್ಲೈ || ೧೨೮ ||

**ಕಂದ ಪದ್ಯ**

ಇಂತೆನೆ ಭರತಾಂಬಿಕೆ ಘನ |
ಚಿಂತೆಯೊಳೆರಗುತ ಕ್ಷಮಿಸೇಳ್ ಪುರಕೆನೆ ರಘುಜಂ |
ಸಂತೈಸುತಲಾಕೆಯ ತಾ |
ನೆಂತಾದರು ಬರೆನವಧಿಯೊಳೆನೆ ಮಾಂಡವಿಯಾಳ್ದಂ || ೧೨೯ ||

**ಸಾರಂಗ - ತ್ರಿವುಡೆ**
ಏನಿದೇನಣ್ಣ ದೇವ | ಮಾತ್ಸರ್ಯವಿ |
ದೇನು ಮಹಾನುಭಾವ | ಪಲ್ಲ ||
ಏನಿದಸಮಜ್ಞಾನಿ ಸೂನೃತ |
ವಾಣಿ ಸಮರ ತ್ರಾಣಿ ಘನ ಸ |
ನ್ಮಾನಿ ನಿರ್ಭಯ ಪಾಣಿ ವಾಂಛಿತ |
ದಾನಿ ತನ್ನೊಡನೀ ನಿರಾಕೃತಿ || ಏನಿ || ಅನು ಪಲ್ಲ ||
ವಿಕಟ ಕಾಮುಕ ಸ್ತ್ರೀಜಿತ | ಮುಪ್ಪಿನ ಮತಿ |
ವಿಕಲ ಮತ್ಪಿತ ದೂಷಿತ || ಆತನ ನುಡಿ |
ಗಖಿಲ ಶಾಸ್ತ್ರವನರಿತ || ನೀನೊಪ್ಪಿಕೊಳುತ ||
ಅಕಟ ಕೈಬಿಟ್ಟೆಮ್ಮ ಗಿರಿವನ |
ನಿಕರವನು ಪೊಗಲಿಳೆಯ ನಾಳುವ |
ಶಕುತರಾರೈ ತರದಿರಲು ತವ |
ನಿಕಟವಿದ ಬಿಡೆ ಪ್ರಕಟವೀ ನುಡಿ || ಏನಿ || ೧೩೦ ||
ಈ ಮಾತಾಡುವರೆ ತಮ್ಮ | ಪೆತ್ತವ ಸತ್ಯ |
ಕಾಮು ಸಚ್ಚರಿತ ನಮ್ಮ | ಕೈಕಾದೇವಿ |
ತಾ ಮಾರ್ಗದರ್ಶಿಯಮ್ಮ || ಮೇಣ್ ಪ್ರಕೃತಕರ್ಮ ||
ನೀ ಮನದಿ ಕವಲೆಣಿಸದಿರು ಪಿತ |
ನೇಮ ಪಿರಿದುಭಯರಿಗಯೋಧ್ಯಾ |
ಸೀಮೆಯಾಳುವುದನಕ ನಾ ವನ |
ವಾ ಮುಗಿಸಿ ಮರಳುವೆನು ಮರುಗದಿ || ರೀಮಾ || ೧೩೧ ||
ಅಂಣ್ಣ ನೀನವಧರಿಸು | ಬಿನ್ನಪವ ಸಂ |
ಪನ್ನ ದಯದಿ ಮನ್ನಿಸು | ಪಿತನಾಜ್ಞೆಗ |
ರಣ್ಯವೆನಗೆ ನೇಮಿಸು || ಧಾರಣಿಯ ವಹಿಸು ||
ಭಿನ್ನವಿರೆ ಮತ ನಿರಶನ ವ್ರತ |
ವನ್ನೆಸಗಿ ಅಸುಗಳೆವೆ ತಾನೆನೆ |
ಚಿನ್ಮಯನು ಗುರುವನ್ನಿರೀಕ್ಷಿಸ |
ಲನ್ನೆಗವ ಕರೆದೆಂದ ಗುಪಿತದಿ || ಅಂಣ್ಣ || ೧೩೨ ||

**ಭಾಮಿನಿ**
ತಿಳಿಯೆ ನಿನಗಗ್ರಜನೆ ದುಷ್ಕರ |
ತಲೆಯರಿದು ಭೂಭಾರವಿಳುಹಲ್ |
ಕೆಳಸಿ ಬಂದಚ್ಯುತನ ಕಾರ್ಯಕೆ ವಿಘ್ನವೇಕೆನಲು ||
ತಿಳಿದು ಭಯಭಕ್ತಿಯಲಿ ಹರಿಯಡಿ |
ಗಳ ಪಿಡಿದು ದೈನ್ಯದಲಿ ಸಿರಿಪದ |
ಜಲರುಹೋಪಮ ಪಾದುಕೆಯ ನೀಡೆನುತ ಭರತಾಂಕ || ೧೩೩ ||

**ವಾರ್ಧಕ**
ಇತ್ತಡವುಗಳ ಸೇವಿಸುತ್ತೀರ್ಪನೀರೇಳು |
ವತ್ಸರವನುತ್ತರಿಸಿ ದರುಶನವನೀಯದಿರ |
ಲಿತ್ತು ವಹ್ನಿಗೆ ತನುವ ತವ ಪದವ ಕಾಂಬೆನೆನಲೆತ್ತಿ ನಿಜಸೋದರನನು ||
ಮತ್ತಪ್ಪಿ ರಘುಜ ಸಂತೈಸಿ ಪಾದುಕೆಯೀಯು |
ತುತ್ಸವದಿ ಕಳುಹಲವ ಪತ್ತನವ ಪೊಗದೆಯದ |
ರೊತ್ತಿಗಿಹ ನಂದಿಗ್ರಾಮದೊಳಿರ್ದು ಧರೆಯಾಧಿ | ಪತ್ಯಮಂ ನಡೆಸುತಿರ್ದ || ೧೩೪ ||

**ಭಾಮಿನಿ**
ವರ ರಘೂದ್ವಹ ಚಿತ್ರಕೂಟವ |
ತೊರೆದಗಸ್ತ್ಯಾತ್ರ್ಯಾದಿ ಮುನಿಗಳ |
ದರುಶನವಗೊಳುತ್ತೈದಿ ಮಡುಹಿ ವಿರಾಧ ಮುಖ್ಯರನು ||
ಹರುಷದಿಂದಿರೆ ಪಂಚವಟ್ಯದಿ |
ಧರಿಸಿ ದಿವ್ಯಾಕೃತಿಯ ನಭದಲಿ |
ಚರಿಪ ದಶಶಿರನನುಜೆ ಕಂಡಳು ರಾಘವೇಶ್ವರನ || ೧೩೫ ||

**ಹಿಂದೂಸ್ತಾನಿ ಕಾಪಿ - ರೂಪಕ**
ಅರರೆ ಎನಿತು ಚೆಲುವು ಛಲ | ದೊರಕಿತೆನಗೆ ಸುಕೃತ ಫಲ || ಪಲ್ಲ ||
ಧರೆಯ ಲಾವಣ್ಯವೆಲ್ಲ | ಎರಕಗೈದಿಹನು ಕಬ್ಬಿಲ್ಲ || ಅರರೆ || ಅನುಪಲ್ಲ ||
ದೊರೆತನೆನಗೆ ಸಾರ್ಥವಿಟ | ಹರನೆ ಕರುಣಿಸಿದನು ದಿಟ ||
ಸುರತಕಿಂಥ ವರನ ಹೊಂದ | ದಿರುವ ಹೆಣ್ಣುಜನುಮ ದಂಡ || ಅರರೆ || ೧೩೬ ||
ಮದನ ಕದನಕೊದಗಲಹ | ಮುದದೊಳಪ್ಪಿಕೊಳುತ ಮಹ ||
ಮಧುರ ಬಂಧ ಚುಂಬನಾದಿ | ವಿಧಿಯೊಳ್ನಲಿವೆನಿವನ ಕೂಡಿ || ಅರರೆ || ೧೩೭ ||

**ಕಂದ ಪದ್ಯ**
ಗುರುಕುಚ ಭಾರದಿ ಪರಿನಡು |
ಮುರಿದಪುದೆನೆ ಬಲು ಬಳುಕುತಲಂದುಗೆ ರವದೊಳ್ ||
ಕರೆವುತ ವಿಟನಂ ಕಿರು ನಗೆ |
ವೆರೆದೈದುತ ರಘುವರ ನೊಡನತಿ ಬೆಡಗಿನೊಳು || ೧೩೮ ||

**ಮೋಹನ - ಏಕ**
ಸ್ವಾಗತ | ಪಿರಿಯಭಾಗ್ಯತನಹೆ ಸು | ಸ್ವಾಗತ ರಘು ನಾಥ || ಪಲ್ಲ ||
ಸ್ವಾಗತ ಸಿರಿಸುಖ | ದಾಗರ ಲಂಕಾ |
ನಾಗರಿಕಳು ಶಿರ | ಬಾಗುವೆನಿದಕೊ || ಸ್ವಾಗತ || ಅ. ಪಲ್ಲ ||
ಮೋಹನ | ಸುರತಾಹವಕೆನಗೆಣೆ | ಯಾಹ ಸುಗುಣ ವಿಟನ ||
ಈ ಪರೆಯದಿ ನೆರೆ | ವಾ ಹವಣದಿ ಬರೆ |
ಆ ಹಸಿವೆಯ ದಣಿ | ವಾ ಪರಿಸಿದೆ ಧಣಿ || ಸ್ವಾಗತ || ೧೩೯ ||
ಮತ್ಪ್ರಿಯ | ಕಂದರ್ಪ ಕೇಳಿಗೊಲಿದೈ | ತರ್ಪೆಯ ಸುಮಕಾಯ ||
ಚಪ್ಪರಿಸುತ ಬಿಗಿ | ದಪ್ಪುತ ಕುಚವೆದೆ |
ಗಪ್ಪಳಿಸುತ ಮಿಗಿ | ಲಪ್ಪ ವಿಲಾಸಕೆ || ಸ್ವಾಗತ || ೧೪೦ ||

**ಕೇದಾರಗೌಳ - ಅಷ್ಟ**
ಉಪಚಾರವಿದು ನಮ | ಗಪರೂಪವರಿಯೆ ಕೌ | ಣಪ ವಧು ವಿಧವೆಯೈಸೆ ||
ವಿಪರೀತ ವಿಧಿ ಮಗು | ಳೇಕ ಪತ್ನೀವ್ರತ | ಸಫಲವಾಗದು ನಿನ್ನಾಸೆ || ೧೪೧ ||
ಒಲ್ಲೆನೆಂದರೆ ಪೋಪ | ಳಲ್ಲವೆಂದೆನುತೈದಿ | ಗಲ್ಲವನಲುಗಿದಳು ||
ತಳ್ಳಿ ರಾಘವ ತಮ್ಮ | ಚಲ್ವ ನನ್ನಿಂದಾತ | ನಲ್ಲ ನೀ ಬೆರೆಯೆನಲು || ೧೪೨ ||
ಗುರುತೀಯಬೇಹುದೆಂ | ದೆರಗೆ ರಘೂದ್ವಹ | ಬರೆದನಾಕೆಯ ಬೆನ್ನಲಿ ||
ಪರಿಕಿಸಿದೊಡನೆ ತಾ | ನರಿವ ಪೋಗೆನಲವ | ಳಿರದೆ ತೋಷದಿ ಮರಳಿ || ೧೪೩ ||

**ಭಾಮಿನಿ**
ತೆರಳಿ ಲಕ್ಷ್ಮಣಗೆರಗಿ ನಿನ್ನಯ |
ಪಿರಿಯ ಕಳಿಹಿದನೆನಲು ಬರೆಹವ |
ಪರಿಕಿಸುತ ಗಹಗಹಿಸುತೊಯ್ಯನೆ ಪಿಡಿದು ಚಂಡಿಕೆಯ ||
ಕರದ ಖಡುಗದಿ ನಾಸಿಕವ ಚರ |
ಚರನೆ ಕೆತ್ತಿದನುರಿಗೆ ದಾನವಿ |
ಧರಿಸಿ ಘೋರಾಕೃತಿಯೊಳೊದರಿದಳದುರೆ ಸುರ ನಿಕರ || ೧೪೪ ||

**ಕಾಂಬೋಧಿ - ಝಂಪೆ**
ಅನುಜೆ ಕೂಗಿದ ಭರಕೆ | ದನುಜ ಖರ ಕನಲಿ ದೂ |
ಷಣನೊಡನೆ ಮೂಲಬಲ ಸಹಿತ ||
ಅನುವರಕ್ಕೊದಗಿ ಕರೆ | ದಿನಕುಲಾಧಿಪನ ತಡೆ |
ದಣಕಿಸುತ ಗಜರಿ ಬೊಬ್ಬಿಡುತ || ೧೪೫ ||
ಎಲವೋ ನರಗುರಿಯಮ್ಮ | ಹೊಳಲನಿದ ಪೊಕ್ಕಸುವ |
ಕಳೆದೆ ಮೇಣ್ ಸತಿಯ ಭಂಗಿಸುತ ||
ತಲೆಯರಿದು ಮಿದುಮಾಂಸ | ರುಧಿರ ಸಹಿತುಂಬೆ ತವ |
ಲಲನೆಗಿದ ತಿಳುಹಿ ಬಾರೆನುತ || ೧೪೬ ||
ಎಚ್ಚು ಶರವರ್ಷದಲಿ | ಮುಚ್ಚಿದನು ರಘುಪತಿಯ |
ಬೆಚ್ಚುತನಿಮಿಷರು ಹಾಯೆನಲು ||
ಕೊಚ್ಚುತಚ್ಯುನೆಚ್ಚ | ನಿಚ್ಚಟಾಸ್ತ್ರದಲಿ ಶಿರ |
ಉಚ್ಚಿ ಖಳನುರುಳಲವನಿಯೊಳು || ೧೪೭ ||

**ಭಾಮಿನಿ**
ಬಳಿಕ ಖಳಕಾನನಕುಠಾರನ |
ಕೊಳುಗುಳದಿ ಹದಿನಾಲ್ಕು ಸಾವಿರ |
ದಳದೊಡನೆ ಮೃತನಾಗೆ ದೂಷಣನಾಗ ಶೂರ್ಪನಖಿ ||
ಎಲೆ ನರಾಧಮ ಗೈದ ಕೃತ್ಯಕೆ |
ಫಳಿಗೆಯಲಿ ಮದ್ವರೆಯದಿರ್ದರೆ |
ಲಲನೆ ತಾನಲ್ಲೆನುತಲೋಡಿದಳಗ್ರಭವನೆಡೆಗೆ || ೧೪೮ ||

**ವಾರ್ಧಕ**
ವನಿತೆ ಕೇಳ್ ಕನಕ ಲಂಕೆಯೊಳತ್ತ ಸುರ ಭುಜಗ |
ಮನುಜದಲ್ಲಣ ದಶಗ್ರೀವನೋಲಗದಿ ಸಾ |
ರಣ ಶುಕ ಮಹೋದರ ಪ್ರಹಸ್ತಾಕ್ಷನತಿಕಾಯ ರಣವಿಜಿತ ಮೇಘನಾದ ||
ಘನ ಮದೋನ್ಮತ್ತ ರಾಕ್ಷಸ ಖೇಚರಾದಿಗಳ್ |
ದನುಜೇಂದ್ರನಿತ್ತಟದಿ ಮೆರೆದಿರಲ್ ಬೆಸಕೈವು |
ತನಿಮಿಷಾಧಿಪ ಮುಖ್ಯ ದಿಕ್ಪತಗಳಿರುತಿರ್ದರೆನಿತೆಂಬೆನಾ ವಿಭವವ || ೧೪೯ ||

**ಸಾಂಗತ್ಯ - ರೂಪಕ**
ಅನಿತರೊಳೊರಲುತ | ಲ್ಲಿಗೆ ಮೃತ್ಯುವೆನೆ ಬಂದು |
ಮಣಿವುತಂಣಗೆ ಶೂರ್ಪನಖಿಯು ||
ಮನುಜಪಾಲಕ ರಾಮ ಅನುಜ ಲಕ್ಷ್ಮಣ ಸೀತೆ |
ವನಿತೆ ವಸತಿ ಪಂಚವಟಿಯು || ೧೫೦ ||
ಸುಂದರಿ ನಿನಗಾಹ | ಳೆಂದು ಕೈಗೊಡೆ ಮೂಗ |
ಖಂಡಿಸಿದನು ರಾಮನನುಜ ||
ಬಂದು ಕಾದಲು ಖರ | ದೂಷಣಾದ್ಯರನೆಲ್ಲ |
ಕೊಂದನು ದಶರಥ ತನುಜ || ೧೫೧ ||
ನಕ್ಕಳಾ ಸೀತೆಯ | ನ್ನಭಿಮಾನವಿದು ನಿನ್ನ |
ದೊಕ್ಕಣಿಸುವದೇನಾ ಸತಿಗೆ ||
ತಕ್ಕವಳಿಕ್ಕೆ ತಂ | ದಿಕ್ಕದಿರಲು ಗೆಲ |
ವಕ್ಕೆ ಭಾವಿಸು ನಮ್ಮ ಕ್ಷಿತಿಗೆ || ೧೫೨ ||

**ಭಾಮಿನಿ**
ಕೇಳಿ ದಶಶಿರ ಕನಲಿ ವಿಲಯದ |
ಕಾಲನೋ ಕಲ್ಪಾಂತ ರುದ್ರನೊ |
ಪೇಳಲರಿದೆನಲಿದ್ದ ರೌದ್ರದಿ ಗದ್ದುಗೆಯನೊದ್ದು ||
ಕೀಳು ಮಾನವನೆಮ್ಮನೀ ಪರಿ |
ಕೋಳುಗೊಂಡರೆ ತನಗೆ ಬಲುಗೈ |
ಯ್ಯಾಳುತನವೇಕೆನುತ ಘರ್ಜಿಸಿ ಮೀಸೆಗಯ್ಯಾಗಿ || ೧೫೩ ||

**ಭೈರವಿ - ಏಕ**
ಬೆದರುವರೆನಗಜಭವರು | ಪದ | ದಡಿಯೊಳಿಹರು ನಿರ್ಜರರು ||
ವಿದಿತವು ಲೋಕತ್ರಯದಿ | ಹರಿ | ಯಡಗಿಹ ಜಡದೊಳು ಭಯದಿ || ೧೫೪ ||
ಹರಿಗಿದಿರಹ ಮದಕರಿಯ | ಖಗ | ವರನನು ತಡೆವಹಿ ಪರಿಯ ||
ನರಗುರಿ ಕೆಣಕಿದ ವಹವ | ತಾ | ನರಿತರಿತೆನ್ನಾಳ್ವನವ || ೧೫೫ ||
ಧಾರ್ಮಿಕರೆಂಬರು ಜಗದಿ | ದು | ಷ್ಕರ್ಮವನಾರ್ಯರ ತೆರದಿ ||
ದುರ್ಮದವಿಳಿಸುವೆನವಗೆ | ಕಡು | ದುಮ್ಮಾನವ ಸತಿಗೆಸಗೆ || ೧೫೬ ||

**ಭಾಮಿನಿ**
ಕರೆದು ಮಾರೀಚನನು ದಶಗಳ |
ತೆರಳು ಪೊಂಮಿಗವಾಗಿ ಜಾನಕಿ |
ಇರುವ ಬಳಿಗೆನೆ ಹರಿಯ ಹಗೆ ಕುಲಲಯವು ತೆಗೆಯೆಂದ ||
ಮರುನುಡಿಯೆ ಶಿರವರಿವೆ ನೋಡೆಂ |
ದಿರದೆ ಸುರಗಿಯನುಗಿಯಲಾ ರಘು |
ವರನೊಳಳಿದರೆ ಮುಕ್ತಿ ಕೊಲದಿರು ಪೋಪೆ ತಾನೆನುತ || ೧೫೭ ||

**ಮಾರವಿ - ಏಕ**
ಉಸುರುತಲೀಪರಿ ನಿಶಿಚರ ನೆಗೆದಾ | ಗಸಕಡರುತಲಾಗ ||
ಬಿಸಜಸಖಾನ್ವಯನೊಸತಿಯ ಕಾನನ | ದೆಸೆಗಿಳಿಯುತ ಬೇಗ || ೧೫೮ ||
ಮಾಯದಿ ಕಾಂಚನ ಛಾಯೆ ಮಿನುಗೆ ಮಿಗ | ದಾಯತಿಕೆಯೊಳಂದು ||
ತೋಯಜ ನೇತ್ರೆಗಪಾಯವನೆಸಗುವು | ಪಾಯದೊಳೈತಂದು || ೧೫೯||
ಬೊಗರಿಯ ತೆರದೊಳು ಜಿಗಿದು ಸುಗಿದು ಯಳೆ | ಚಿಗುರನು ಹರಿಯುತ್ತ ||
ಸೊಗಸಿನೊಳೈತಹ ಚಿಗರೆಯ ಕಾಣುತ | ಮಿಗೆ ಜಾನಕಿ ನಗುತ || ೧೬೦ ||

**ವಾರ್ಧಕ**
ದಾನವನ ಕಪಟವದ ನೋಡಿದಳು ಓಡಿದಳು |
ಮಾನಸದ ಹರುಷಮುದ್ವೇಗದೊಳು ವೇಗದೊಳು |
ತಾನಿನಿಯನಪ್ಪಿ ಕೊಂಡಾಡಿದಳು ಆಡಿದಳು ಏಣವದ ಪಿಡಿದೀಗಳು ||
ನೀನೀವುದೆನುತ ಮೈ ತೀಡಿದಳು ತೀಡಿದಳು |
ಮೇಣೆದ್ದು ಮಿಗದ ಬಳಿ ಸಾರಿದಳು ಸಾರಿದಳು |
ಕಾಣಿದರನುಳಿದು ಬದುಕುವಳಲ್ಲೆನುತಲಲ್ಲೆ ಜಾನಕಿಯು ಬಿಸುಸುಯ್ದಳು || ೧೬೧ ||

**ಕೇದಾರಗೌಳ - ಅಷ್ಟ**
ಓಡಿ ಲಕ್ಷ್ಮಣನೆಂದ | ಖೋಡಿಗೊಂಬುವರುಂಟೆ |
ಮೂಢ ರಕ್ಕಸರ ಮಾಯೆ ||
ಓಡುವವದ ಕಂಡು | ಕಾಡಿನ ಮೃಗವೆಲ್ಲ |
ಬೇಡಿತ್ತ ಬನ್ನಿ ತಾಯೆ || ೧೬೨ ||
ಒಲ್ಲೆ ನಾನಿದರ ಕೊಂ | ಡಲ್ಲದೆ ತಿರುಗುವ |
ಳಲ್ಲ ನಿಲ್ಲದು ಹರಣ ||
ಬಲ್ಲೆ ನಿನ್ನಯ ನುಡಿ | ಎಲ್ಲ ಚಮತ್ಕೃತಿ |
ಸಲ್ಲದೆನ್ನೊಳು ಮೈದುನ || ೧೬೩ ||

ಎಂಣಿಸಬೇಡಿ ಸು | ವರ್ಣ ಕಾಯವಿದು ಹಿ |
ರಣ್ಯಗರ್ಭನ ಸೃಷ್ಟಿಯೆ ||
ಬಂಣನೆಯೇಕೆ ಕೈ | ಗನ್ನಡಿಯಿರೆ ಮುಖ |
ಬಂಣ ವೇನೆಂದರಿಯೆ || ೧೬೪ ||
ಅನಕ ರಾಘವನೆಂದ | ಅನುಜ ತನ್ನಿನಿಯಳ |
ಎಣಿಕೆಯಾಗಲಿ ಕಡೆಗೆ ||
ದನುಜ ಮಾಯಕವಾದ | ರೆಯು ಪರಿಹರಿಸುವು |
ದನಿವಾರ್ಯವೈ ನಮಗೆ || ೧೬೫ ||
ಪಿಡಿವೆನಲ್ಲದಡದ | ವಧಿಸಿ ಬೇಗದಿ ಬಹೆ |
ನೊದಗಿ ಕಾಯ್ವುಹುದಿವಳ ||
ತುದಿ ಬಯಕೆಯ ಬದಿ | ಗಿಡಲೇಕೆಂದುಸು | ರುತ್ತ |
ಲೊಡನೆದ್ದನಾಕೆವಾಳ || ೧೬೬ ||

**ವಾರ್ಧಕ**
ಇಂತಿರಲ್ ಪುಷ್ಪಕದಿ ಲಂಕಾಧಿನಾಥ ನಡೆ |
ದಂತರಿಕ್ಷದೊಳಡಗಿ ನೋಡುತಿರೆ ಕೈದುಗಳ |
ನಾಂತು ರಘುಪುಂಗವಂ ಬೆನ್ನಟ್ಟಿ ಕಿತವ ಮಿಗವಂತರಿಸಿ ಗಿರಿವನಗಳ ||
ಮುಂತಳೆಯೆ ಬಳಲಿ ರಾಘವನೆಚ್ಚ ಶರದಿ ಪರ |
ಣಾಂತದಲಿ ಖಳ ಲಕ್ಷ್ಮಣಾ ಲಕ್ಷ್ಮಣಾಯೆನು |
ತ್ತಂತಕನ ಬಳಿಗೈದಲದ ಕೇಳಿ ವೈದೇಹಿ ಚಿಂತಿಸುತ ಮೈದುನಂಗೆ || ೧೬೭ ||

**ಮಧ್ಯಮಾವತಿ - ತ್ರಿವುಡೆ**
ಓಡು ನೀ ತಡ ಮಾಡದಿರು ಕೇ |
ಡಾದುದಕಟಾ ಕರೆವನಿನಿಯನು |
ಖೋಡಿ ದೈತ್ಯರು ಕೊಲುತಿಹರು ತ್ವರೆ | ಮಾಡು ದಯದಿ || ೧೬೮ ||
ಮರುಳು ಗೊಂಬರೆ ತಾಯೆ ದನುಜರು |
ಹರಿಯ ಕೊಲ್ಲುವುದುಂಟೆ ರಘುಪತಿ |
ಕರೆದುದಿಲ್ಲದು ಕಪಟ ಪೋಗೆನು | ತೊರೆದು ನಿಮ್ಮ || ೧೬೯ ||
ಜಡಜ ಲೋಚನನಳಿಯೆ ನಾನಿನ |
ಗೊದಗುತಿಹೆನೆಂದರಿತೆಯಲ ತಾಯ್ |
ಬೆದೆಯ ಬಯಸುವ ಬಸವ ದಿಟನೀ | ನಧಮ ತೊಲಗೈ || ೧೭೦ ||

**ವಾರ್ಧಕ**
ಅತ್ತಿಗೆಯ ನುಡಿಗೆ ಕಿವಿಯೊತ್ತಿ ಸೌಮಿತ್ರಿ ಮಾ |
ರುತ್ತರಂಗೊಡದೆ ಕಂಬನಿದುಂಬಿ ಕಾಲ್ಗೆರಗಿ |
ಚಿತ್ರದೋಳ್ ರಾಮಚಂದ್ರನ ನೆನೆವುತೈದೆ ದಶಮಸ್ತಕಂ ಯತಿವೇಷದಿ ||
ಪೃಥ್ವಿಗಿಳಿಯುತ ವೇದಘೋಷದಿಂದೆಲೆ ಮನೆಯ |
ಹತ್ತಿರಕೆ ನಡೆತಂದು ಭವತಿ ಭಿಕ್ಷಾಂದೇಹಿ |
ತೃಪ್ತಿಗಾಣದೆ ಜಗವ ಸುತ್ತಿ ಬಳಲಿದೆನಿಷ್ಟವಿತ್ತನುಗ್ರಹಿಸೆಂದನು || ೧೭೧ ||

**ಕೇದಾರಗೌಳ - ಅಷ್ಟ**
ಬೆದರಿದಂತಿದೆ ವಿಧು | ವದನೆ ರಕ್ಷೆಗಳಿಲ್ಲ |
ದಡವಿಯೊಳಿಹರೆ ಹೀಗೆ ||
ಪಡೆದವರ್ಯಾರು ಕೈ | ವಿಡಿದಾತನೆಲ್ಲಿಹ |
ನದನುಸುರೀಗೆನಗೆ || ೧೭೨ ||
ಜನಕರಾಯನ ಮಗ | ಳೆನಗೆ ಸೀತಾಂಕಿತ |
ಇನಿಯ ರಾಘವ ಪಿತನ ||
ಮನದಂತೀರೇಳುವರ್ಷ ವನವನುತ್ತರಿಸೆ ಲ |
ಕ್ಷ್ಮಣಸಹಿತಿರಲೀ ದಿನ || ೧೭೩ ||

ತಹೆನೊಂದು ಮಿಗವೆಂದು | ಮಹಿಮ ರಾಘವ ಪೋದ |
ಸಹಯಕನುಜ ಪೊರಟ ||
ಬಹರೀಗ ಮನವ ನಿ | ರ್ವಹಿಸಲಪ್ಪಣೆಯಿಲ್ಲ |
ಸಹಿಸಿ ನೀವರೆ ನಿಮಿಷ || ೧೭೪ ||

**ಭಾಮಿನಿ**

ಇಂತು ನೆವನವೆ ದೇವಿ ಖಳರ ದು |
ರಂತ ದುಷ್ಕೃತಿಗಾಜ್ಞೆಯದು ನಾ |
ವಂತರಿಸಲರಿದಿದಕೊ ಶಾಪವನೆಂದನಾಗ್ರಹದಿ ||
ಚಿಂತಿಸುತ ಮುಂಗಾಣದವನಿಜೆ |
ಯಾಂತು ಭಿಕ್ಷೆಯ ಪೊರಡೆ ದಶಶಿರ |
ದಂತಿಗಮನೆಯ ನೆಗಹಿ ಗಮನೋದ್ಯೋಗಪರನಾಗೆ || ೧೭೫ ||

**ಬಿಲಹರಿ - ರೂಪಕ**

ಅಯ್ಯೋ ಕೆಟ್ಟೆನು ದುಷ್ಟ | ದಾನವ ಕಪಟದಿ |
ಒಯ್ವನು ಬಿಡಿಸೆನ್ನ | ದಯದಿ | ಶ್ರೀರಾಮ || ೧೭೬ ||
ಹಟವ ಹಿಡಿದು ಕೆಟ್ಟೆ | ಕಟು ನುಡಿಗಳ ಬಿಟ್ಟೆ |
ಕಟುಕನ ಕೈಯ್ಯಿಂದ | ಬಿಡಿಸೋ | ಶ್ರೀರಾಮ || ೧೭೭ ||
ತೊರೆದು ಸರ್ವರ ನಿನ್ನ | ಚರಣವ ನಂಬಿ ನಾ |
ಪೊರಟೆ ಕೈ ಬಿಡದೆನ್ನ | ಪೊರೆಯೋ | ಶ್ರೀರಾಮ || ೧೭೮ ||

**ವಾರ್ಧಕ**

ಈ ತೆರದಿ ವನಿತೆ ಕಂಗೆಟ್ಟೊರಲೆ ಗಿರಿವನ |
ವ್ರಾತ ಬಾಯ್ ಬಿಟ್ಟಳಲಿತೆನೆ ಪ್ರತಿಧ್ವನಿಸೆ ಸಂ |
ಪಾತಿಯವರಜ ಕೇಳುತಡಹಾಯ್ದು ಪುಷ್ಪಕವ ಘಾತಿಸಿದ ಮಸ್ತಕವನು ||
ಯಾತುಧಾನನಿದೆಲ್ಲಿಯದು ಹಾಳುಹದ್ದೆನುತ |
ಖಾತಿಯಿಂ ಝಡಿದು ಪಕ್ಕಗಳ ಕಡಿದುರುಳಿಸುತ |
ತಾ ತಳುವದೈದಿ ಸೀತೆಯ ಶಿಂಶುಪಾ ವನದಿ ಬೈತಿಟ್ಟು ನಡೆದ ಪುರಕೆ || ೧೭೯ ||

**ಸಾಂಗತ್ಯ - ರೂಪಕ**

ಇತ್ತಲಣ್ಣನ ನರ | ಸುತ್ತಲೈತರುವ ಸೌ |
ಮಿತ್ರಿಯ ಕಂಡು ರಾಘವನು ||
ಚಿತ್ತದಿ ಕಳವಳಿ | ಸುತ್ತ ಕೇಳಿದ ವಾರ್ತೆ |
ಮತ್ತೇನು ಬರಲಿಲ್ಲ ನೀನು || ೧೮೦ ||
ಕರೆದೆ ನೀನೆನುತೆನ್ನ | ನಿರಗೊಡದತ್ತಿಗೆ |
ಜರೆದು ನೂಕಲು ಬಂದೆನಂಣ ||
ಒರೆದ ಕಟೂಕ್ತಿಯ | ನರುಹಲಾರೆನು ಜೀಯ |
ಪರಸೇವೆಯರಿಯೆ ಬಲ್ ಕಠಿಣ || ೧೮೧ ||
ಘಾತವಾಯಿತು ದುಷ್ಟ | ದೈತ್ಯನುಲಿಯು ಕಷ್ಟ |
ಹೇತುವೆಂದೆನುತೋಡಿ ಬರುತ ||
ಸೀತೆಯನರಸಿ ಸೋ | ದರರು ಕಾತರಿಸಿ ಭೂ |
ಜಾತೆ ಕಾಣದೆ ರಾಮನಳುತ || ೧೮೨ ||

**ಮಧುಮಾಧವಿ - ತ್ರಿವುಡೆ**

ಮಡದಿಯೆಲ್ಲಿಹೆ ದಗೆಯನಾಂತಿಹೆ |
ತಡೆಯಲಾರೆನು ವಿರಹದುರಿಯನು ||
ಜಡಜಲೋಚನೆ ಮೃಗಧರಾನನೆ |
ಸಿಡುಕದೆನ್ನಲಿ ಬೇಗನೆ | ಬಾರೆ ಸುಗುಣೆ || ೧೮೩ ||

ದಡಿಗ ದಾನವರೊಯ್ವರೊ ಕೊಂ |
ದಡಗನಗಿದರೊ ದುಷ್ಟಶ್ವಾಪದ ||
ಗಡಣ ತಿಂದವೊ ಕಾಣೆನೆನ್ನುಸಿ |
ರಡಗಿತಿನ್ನೇಂಗೈವೆನು | ಬದುಕಿ ನಾನು || ೧೮೪ ||
ತೊರೆದು ತಾನರಘಳಿಗೆ ಬಾಳಿರ |
ಲರಿದೆನುತ ನಡೆತಂದೆಯಾದಡೆ ||
ಪರಿಯು ಬೇರಾಯ್ತೀಗ ಸತಿಯರ |
ಇರವರಿಯೆ ಕಡು ದುಸ್ತರ | ಪೇಳು ವಿವರ || ೧೮೫ ||

**ವಾರ್ಧಕ**
ವ್ಯಾಕುಲವ ಬಿಡು ಲೋಕ ಮೂರರೊಳಗೆಲ್ಲಿರ್ದ |
ಡಾಕಮಲ ಮುಖಿಯ ತಂದೀಯದಾದರೆ ಪಿಡಿಯೆ |
ನೀಕರಾಗ್ರದಿ ಧನುವನೆನುತಂಣನಡಿಗೆರಗಿ ಬೀಳ್ಕೊಂಡ ಸೌಮಿತ್ರಿಯ ||
ತಾ ಕಂಡು ತಿಳುಹಿ ಸಂತೈಸಿ ಜತೆಯಲಿ ಜನಕ |
ಜಾಕಾಂತ ದೆಸೆ ದೆಸೆಯ ಹುಡುಕುತ್ತೈದಿ ಜಟಾಯು |
ವಂ ಕಂಡಿದೇನೆಂದಡವ ನಡೆದುದರುಹಿ ಪರ ಲೋಕಮಂ ಸಾರಲಾಗ || ೧೮೬ ||

**ಕಾಂಬೋಧಿ - ಝಂಪೆ**
ಶರಣಗುತ್ತಮ ಗತಿಯ | ಕರುಣಿಸಿ ಕಬಂಧನನು |
ತರಿದಿಡುಕಿ ಗಿರಿ ಗಹ್ವರಗಳ ||
ಚರಿಸುತರಸುತ ಶಬರಿ | ಯಾಶ್ರಮಕೆ ಬರಲವಳು |
ಅರಿತು ಬಂದಪ್ಪಿ ಚರಣಗಳ || ೧೮೭ ||
ಬರವ ನೋಡುತ ಹತ್ತು | ವರುಷವಾಯ್ತೀ ಹೊತ್ತು |
ದರುಶನವಿದಾಯ್ತವನಿಸುತೆಯ ||
ಇರವೆಲ್ಲಿ ಶರಣಜನ | ಸುರಧೇನು ಶೂದ್ರಳೆಂ |
ದರಿಯದುದ್ಧರಿಸಿದೆಯ ಸತಿಯ || ೧೮೮ ||
ಎಂದು ಮಿಗಿಲಾದರಿಸ | ಲೆಂದು ವಾರ್ತೆಗಳನವ |
ಳಿಂದರಿತು ಸುಗ್ರೀವನಿರವ ||
ಚಂದದಿಂ ಕೈವಲ್ಯ | ಪದವ ಕರುಣಿಸಿ ರಘುಜ |
ಬಂದು ಕಂಡನು ಪಂಪಸರವ || ೧೮೯ ||

**ಭಾಮಿನಿ**
ಹೊಳೆವ ನೀಲೋತ್ಪಲವ ಕಾಣುತ |
ಲಲನೆಯೆಂದರಿತಾಗ ಮನದು |
ಮ್ಮಳದಿ ಹಾ ಹಾ ಸೀತೆ ಹಾಯೆನುತಪ್ಪಿಕೊಳಲೆನುತ ||
ಕೊಳವ ದುಮುಕಲ್ಕೆಳಸೆ ಲಕ್ಷ್ಮಣ |
ತಿಳುಹುತಿರಲಾ ಋಷ್ಯಮೂಕದಿ |
ಚಲುವರಿವದಿರ ಕಾಣುತಿನಸುತನೆಂದ ಹನುಮಂಗೆ || ೧೯೦ ||

**ಸೌರಾಷ್ಟ್ರ - ತ್ರಿವುಡೆ**
ನೋಡಿ ಬಾರೈ ಪಂಪೆಯಡೆಯಲಿ |
ರೂಢಿಪಾಲರದಾರು ಹಿತವರೊ ||
ಖೋಡಿ ವಾಲಿಯ ಸಖರೊ ನೀನತಿ | ಗೂಢವಾಗಿ || ೧೯೧ ||
ಎನೆ ಹಸಾದವೆನುತ್ತಲಂಜನೆ |
ಯಣುಗ ವಟು ರೂಪದಲಿ ನಡೆತಂ ||
ದಿನಕುಲಾಧಿಪನಡಿಗೆ ಮಣಿವುತ | ವಿನಯದಿಂದ || ೧೯೨ ||
ವೀರರಾಗಮವೇನು ಪೆತ್ತವ |
ರಾರು ನಿಜಪುರವೆಲ್ಲಿ ವನಸಂ ||
ಚಾರವೇಕಿದು ಪೇಳಿ ಪೆಸರೇನ್ | ಭೂರಿ ದಯದಿ || ೧೯೩ ||

**ವಾರ್ಧಕ**
ತರಣಿ ಕುಲ ಸಾಕೇತದರಸ ದಶರಥ ಜನಕ |
ಪಿರಿಯ ಸುತ ನಾ ರಾಮ ಭರತ ಶತ್ರುಹರೂರೊ |
ಳಿರುವನುಜರಿವ ಲಕ್ಷ್ಮಣಂ ವನಿತೆಯಹ ಸೀತೆಯರ ವೆರೆದು ಪಿತನಾಜ್ಞೆಗೆ ||
ವರುಷ ಹದಿನಾಲ್ಕನುತ್ತರಿಸೆ ವನಕೈತಂದು |
ಇರೆ ಪಂಚವಟಿಯೊಳಾವಿರದ ಸಮಯದಿ ಕದ್ದು |
ದುರುಳ ದಶಶಿರನೊಯ್ದ ತರುಣಿಯನ್ನರಸುತ್ತ ಸರಿದೆವೀಯೆಡೆಗೆಂದನು || ೧೯೪ ||

**ಭಾಮಿನಿ**
ಕೇಳಿ ಭಯ ಭಕ್ತಿಯಲಿ ಮರುತಜ |
ನೀಲಗಾತ್ರನ ಪದದಿ ಪಣೆಯಿ |
ಟ್ಟೇಳುತೊಡನೀಕ್ಷಿಸುತ ಕುಲಿಶೋಪಮ ನಿಜಾಂಗವನು ||
ಬಾಲನೆನಗೊಲಿದವ್ವೆಯರುಹಿದ |
ಶೀಲಮೂರ್ತಿಯ ಕಂಡೆನೆಂದಿಗೆ |
ಸೀಳಿದುದು ಭವಬಂಧವೆನುತಡಿಗೆಡೆದು ನುತಿಸಿದನು || ೧೯೫ ||

**ವಾರ್ಧಕ**
ಜಯ ಜಯ ಜಗದ್ಭರಿತ ಸಚ್ಚರಿತ ಮುನಿ ವಿನುತ |
ಜಯ ಜಯ ಮಹಾನಂದ ಸ್ವಚ್ಛಂದ ನಿರ್ದ್ವಂದ್ವ |
ಜಯ ಜಯ ಘನ ಶ್ಯಾಮ ರಿಪು ಭೀಮ ಶುಭನಾಮ ಜಯ ಜಯಾ ಭಕ್ತಪ್ರೇಮ ||
ಜಯ ಜನಕಜಾಲೋಲ ಜನಪಾಲ ವನಮಾಲ |
ಜಯ ಸಿತಾಂಬುಜನೇತ್ರ ಸರ್ವತ್ರ ನುತಿಪಾತ್ರ |
ಜಯ ದೈತ್ಯನಿರ್ನಾಮ ನಿಸ್ಸೀಮ ಗುಣಧಾಮ ಜಯ ಸತ್ಯಕಾಮ ರಾಮ || ೧೯೬ ||

**ಪಂತುವರಾಳಿ - ರೂಪಕ**
ದೇವ ಲಾಲಿಸಬುಜಲೋಚನ | ಬಿನ್ನಪಗಳ |
ನೀ ವಲಿದು ಭಯ ವಿಮೋಚನ || ಪಲ್ಲ ||
ವಾಯು ಜನಕ ಜನನಿಯಂಜನ | ದೇವಿ ನಾಮ |
ಧ್ಯೇಯ ಹನುಮರೆಂಬರೈ ಜನ ||
ತೋಯಜಾಕ್ಷ ಕೇಳು ಪ್ಲವಗ | ರಾಯ ಸಚಿವನೆನಗೆ  ಮಿಕ್ಕ |
ಮಾಯೆಯರಿಯದೈ ನಿಜಾಂಗವ || ನೋಡು ದಯದೊ |
ಳೀಯೊ ದಿವ್ಯ ಚರಣ ಸೇವೆಯ | ಇಷ್ಟಾರ್ಥವಿತ್ತು |
ಕಾಯೊ ಶರಣನನು ದಯಾಮಯ || ದೇವ || ೧೯೭ ||
ಭಾನುಸುತ ವನೌಕಸಾಧಿಪ | ಋಷ್ಯಮೂಕ |
ತಾಣವದರೊಳಡಗಿ ಶೋಕಿಪ ||
ಜಾಣ ವಾಲಿಯಣ್ಣನವನ | ರಾಣಿಯ ತಾನಿರಿಸಿಕೊಂಡು |
ಗೋಣ ಮುರಿವೆನೆನುತ  ಬೆರಸಿದ | ಮಾತಂಗ ಶಾಪ |
ವಾಣೆಗಿಲ್ಲಿ ಬರಲು ಬೆದರಿದ | ಏನೆಂಬೆನಸಮ |
ತ್ರಾಣಿಯವನು ಬವರ ಬಲ್ಲಿದ || ದೇವ || ೧೯೮ ||
ದೇವರಾಜನಣುಗನಿದಿರಿಗೆ | ಕಾದಿ ಗೆಲುವ |
ನಾವನಿಳೆಯೊಳಿಹನು ಕೇಳ್ ಮಿಗೆ ||
ದೇವ ದಾನವರಲಿ ಕಾಣೆ ರಾವಣನನು ಗೆಲಿದು ಗೆಳೆತ |
ನಾವಗೈದನೆನಗೆ ಮಿಕ್ಕಿಹ | ಮಾತೇಕೆ ಸು |
ಗ್ರೀವ ನಿನ್ನ ಮರೆಯ ಹೊಕ್ಕಿಹ | ಕರೆಯಲೆನ್ನ |
ದೇವ ನಿನ್ನ ಸರಿಸಕಟ್ಟಿಹ || ದೇವ || ೧೯೯ ||

ಬಪ್ಪುದೆನುತ ಪೆಗಲನೇರಿಸಿ | ಜವದೊಳೊಡೆಯ |
ನಿಪ್ಪ ಗಿರಿಗೆ ಒಯ್ದು ಕಾಣಿಸಿ ||
ಮುಪ್ಪುರಾರಿ ಮಿತ್ರನಿರವ | ತಪ್ಪದೊಂದನುಸುರಲಿನಜ |
ಸರ್ಪ ಶಯನನಡಿಯೊಳೆರಗುತ | ದೈನ್ಯದಿಂದ |
ಲಪ್ರಮೇಯ ರಕ್ಷಿಸೆನ್ನುತ | ಮರುಗಿ ಮನದೊ |
ಳಿಪ್ಪ ಬವಣೆಯಲ್ಲ ತಿಳುಹುತ || ದೇವ || ೨೦೦ ||

**ಕಾಂಬೋಧಿ - ಝಂಪೆ**

ಭಕ್ತ ವತ್ಸಲ ಕೇಳು | ಮತ್ತನಗ್ರಜನೆನ್ನ |
ಮಿತ್ರೆಯನು ತಾನಿರಿಸಿಕೊಂಡು ||
ಕತ್ತ ಮುರಿವನು ದೇವ | ಧೂರ್ತನನು ತರಿದು ತನ |
ಗಿತ್ತೆಯಾದರೆ ರುಮೆಯನೆಂದೂ || ೨೦೧ ||
ಮರೆಯೆನುಪಕಾರವನ | ವರತ ಕಪಿ ಬಲ ಸಹಿತ |
ಚರಣ ಸೇವೆಯೊಳಿರ್ಪೆನೀಗ ||
ಅರಿಯೆ ಜೋಡೆಮಗೆ ನಿ | ಷ್ಠುರ ವಾಲಿ ದುರುಳ ದಶ |
ಶಿರರಕ್ಕಸದಿಂದೆನಲಿಕಾಗ || ೨೦೨ ||
ಕಂಡೆನಾದರೆ ಜೀವ | ದಿಂದ ಮರಳುವದುಂಟೆ |
ಹಂದೆ ಖಳನೆನುತ ರಾಘವನು ||
ಚಂಡರಿವೆ ರಣಕೆ ದೋ | ರ್ದಂಡ ವಾಲಿಯ ಕರೆವು |
ದೆಂದನಲ ಮುಖದಿ ಸಖ್ಯವನು || ೨೦೩ ||

**ಭಾಮಿನಿ**

ಹೊಂದುತೊಡನೈತಂದು ಸಂಗರ |
ಕಿಂದ್ರಜನ ಕೂಗಿದನು ರವಿಸುತ |
ಕೊಂದು ಕಳೆವೆನು ಪುರವ ಹೊರವಡು ಭಂಡ ನೀನೆನುತ ||
ಎಂದಡಾ ನುಡಿ ಕೇಳಿ ಗಜಘಟೆ |
ತಂಡದುಲಿಗುರಿದೇಳ್ವ ಸುಪ್ತ ಮೃ |
ಗೇಂದ್ರನೆನೆ ಕಿಡಿಗೆದರಿ ಬಂದಿದಿರಾದನಾ ವಾಲಿ || ೨೦೪ ||

**ಶಂಕರಾಭರಣ - ಮಟ್ಟೆ**

ಎಲವೋ ಹೇಡಿ ನಿಲ್ಲುವೋಡಿ | ತಲೆಯ ಮರೆಸಿ ಬದುಕಿದೆಯಲ |
ಕೊಲುವೆನೀಗ ನಿನ್ನ ಕಾಯ್ವ | ಕಲಿಯದಾವನು || ೨೦೫ ||
ಕಲಿಯ ತೋರ್ಪೆನೆಲವೊ ಕ್ಷಣದೊ | ಳಿಳೆಯ ಋಣವು ಸಂತು ನಿನ್ನ |
ತಲೆಯ ಕಾಯ್ವನೀವುದೆನ್ನ | ಚಲುವ ತರುಣಿಯ || ೨೦೬ ||
ತರುಣಿಗಾಗಿ ಬಂದೆ ಭಳಿರೆ | ಅರೆಯನಡಚಿ ಗವಿಯೊಳೆನ್ನ |
ತರಿಯ ಬಗೆದ ಪಾಪಿ ಬಿಡೆನು ಹರಣ ಮಾತ್ರದಿ || ೨೦೭ ||
ಹರಣಗೊಂಬ ಭಟನ ಪರಿಯ | ನರಿವೆ ನಿಮಿಷ ತಾಳೆನುತ್ತ |
ಶಿರಕೆ ಘೋರ ಶಿಲೆಯೊಳಿಡಲು | ತರಣಿನಂದನ || ೨೦೮ ||
ಕಡುಗಿ ವಾಲಿ ನುಡಿದ ನಿನ್ನ | ಮಡದಿಯೈದೆತನಕೆ ಧಕ್ಕೆ |
ವಡೆವುದೆನುತ ತಡೆದಡಿನಿತು | ಕಡುಹ ತೋರ್ದೆಯ || ೨೦೯ ||

**ಭಾಮಿನಿ**

ಎಂದು ಬಂಡೆಯೊಳೆರಗೆ ರವಿಸುತ |
ನೊಂದು ಓಡಿದ ಋಷ್ಯಮೂಕಕೆ |
ಕಂಡು ರಾಘವನಹಿತನ್ಯಾರೆಂದರಿಯದಸ್ತ್ರವನು ||
ಹಿಂದೆಗೆಯೆ ಬೆಂಬತ್ತುತಿಂದ್ರಜ |
ಹಂದೆ ತೊಲಗೆಂದೆನುತಲಾ ಕಿ |
ಷ್ಕಿಂಧೆಗೈದುತ ಮುದದಿ ಹೊಕ್ಕನು ತಾರೆಯಾಲಯವ || ೨೧೦ ||

**ವಾರ್ಧಕ**
ಇತ್ತಲಿವರರಸುತ್ಯೆತರಲಚ್ಯುತಂಗಿನಜ |
ಮಿತ್ರಕುಲಜರು ಕೊಟ್ಟ ಭಾಷೆಗಳುಕುವರಲ್ಲ |
ನುತ್ತ ನಂಬಿದು ಶಿರವ ತೆತ್ತೆನೆನೆ ದಾಶರಥಿ ಮಿತ್ರನಂ ಸಂತೈಸುತ ||
ಇತ್ತ ಕೇಳೈ ನಿಮ್ಮೊಳಾಳು ಭೇದವ ಕಾಣ |
ದೆತ್ತಿದಸ್ತ್ರವನಿಳುಹಿದೆನು ಸಟೆಯ ಮಾತಲ್ಲ |
ನುತ್ತವನ ಗಳಕೆ ನಿಜ ಕೊರಳ ಮಾಲೆಯ ತೊಡಿಸಿ ಮತ್ತೆ ಕರೆಯೆನೆ ಧೈರ್ಯವ || ೨೧೧ ||

**ಭಾಮಿನಿ**
ತಾಳಿ ಪುರಬಾಹ್ಯದೊಳು ನಿಲುತತಿ |
ಖೂಳ ಬಾರೆಂದುರವಣಿಸೆ ಬಲ |
ಶಾಲಿ ಸತಿಯೊಳು ಸರಸ ಕೇಳಿಯೊಳಿರ್ದನಾ ವಾಲಿ ||
ಕೇಳಿ ಕಿಡಿ ಕಿಡಿಯಾಗಿ ಕಲ್ಪದ |
ಕಾಲಭೈರವನಂತೆ ಭೋರ್ಗರೆ |
ದೇಳಲಾತನ ತಡೆದು ನುಡಿದಳು ತಾರೆ ಕಾಲ್ವಿಡಿದು || ೨೧೨ ||

**ಕಾಂಬೋಧಿ - ಏಕ**
ಲಾಲಿಸೆನ್ನ ನುಡಿಯ ದಯದಿ | ಪ್ರಾಣಕಾಂತ ||
ಸಮರ ಶೀಲವಲ್ಲ ಸೋದರನಲಿ | ಪ್ರಾಣಕಾಂತ || ಪಲ್ಲ ||
ತಪ್ಪೆನುತ್ತ ಕೊಲುವರುಂಟೆ | ಪ್ರಾಣಕಾಂತ || ಪ್ರಾಜ್ಞ |
ರಪ್ಪ ಹಿರಿಯರಣುಗರಹರ | ಪ್ರಾಣಕಾಂತ || ೨೧೩ ||
ಹಿಂದಣ ಸ್ನೇಹವನೆಣಿಸು | ಪ್ರಾಣಕಾಂತ || ಗೈದು |
ದೊಂದಪರಾಧವ ಕ್ಷಮಿಸು | ಪ್ರಾಣಕಾಂತ || ೨೧೪ ||
ಸರುವಥಾ ಬೇಡಿಂದು ಸಮರ | ಪ್ರಾಣಕಾಂತ || ಹರಿಯ |
ನೆರವ ಪಡೆದನಂತೆ ರವಿಜ | ಪ್ರಾಣಕಾಂತ || ೨೧೫ ||

**ಭೈರವಿ - ಏಕ**
ತಿಳುಹಿಸಲೇಕದನೆಲೆಗೆ | ಮನ |
ವಳುಕುವದೆನಗೊಳಗೊಳಗೆ ||
ತಿಳಿಯದದರ ಮತಿ ಮೂಢ | ಘನ |
ಮುಳಿಸನೆ ಕೆಣಕುವ ನೋಡ || ೨೧೬ ||
ಮಂದ ಮತಿಯ ತಹೆನೆಳೆದು | ಕೊಲೆ |
ನೆಂದೆಂದಿಗು ದಿಟ ಮುಳಿದು ||
ಇಂದು ರುಮೆಯ ಸಿಂಗರಿಸು | ಬಲು |
ಚಂದದೊಳೌತಣ ಬಡಿಸು || ೨೧೭ ||
ಜಡಜಾಸನ ಹರಿ ಹರರು | ಮೇಣ್ |
ತ್ರಿದಶ ಭುಜಗ ನರ ಖಳರು ||
ಇದಿರಾಂತರೆ ನಾ ಗೆಲುವೆ | ನೀ |
ಬೆದರದಿರದಕೆಲೆ ಚಲುವೆ || ೨೧೮ ||

**ಭಾಮಿನಿ**
ಎಂದವಳ ಸಂತೈಸಿ ಪುಟನೆಗೆ |
ದಿಂದ್ರಸುತ ಪ್ರೋಲ್ಲಾಸದಿಂ ಬರೆ |
ಕಂಡಿನಜ ಗಿರಿ ತರುನಿಕಾಯಗಳಿಂದಲತಿಜವದಿ ||
ಮಂಡೆಗೆರಗಲು ವಾಲಿಯದ ಸೆಡೆ |
ಚಂಡನಾಡುತ ಪಿಡಿದು ಸಹಜನ |
ಕೊಂಡು ಮರಳಲು ಪುರಕೆ ಕೆಲದಿಂದೆಚ್ಚನಾ ರಾಮ || ೨೧೯ ||

**ವಾರ್ಧಕ**
ಬಿದ್ದನಾ ಹತಿಗೆ ಕಲ್ಪದ್ರುಮಂ ಕೆಡೆದುದೆನ |
ಲುದ್ಧೃತ ಪರಾಕ್ರಮಂ ಗದ್ಗದಿಸಿ ಸುಗ್ರೀವ |
ಮುದ್ದಿಸಿದ ಕೈಗಳಂ ಭಿದ್ರಿಸಿದೆಯೆನುತ ಕೆಲಕಿದ್ದ ರಘುಜನ ಕಾಣುತ ||
ಶುದ್ಧ ಮನದಿಂದ ತಮ್ಮನ ಕೊಂಡು ತಾಯ್ನೆಲ |
ಕೈದ್ದವನ ಕದ್ದೆಚ್ಚ ಕೊಳೆಮಾಳ್ಕೆ ಹೊಲೆಬಾಳ್ಕೆ |
ವಿದ್ಯೆ ಕಲಿತೆಯದೆಲ್ಲಿ ರವಿಕುಲಜ ಸುಡು ನಿನ್ನ ಬುದ್ಧಿ ಬಲ ಶೌರ್ಯಗಳನು || ೨೨೦ ||

**ಭಾಮಿನಿ**
ರೂಢಿ ಪಟ್ಟಕೆ ಸಲ್ಲದಲೆ ಹೋ |
ಗಾಡಿದಬಲೆಯ ಬಯಕೆಗೀ ಹೊಲೆ |
ಹೇಡಿ ಕೊಲೆಯೇ ನಿನಗಿವನು ದಶಮುಖನ ನಿಗ್ರಹಕೆ ||
ಜೋಡಿಯೇ ನಾ ಲೀಲೆಯಲಿ ಕೈ |
ಗೂಡಿಸುವ ಹುಲುಗೆಲಸ ಮೂರ್ಖರಿ |
ಗಾಡಿ ಫಲವೇನಿದು ಭಗೀರಥ ಯತ್ನ ನಿಮಗೆಂದ || ೨೨೧ ||

**ಭೈರವಿ - ಝಂಪೆ**
ಈಶಸಖ ನಗುತೆಂದ | ಕೀಶವರ ಕೇಳ್ವಿಧಿ ವಿ |
ನ್ಯಾಸವಿದು ಜರೆಯೆ ಬರು | ವಾ ಸಫಲವೇನು || ೨೨೨ ||
ಅರರೆ ನಿನ್ನಯ ಸತಿಯ | ದುರುಳ ದಾನವನೊಯ್ದ |
ದರಿಯೆ ವಿಧಿ ವಿನ್ಯಾಸ | ಮರುಗಲೇಕದಕೆ || ೨೨೩ ||
ನಿನ್ನ ವಿಧಿಯಾಯ್ತು ರುಮೆ | ಯನ್ನಳುಪಿ ಖಳನ ವಿಧಿ |
ಮಣ್ಣ ಮುಕ್ಕಿಪುದು ಪರ | ಹೆಣ್ಣಿನೊಡಲುರಿಯು || ೨೨೪ ||
ನಡೆಸಿದಪರಾಧಗಳ | ನಡಗಿಸುವಡೀ ಪಳಿವೆ |
ಪಡೆದ ಸುತೆ ರುಮೆ ಸಾಕ್ಷಿ | ಜಡಜಮುಖಿ ತಾರೆ || ೨೨೫ ||
ಅರಿಯದಾದೆನೆನುತ್ತ | ಮರುಗಲಿನಸುತ ವಿಧಿಯ |
ತರಳ ವಾಲಿಯೊಳನೃತ | ಬರದು ದಿಟವೆಂದ || ೨೨೬ ||

**ಭಾಮಿನಿ**
ನೊಂದು ರಘುವರನೆಂದ ವಿಧಿ ನಿನ |
ಗೆಂದ ವರವೇ ಶಾಪವಾಯ್ತದ |
ರಿಂದ ಮರೆಗೊಂಡೆಚ್ಚೆ ಕ್ಷಮಿಸೆಲೆ ವೀರ ಮತ್ಶರವ ||
ಹಿಂದೆ ಕರೆವೆನು ಸಹಜನೊಡನಾ |
ನಂದದಿಂ ಬಾಳೆನಲು ಚಿತ್ತದಿ |
ಮಂದರಾಧರನಸಮರೂಪವ ಕಾಣುತಾ ವಾಲಿ || ೨೨೭ ||

**ಮಧುಮಾಧವಿ - ಆದಿ**
ರಾಘವೇಶ್ವರ | ಪಾಹಿ ಗೋವಿಂದ |
ನಾಗಶಯನ ಮುಕ್ತಿ | ದೇಹಿ ಮುಕುಂದ || ಪಲ್ಲ ||
ಅರಿತೆ ನೀನ್ಯಾರೆಂಬ | ಪರಿಯ ಲೋಕೇಶ |
ಹರಿದುದಸ್ತ್ರದಲಿ ದು | ರ್ಧರ ಭವಪಾಶ ||
ಧರೆಯೊಳಾನಿರಲಾರೆ | ಕರುಣಿಸು ಮೋಕ್ಷ |
ದುರಿತ ಭಂಜನ ದೇವ | ದುರ್ಜನ ಶಿಕ್ಷ || ೨೨೮ ||
ನೀ ಸತ್ಯವ್ರತನಹು | ದೆನ್ನಹಂಕೃತಿಯು |
ಘಾಸಿ ಮಾಡಿದುದಜ್ಞಾ | ನದ ನಿಂದ್ಯ ಸ್ತುತಿಯು ||
ದೋಷ ಶತವ ಮರೆ | ದಿತ್ತು ಸಾಯುಜ್ಯ |
ಓ ಸರ್ವಾತ್ಮಕ  ಪಾಲಿ | ಸಾದ್ಯಂತ ವರ್ಜ್ಯ || ೨೨೯ ||

ಬಾ ತಮ್ಮ ಸುಗ್ರೀವ | ಜಾತನಂಗದನ |
ಪ್ರೀತಿಯಿಂ ಪೊರೆ ಮರೆ | ನಾ ಗೈದ ಹದನ ||
ಆ ತಾರೆ ಪದಿಬದೆ | ತನವ ಕಾಯೆಂದು |
ಸೀತಾರಾಮನ ಪದ | ವನು ಸೇರ್ದನಂದು || ೨೩೦ ||

**ಭಾಮಿನಿ**
ಮರುಗಿ ಮುಡಿಯಡಿಗಿಟ್ಟ ತಾರೆಯ |
ಧರಣಿಪತಿ ಸಂತೈಸಿ ನಿನ್ನನು |
ಸ್ಮರಿಪ ಮನುಜರ ದುರಿತ ಹರಿದಪುದೆನುತ ವರವಿತ್ತು ||
ತಿರೆಯನಿನಸುತಗಿತ್ತು ವರ್ಷೋ |
ತ್ತರಣ ಗೈದನು ಶ್ರುವಣಗಿರಿಯಲಿ |
ಹರಿಗಳೆಪ್ಪತ್ತೇಳು ಕೋಟಿಯ ನೆರಹಿ ಖಗಜಾತ || ೨೩೧ ||

**ವಾರ್ಧಕ**
ಸಂಗಡಿಸಿ ಬಂದು ಕಾಣಿಸಿ ರಾಘವಗೆ ಪರಿಚ |
ಯಂಗೊಳಿಸಿ ನೇಮವಾಂತಂಗದಗೆ ಮೂಲಬಲ |
ಮಂ ಗೊಂಡು ನಳ ನೀಲ ಮೈಂದ ಮಾರುತಿ ಜಾಂಬವಂ ಗವಯ ಮುಖ್ಯರೊಡನೆ ||
ಪಿಂಗದರಸೈತೆಂಕನುಳಿದವರು ಮಿಕ್ಕಿಹ ದಿ |
ಶಂಗಳೋಳ್ ಜಾನಕಿಯ ಹುಡುಕಿ ವಾರ್ತೆಯನವಧಿ |
ತಿಂಗಳದಿ ತಾರದಿರೆ ಕೊಂದು ಬಿಸುಡುವೆನೆನಲ ವಂಗೆರಗಿ ಬೀಳ್ಕೊಳ್ಳುತ || ೨೩೨ ||

**ಭಾಮಿನಿ**
ಬಂದು ಭೂಪತಿಗೆರಗಲವದಿರ |
ಚಂದದಿಂ ಬೀಳ್ಕೊಟ್ಟು ಹನುಮಂ |
ಗೆಂದನೇಕಾಂತದಲಿ ರಘುವರ ಜಾನಕಿಯ ಕುರುಹ ||
ತಂದೆಯಾದರೆ ನೀನೆ ವಾರ್ತೆಯ |
ನೆಂದು ಮುದ್ರಿಕೆಯೀಯೆ ಪೊಡಮಡು |
ತಂದು ತೆರಳಿದರವರವರು ನಿರ್ದಿಷ್ಟ ದೆಸೆಗಾಗಿ || ೨೩೩ ||

**ಪಂತುವರಾಳಿ - ಮಟ್ಟೆ**
ಪೊರಟರಾ ವನೌಕಸೇಂದ್ರರು | ಹರುಷ ಮಿಗಲು |
ಪೊರಟರಾ  ವನೌಕಸೇಂದ್ರರು || ಪಲ್ಲ ||
ಪೊರಟರಾ ವನೌಕಸೇಂದ್ರ | ರಿರದೆ ಮಾತೆ ಸೀತೆಯರಸಿ |
ಸರಸದಿಂ ಚತುರ್ದೆಸೆಯಲಿ | ಹರಿದು ತ್ವರಿತ ಗಮನದಿಂದ || ಅ. ಪ. ||
ಧರೆಯ ಚರಿಸಿ ದಣಿದು ರಜತ | ಗಿರಿಯ ಸತ್ಯ ಸ್ವರ್ಗ ಲೋಕ |
ವರಸಿ ಮರಳಿ ಭೂಮಿಗಿಳಿದು | ಭರದೊಳೊಂದು ಗಹ್ವರವನು ||
ಪರಿಕಿಸುತ್ತಲೆಲ್ಲರಿಳಿದರು | ಸ್ವಯಂಪ್ರಭೆಯೋ |
ಳರಿವುತಾಗಲೆಳೆಗೆ ಬಂದರು | ಸಂಪಾತಿಯಿರ್ಪ |
ವರ ಮಹೇಂದ್ರಾಚಲದಿ ಸೇರ್ದರು || ಪೊರಟ || ೨೩೪ ||

**ತುಜಾವಂತು - ಝಂಪೆ**
ಮರುಗುತಂಗದನೆಂದ | ಬರಿದೆ ಕಪಿವರರು |
ಧರಣಿಜೆಯನರಸಿ ಬಳ | ಲಿದಿರೆ ಬಲ್ಲಿದರು ||
ದುರುಳ ರಾವಣನಿರವ | ನೊರೆವರಾರಿಲ್ಲ |
ವರ ರಾಮಕಾರ್ಯಕಂ | ತರವೊದಗಿತಲ್ಲ || ೨೩೫ ||
ಪೇಳಿದವಧಿಗೆ ದಿವಸ | ಮೇಲೆ ಮೂರಿಹುದು |
ಪೇಳದಿರೆ ಕುರುಹ ಕಡೆ | ಗಾಲವೆಮಗಹುದು ||
ಮಾಲೋಲಸತಿ ದೊರಕ | ಳಾಲಸ್ಯವೇಕೆ |
ತಾಳಿ ನಿರಶನ ವ್ರತವ | ಬಾಳನೀಗಲಿಕೆ || ೨೩೬ ||

ಪರರೊಳಳಿವುದಕಿಂತ | ಹರಿಯ ಧ್ಯಾನದಲಿ |
ತೊರೆವುದೊಳ್ಳಿತು ನಾವೆ | ಹರಣವೆನೆ ಕೇಳಿ ||
ಕರುಣದಿಂ ಸಂಪಾತಿ | ಕರೆದವರೊಳೆಂದ |
ಅರುಹಿ ದೇಹತ್ಯಾಗ | ದಿರವ ಜವದಿಂದ || ೨೩೭ ||

**ಭಾಮಿನಿ**

ಎನಲು ಜಾಂಬವನೆಂದ ಪಿತನ |
ಪ್ಪಣೆಗೆ ರಘುವರ ಪಂಚವಟ್ಯದ |
ವನದೊಳಿರೆ ತತ್ಸತಿಯ ದಶಗಳನೊಯ್ಯಲಾತನಲಿ ||
ಸೆಣಸಿ ಮಡಿವ ಜಟಾಯು ಪೇಳಿದ |
ಡಿನಜನಲ್ಲಿಗೆ ಬರಲು ಸಖ್ಯದಿ |
ಜನಕಜಾನ್ವೇಷಣಕೆ ನೃಪನೆಮಗಿತ್ತನಾಣತಿಯ || ೨೩೮ ||

**ಕೇದಾರಗೌಳ - ಅಷ್ಟ**

ಪಂಕಜಾಕ್ಷಿಯ ಬಲು | ಬಿಂಕದೊಳರಸುತ್ತ |
ಲಂಕೆಯ ನೆಲೆಗಾಣದೆ ||
ಮಂಕುವಡೆದು ದೇಹಾ | ತಂಕ ಯೋಚನೆಯು ತ |
ವಾಂಕಿತ ವೆನಬಾರದೆ || ೨೩೯ ||
ಜನಕನರುಣ ಶ್ಯೇನಿ | ಜನನಿ ಸಂಪಾತಿ ಯ |
ನ್ನನುಜ ನಾತನೆ ಜಟಾಯು ||
ದನುಜ ಯೋಜನ ಶತ | ವನಧಿಯಾಚೆಯೊಳಿಹ |
ಕನಕಲಂಕೆಯೆ ಮನೆಯು || ೨೪೦ ||
ಎಂದ ಮಾತ್ರದಿ ಬೆಂದ | ಗರಿಗಳುದ್ಭವಿಸಲು |
ಬಂದು ಶೈಲಾಗ್ರದಲಿ ||
ನಿಂದು ತೋರಿದನಿವ | ರಿಗೆ ಲಂಕಾ ದ್ವೀಪವ |
ನಂದು ಸರಾಗದಲಿ || ೨೪೧ ||
ಕಂಡು ಮಹಾಂಬುಧಿ | ಯನು ಮಿಕ್ಕವರು ಹತ್ತ |
ರಿಂದ ಯೋಜನ ತೊಂಭತ್ತ ||
ಚಂದದಿಂ ಜಿಗಿವೆವೆಂ | ದೆನೆ ವಾಲಿಸುತ ಶತ |
ವಿಂದು ಲಂಘಿಸುವೆ ಮಾತ್ರ|| ೨೪೨ ||
ತಿರುಗುವದನುಮಾನ | ವೆನೆ ಜಾಂಬವನು ವಾಯು |
ತರಳನನೀಕ್ಷಿಸುತ ||
ಸರಿ ವೀರ ನೀನಲ್ಲ | ದಿಲ್ಲ ನಿಶ್ಚಯವೆನೆ |
ಮರುತಾತ್ಮಭವನುಬ್ಬುತ || ೨೪೩ ||

**ವಾರ್ಧಕ**

ಅರ್ಗಳೆಯ ಹನುಮನುಬ್ಬೇರಿದಂ ಸಾರಿದಂ |
ಪೆರ್ಗಡಲ ದಾಂಟಿ ಕಂಡಾರ್ತೆಯಂ ವಾರ್ತೆಯಂ |
ನುಗ್ಗಡಿಪೆ ನಿಮಗೆ ಮಗುಳೆನ್ನುತಂ ಸನ್ನುತಂ ಭರ್ಗಾಪ್ತನಂ ನೆನೆವುತಂ ||
ಧಿಗ್ಗನುತ್ತರಿಸಿ ಮುಂಬಟ್ಟೆಯಂ ಹೊಟ್ಟೆಯಂ |
ನುಗ್ಗಿ ಸಿಂಹಿಕೆಯ ತರಿದೊಟ್ಟುತಂ ಮೆಟ್ಟುತಂ |
ಒಗ್ಗಿ ಬೀಳ್ಕೊಂಡು ಮೈನಾಕವಂ ಮೇಕವಂ ನಿರ್ಗಮಿಸಿದಂ ಲಂಕೆಗೆ || ೨೪೪ ||

**ಭಾಮಿನಿ**
ಇಳಿದು ಭೇದಿಸಿ ದ್ವಾರಯಂತ್ರವ |
ಒಳ ಪೊಗಲು ಮಾರುತಿಯ ಕಾಣುತ |
ಮುಳಿದು ಲಂಕಾಲಕ್ಷ್ಮಿ ತಡೆದಳು ಘೋರ ರೂಪಿನಲಿ ||
ಎಲವೊ ಕೋಡಗ ಜೀವದಾಸೆಯ |
ನುಳಿದು ಕಳವಿಂದೆಮ್ಮ ನಗರದಿ |
ಚಲಿಸುತಿಹೆ ಸರಿನಿಶೆಯೊಳಟ್ಟಿದರಾರು ಪೆಸರೇನು || ೨೪೫ ||

**ಘಂಟಾರವ - ಅಷ್ಟ**
ಕಳ್ಳನಲ್ಲಂಜನಾಸುತ ಹನುಮ ನಾ ||
ಫುಲ್ಲನಾಭನ ಚರಣ ಸೇವಕ | ಖುಲ್ಲೆ ನೀನ್ಯಾರರುಹಿಸು || ೨೪೬ ||
ಲಂಕೆಯನ್ನಂಗೋಪಾಂಗ ಲಂಕಿಣಿಯೆಂಬ ||
ರ್ಮಂಕು ಮರ್ಕಟ ಸಾಯದಿರು ನಡೆ | ಬಿಂಕ ನಡೆಯದು ನಮ್ಮಲಿ || ೨೪೭ ||
ಒಳ್ಳೆ ಮಾತಲಿ ಬಿಡು ದ್ವಾರ ತಡೆಯೆ ಹೆಂ ||
ಗಳ್ಳನಿಂ ಮೊದಲಲ್ಲಿ ನಾ ಯಮ | ನಲ್ಲಿಗಟ್ಟುವೆ ನಿನ್ನನು || ೨೪೮ ||
ಕರುಳ ಬೆನ್ನಿನೊಳುಗಿವೆ ನೋಡೆನುತವ ||
ಳೆರಗಲಸಿಯನು ಕಸಿದು ಮುಷ್ಟಿಯೊ | ಳೆರಗಿದನು ನಡು ಶಿರದೊಳು || ೨೪೯ ||
ಘಡ ವನೌಕಸ ಕಡೆಗಾಲ ಸನಿಹವೆಂ ||
ದಿಡಲು ಶೂಲವ ಮುರಿದದರ ಮು | ಕ್ಕಡಿಯ ಗೈದನು ಮರುತಜ || ೨೫೦ ||

**ಭಾಮಿನಿ**
ವೇದ್ಯವಿದು ಕಡೆಗಾಲವೀ ದು |
ರ್ಭೇದ್ಯ ಶೂಲವು ಮುರಿದುದಿನ್ನಿ |
ಲ್ಲಿರ್ದು ಫಲವಿಲ್ಲೆನುತ ಲಂಕಾಭಾಗ್ಯಸಿರಿಯಡಗೆ ||
ಸೇರ್ದು ಸೂಕ್ಷ್ಮಾಕೃತಿಯ ಗೃಹ ಸ |
ಮ್ಮರ್ದದಲಿ ಶೋಧಿಸುತ ಸತಿ ಸಹಿ |
ತಿರ್ದು ನಿದ್ರಿಪ ರಾವಣೇಂದ್ರನ ಕಂಡನಾ ಹನುಮ || ೨೫೧ ||

**ಕಂದ ಪದ್ಯ**
ಚಲುವೆಯ ಕಂಡಚ್ಚರಿಯಿಂ |
ಖಳನಿವನಂ ಮಾಸತಿಯೊಲಿದಳೆ ಹಾ ಹಾಯೆನುತಂ ||
ಕೊಲುವೆನು ತಾನೆನಲಿವನಂ |
ಜಲಜಾಕ್ಷನದೇಂ ಪೇಳ್ವನೊ ಮುಳಿದೆನ್ನೊಡೆಯಂ || ೨೫೨ ||

**ವಾರ್ಧಕ**
ಎಚ್ಚರದಿ ಸ್ಮರಿಸಿ ಮಗುಳೀಕ್ಷಿಸುತ ಬಲತೊಡೆಯ |
ಮಚ್ಚಲಾಂಛನವಿಲ್ಲ ಪದುಮರೇಖೆಯ ಪದದಿ |
ಸ್ವಚ್ಛಾಂಗಿಯಲಿ ಕಾಣೆ ಶಿವಶಿವಾ ಕೆಡು ನುಡಿದೆನಚ್ಯುತನ ಸತಿಗೆನ್ನುತ ||
ಬೆಚ್ಚಿ ಭಕ್ತಿಯಲಿ ಬಾಯ್ ಹೊಯ್ದುಕೊಳುತಲ್ಲಿಂದ |
ಚಚ್ಚರದಿ ಪೊರಟಶೋಕಾವನಕ್ಕೈತಂದು |
ಸಚ್ಚರಿತ್ರೆಯ ಕಂಡು ಮರನೊಳಡಗಿರೆ ಸೀತೆಗುಚ್ಚರಿಸಿದರ್ ಖಳೆಯರು || ೨೫೩ ||

**ಯರಕಲ ಕಾಂಬೋಧಿ - ಅಷ್ಟ**
ಏನು ಸಂದೇಹವೆ | ಜಾನಕಿ ಮಗು | ಳೇನು ಸಂಶಯವೆ || ಪಲ್ಲ ||
ಏನು ಸಂಶಯ ನೋಡೆ | ದಾನವೇಂದ್ರನ ಕೂಡೆ |
ಕ್ಷೋಣಿಯೊಳೆಣೆಗಾಣೆವು || ನಿಶ್ಚಯವು || ಅ. ಪ. ||
ರಾವಣೇಂದ್ರನಂಥ | ವೈಭವಗಳು | ಮಾನವರಿಗಿಲ್ಲ ನಿತ್ಯ ||
ದೇವ ದಾನವ ಭುಜ | ಗಾವಳಿ ಬೆಸಕೈವು |
ದಾವವನೆಣೆ ಜಗದಿ || ಐಶ್ವರ್ಯದಿ || ಏನು || ೨೫೪ ||

ವೃತ್ರ ವೈರಿಯನು | ಗೆದ್ದವ ಸುತ | ಶತ್ರುಘ್ನರವನು ||
ಒತ್ತಿನನುಜ ದಿನ | ನಿತ್ಯ ದೇವಾಂಗನ |
ಮೊತ್ತ ಸೇವಿಪುದು ನಿನ್ನ || ಮಾಳ್ಪುದು ಮನ || ಏನು || ೨೫೫ ||
ಏಕೆ ಬೊಗುಳುವಿರೆ | ಕುನ್ನಿಯನೆನ್ನೊ | ಳ್ಯಾಕೆ ಪೊಗಳುವಿರೆ ||
ಆ ಕಮಲಾಂಬಕ | ನಾ ಕಡೆಗೂದಲಿ |
ಗೀಖಳನಿದಿರೆ ಮುಂತೆ || ಎಂದಾ ಸೀತೆ || ಏಕೆ || ೨೫೬ ||

**ಭಾಮಿನಿ**
ಪ್ರೀತನೈತಂದೀದುರಾತ್ಮನ |
ಘಾತಿಸದೆ ಬಿಡನಾದರೀಯಮ |
ಯಾತನೆಗೆ ಬದಲಳಿದು ಕಾಂಬುದೆ ಲೇಸು ಪತಿ ಪದವ ||
ನಾಥನೆಂದಿಗೆ ಬಹನೊತಾನೆಂ |
ದಾತಲೋದರಿ ಹಲುಬುತಿರೆ ನಿ |
ದ್ರಾತಿಶಯದಿಂ ಖಳೆಯರೊರಗಲು ವಾತಸುತ ಮನದಿ || ೨೫೭ ||

**ಕಂದ ಪದ್ಯ**
ಇವಳೇ ಮಾಸತಿ ತ್ರಿಜಗ |
ಕ್ಕಿವಳೇ ಮಾತೆ ಸೀತೆ ಪೂತೆ ರಾಘವದಯಿತೆ ||
ಇವಳಂ ಪಡೆದವರೇಂ ಪು |
ಣ್ಯವ ಗೈದರೊ ನಾಂ ಕಂಡು ಧನ್ಯನೆನ್ನುತಡಿಗೆಡೆದಂ || ೨೫೮ ||

**ತೋಡಿ - ಆದಿ**
ಜಯ ಜಯ ಜನಕ ಜಾತೆ | ಓ ಮಾತೆ ಸೀತೆ |
ಜಯತು ಶ್ರೀ ಹರಿ ವನಿತೆ || ಪಲ್ಲ ||
ಜಯ ಕ್ಷೀರನಿಧಿವಾಸೆ | ಜಯತು ಸಜ್ಜನ ಪೋಷೆ ||
ಜಯ ಪದ್ಮಾಕರೆ | ಜಯ ಸಿದ್ಧಿಪ್ರದೆ |
ಜಯ ಸುಖದಾತೆ | ಜಯ ಜಗ ವಿನುತೆ || ಜಯ ಜಯ || ಅ. ಪ. ||
ಪ್ರಾಣ ಸನ್ನಿಭ ಮಾರುತ | ಪೆತ್ತಾತ ಮುಖ್ಯ |
ಪ್ರಾಣ ನಾ ಚರಣಾನತ ||
ಕೌಣಪಾಧಮ ನಿನ್ನ | ತಾನೊಯ್ದುದನು ಖಿನ್ನ |
ಪ್ರಾಣದೊಳಿಹ ಖಗ | ಶ್ಯೇನಿಜನರುಹಲು |
ಪ್ರಾಣದೊಡೆಯ ನೆಲೆ | ಗಾಣಲ್ಕಟ್ಟಿದ || ಜಯ ಜಯ || ೨೫೯ ||
ಹುಡುಕಿ ನಾವ್ ಬಹು ಪರಿಯ | ಸೇರ್ದೆವು ತೆಂಕ |
ಜಡಧಿಯಂಚಿನ ಗಿರಿಯ ||
ನುಡಿಯೆ ಸಂಪಾತಿಯೀ | ಕಡಲ ಲಂಘಿಸಿ ತಾಯಿ |
ಯಡಿಗಳನೀಕ್ಷಿಸಿ | ಕಡುಧನ್ಯನು ಹುಸಿ |
ನುಡಿಯೆನು ಮುದ್ರಿಕೆ | ಯೊಡೆಯನದಿದೆಕೊ || ಜಯ ಜಯ || ೨೬೦ ||

**ಭಾಮಿನಿ**
ಕಂದೆರದು ಕಮಲಾಕ್ಷಿ ಕೊಂಡದ |
ಕುಂದಿದಾತ್ಮವ ಹೊಂದುತತುಲಾ |
ನಂದದಿಂ ಪಣೆಗೊತ್ತಿ ಮುದ್ರಿಸುತಂಗುಳೀಯಕವ ||
ಚಂದವೇನೈ ಹನುಮ ಸರುವರಿ |
ಗೆಂದಿಗಿನಿಯನ ಕಾಂಬೆ ದಿನ ದಿನ |
ಬಂದು ದಾನವನೀವ ನಿರ್ಬಂಧವದನೆಂತೆನಲಿ || ೨೬೧ ||

**ಕಾಂಬೋಧಿ - ಝಂಪೆ**
ಆನಲಾರೆನು ವ್ಯಥೆಯ | ಕೌಣಪನ ವಧಿಸಿ ಪ್ರಿಯ |
ತಾನೆನ್ನ ಬಿಡಿಸದಿರೆ ಸೆರೆಯ ||
ಪ್ರಾಣಗಳೆವೆನು ಮರೆಯ | ದಾನರಾಧಿಪಗುಸುರು |
ನೀನೆನುತ ಕೊಡೆ ಶಿಖಾಮಣಿಯ || ೨೬೨ ||
ಕೊಂಡು ಬಲಬಂದೆರಗಿ | ಮುಂದೆ ದಿನವೆಂಟರಲಿ |
ತಂದೆ ರಾಘವನ ಕರೆತಂದು ||
ಹಂದೆಗಳ ಮಡುಹಿ ತವ | ಬಂಧನವ ಬಿಡಿಸದಿರೆ |
ಸಿಂಧುಶಯ ಭಜಕನಲ್ಲೆಂದು || ೨೬೩ ||
ನಂದನವ ಪುಡಿಗೈದ | ಬಂದು ರಣಕಡಹಾಯ್ದ |
ಕಂದನಕ್ಷಾದಿಗಳ ತರಿದ ||
ಇಂದ್ರಜಿತು ಕೆರಳಿ ನಡೆ | ತಂದು ಬ್ರಹ್ಮಾಸ್ತ್ರದಿಂ |
ಬಂಧಿಸುತ ಪಿತನೆಡೆಗೆ ಸರಿದ || ೨೬೪ ||

**ಭಾಮಿನಿ**
ಅಂದಿನೋಲಗದಿದಿರು ಹನುಮನ |
ತಂದು ನಿಲ್ಲಿಸಿ ಶಕ್ರಜಿತ ಪಿತ |
ಗೆಂದನೆಮ್ಮುಪವನವ ಕೆಡಿಸಿದ ಕೋತಿಯಿದೆಯೆನುತ ||
ಕಂಡು ದಶಶಿರ ಪಿರಿದು ಖಿಡುಗವ |
ಮಂದಮತಿ ಬಗುಳೆಮ್ಮ ತೋಟವ |
ಕುಂದಿಸಿದುದೇಕ್ಯಾವನನುಚರ ನಾಮವೇನೆಂದ || ೨೬೫ ||

**ಕಂದ ಪದ್ಯ**
ಅಬ್ಬರಿಸಲ್ ಖಳ ಮರುತಜ |
ನುಬ್ಬುತ ಬಂಧನಮಂ ಬಿಸುಟತ್ಯುಮ್ಮಹದೋಳ್ ||
ಕರ್ಬುರ ಸರಿಗದ್ದುಗೆಯಂ |
ಹೆರ್ಬಾಲದಿ ಗೈದೇರ್ದು ಗಾಂಭೀರ್ಯದೊಳಂ || ೨೬೬ ||

**ಮಧುಮಾಧವಿ - ತ್ರಿವುಡೆ**
ಮಾತೆ ಸೀತೆಯ ಕದ್ದ ದಶಮುಖ |
ದಾತನೊಯ್ದನೆನುತ್ತೊಡೆಯ ರಘು ||
ನಾಥನಟ್ಟಿದನರಸುತಿಲ್ಲಿಗೆ |
ದೂತ ವಾತಜ ಬಂದೆನು || ೨೬೭ ||
ಆವವನು ನೀ ರಜತ ಗಿರಿಯ ಕ |
ರಾವಲಂಬದಿ ನೆಗಹಿದರಿವಿ |
ದ್ರಾವಣನೊ ಹೆಂಗಳ್ಳ ಕಾಮುಕ |
ರಾವಣನೊ ಪೇಳೆಂದನು || ೨೬೮ ||
ನಾವು ನೀತಿಯನರಿಯೆವಪ್ರತಿ |
ಕೋವಿದರು ಪರಚಕ್ರದೂತನ |
ನೀವಿಧದಿ ಬಂಧಿಸಲು ನ್ಯಾಯವ |
ದಾವುದೆಂಬುದ ಕಾಣೆವು || ೨೬೯ ||

**ಭಾಮಿನಿ**
ಮಾತ ಕೇಳದೆ ವನವ ಚೂರ್ಣಿಸಿ |
ಯಾತುಧಾನರ ಬಡಿದುದೀ ನಿ |
ರ್ಭೀತವಹ ಲಾಂಗೂಲ ತಾನಪರಾಧಿಯಲ್ಲೆಂದ ||
ಖ್ಯಾತಿಯಲಿ ದನುಜೇಂದ್ರ ದೋಷಿತ |
ಕೋತಿಯಲ್ಲಹುದಹುದು ಬಾಲಕೆ |
ಸಾತಿಶಯ ತೈಲಾರ್ದ್ರ ವಸನವ ತೊಡಿಸಿ ಸುಡಿರೆಂದ || ೨೭೦ ||

**ವಾರ್ಧಕ**

ಮತ್ತ ದಾನವ ಸುಭಟರಿಕ್ಕೆಲದಿ ಮರುತಜನ |
ಮುತ್ತಿ ಬಾಲಕೆ ತೈಲ ವಸ್ತ್ರಮಂ ತೊಡಿಸುತುರಿ |
ಹೊತ್ತಿಸಿದ ಮಾತ್ರದೊಳಗೆತ್ತಿ ಬೀಸುತ ಹನುಮ ಸುತ್ತಣವರಂ ಹೋಮಿಸಿ ||
ಸತ್ವದಿಂ ಜಿಗಿದು ರಾವಣನರ್ಘಭವನಮಂ |
ವಿತ್ತೇಶನಖಿಲ ಸಂಪತ್ತಿನಿಂ ತುಂಬಿ ತುಳು |
ಕುತ್ತಿರುವ ಪುರವ ಸಂಪೂರ್ತಿ ಶಿಖಿಗಾಹುತಿಯನಿತ್ತು ಪೃಥ್ವಿಜೆಗೊಂದಿಸಿ || ೨೭೧ ||

**ಭಾಮಿನಿ**

ಹರಿದು ವಾಲದ ಹರಿಯ ನಂದಿಸಿ |
ಹರಿಪದದೊಳಾಗಮಿಸಿ ವಿವರಿಸಿ |
ಹರಿಬಲವನೊಡವೆರಸಿ ಹರಿಕುಲದೀಪಗಭಿನಮಿಸಿ ||
ಹರಿಯಣುಗ ಚೂಡಾಮಣಿಯ ಶ್ರೀ |
ಹರಿಯ ಪದಕರ್ಪಿಸಲು ಕೊಂಡದ |
ಹರಿಶಯನ ಹರಿದೊಗುವ ಹರಿಸಸ್ಫುರಿತ ಬಾಷ್ಪದಲಿ || ೨೭೨ ||

**ಸುರುಟಿ - ಏಕ**

ಬಂದಿರೆ ಕಪಿ ವರರು | ಬಹುಪರಿ |
ನೊಂದಿರೆ ಬಲ್ಲಿದರು ||
ಮಂದಗಮನೆಯನು | ಸಂಧಿಸಿ ವಾರ್ತೆಯ |
ತಂದಿರೆ ಋಣಿಗಳೆಂ |ದೆಂದಿಗು ನಿಮಗಾವ್ || ೨೭೩ ||
ಆಲಿಪುದಿನಜಾತ | ಹೃದಯವು |
ಸೀಳುವುದೈ ಸೀತಾ ||
ಬಾಲಿಕೆ ದಿನದಿನ | ಖೂಳ ನಿರ್ಬಂಧವ |
ತಾಳುವಳೆಂತೈ | ಕಾಲಗಳೆವರೆ || ೨೭೪ ||
ದಾನವನನು ವಧಿಸಿ | ಮತ್ಪ್ರಿಯ |
ಮಾನಿನಿಯನು ಬಿಡಿಸಿ ||
ಕ್ಷೋಣಿ ಹೊರೆಯ ಕಡೆ | ಗಾಣಿಪೆನೆನುತ ಮ |
ಹಾರ್ಣವದೆಡೆಯೊಳು | ಸೇನೆಯ ನಿಲಿಸಿದ || ೨೭೫ ||

**ಕಂದ ಪದ್ಯ**

ಕಡಲಾಣ್ಮನ ಗರ್ವವನುಂ |
ಅಡಗಿಸಿ ಸೇತುವೆಯನು ಗೈಸುತ್ತಿರಲಾಗಳ್ ||
ಒಡನದನರಿತು ದಶಾನನ |
ನೆಡೆಗೈದೆರಗುತ ಬೇಹಿನ ಚರರತಿ ಭಯದೊಳ್ || ೨೭೬ ||

**ಮುಖಾರಿ - ಏಕ**

ಜೀಯ ಬಿನ್ನಹ ರಾವಣೇಂದ್ರ | ನರ ನಾಗ ಸುರನಿ |
ಕಾಯ ಸಂಸ್ತೂಯ ಗುಣಸಾಂದ್ರ || ಪಲ್ಲ ||
ರಾಯರಮಲ ಪದ | ತೋಯಜ ಷಟ್‌ಚರ |
ಣಾಯತ ಬೇಹಿನ | ಸೇವಕರಿದಕೊ || ಜೀಯ || ಅ. ಪ. ||
ಹರಿಗಳೆಪ್ಪತ್ತೇಳು ಕೋಟಿ || ಒಟ್ಟಾಗಿ ತೆಂಕ |
ಶರಧಿಯುದ್ದಕೆ ಸೇತುವೆಗಟ್ಟಿ ||
ತರಣಿಜ ಪಡೆಯಂತುರವಣಿಸುತಲತಿ |
ತ್ವರಿತದಿ ಲಂಕೆಗೆ | ಪೊರಟಿಹ ರಘುಜನ |
ತರುಣಿಯನಿತ್ತೆಂ | ಹರಣವ ಕಾಯ್ವುದು || ಜೀಯ || ೨೭೭ ||

**ಭಾಮಿನಿ**

ಸೀಳಿ ಬೆನ್ನಿಲಿ ತೆಗೆವೆ ಕರುಳನು |
ಖೂಳರಿರ ಭಯವೇಕೆ ತಾನಿರೆ |
ಕೀಳು ನರ ವಾನರರೊಳೇನಹುದೆನುತ ದಶಗಳನು ||
ಮೂಲಬಲ ಮೇಳವಿಸಿ ಯುದ್ಧಕೆ |
ನಾಳೆ ಪೊರಡುವುದೆನೆ ಪ್ರಹಸ್ತಗೆ |
ಕೇಳುತಂಣನ ಕಾಲಿಗೊಂದಿಸುತಲಿ ವಿಭೀಷಣನು || ೨೭೮ ||

**ಪಂತುವರಾಳಿ - ಝಂಪೆ**

ಸರುವಥಾ ಬೇಡ ರಘು | ವರನ ವೈರ || ಪಲ್ಲ ||
ತರವಲ್ಲ ಪರನಾರಿ | ಸುರತ ನರಕದ ದಾರಿ || ಸರುವಥಾ || ಅ. ಪ. ||
ಧರೆಯ ದೂರನು ಕೇಳಿ | ಹೊರೆಯನಿಳುಹುವ ಮನದಿ |
ನರರೊಳುದಿಸಿದನಿಳೆಗೆ | ಪುರುಷೋತ್ತಮ ||
ಸಿರಿ ಸತಿಯ ನೆವಮಾಡಿ | ಹರಿಗಳಿಂದೊಡಗೂಡಿ |
ಹರಣಗೊಂಬನು ದನುಜ | ಪರಿವಾರವ || ಸರುವಥಾ || ೨೭೯ ||
ಭೂಧರವ ನೆಗಪಿ ಗಿರಿ | ಜಾಧವನ ಮನವೊಲಿಸಿ |
ವೇದಭಾಷ್ಯವ ಪ್ರಕಟ | ಗೈದ ಪ್ರಾಜ್ಞ ||
ಆದಿಲಕ್ಷ್ಮಿಯನಿತ್ತು | ಮಾಧವನ ಪದಕೆರಗ |
ದಾದರಾನಿರೆನಿಲ್ಲ | ನೀಡಿಸಾಜ್ಞ || ಸರುವಥಾ || ೨೮೦ ||
ಮುಂದೆ ನಿಲದಿರು ತೊಲಗು | ಹಂದೆ ಪರಮಂಡಲವ |
ಕೊಂಡಾಡಿ ಮದ್ಬಲವ | ನಿಂದಿಸುವೆಯ ||
ಎಂದು ರಾವಣ ಕೈದು | ಗೊಂಡಡವ ಕಾಲ್ವೊಗೆದು |
ಬಂದು ರಘುವರಗೆರಗು | ತೆಂದ ಪರಿಯ || ಸರುವಥಾ || ೨೮೧ ||

**ಯಮುನಾ ಕಲ್ಯಾಣಿ - ಆದಿ**

ಶರಣು ಶರಣು ರಾಘವ | ಜನಾರ್ದನ |
ದುರಿತ ಭಂಜನ ಕೇಶವ || ಪಲ್ಲ ||
ಶರಣು ಸುರಾಸುರ | ನರಭುಜಗಾರ್ಚಿತ ||
ಸಿರಿವರ ವಾರಣ | ವರದ ವಿಶ್ವೇಶ್ವರ |
ಕರುಣದಿ ರಕ್ಷಿಸು | ಶರಣ ಮಂದಾರ || ಶರಣು || ಅ. ಪ.||
ಚರಣ ನಂಬಿದ ಭಕ್ತರ | ಪೊರೆವುದೆ ನಿನ್ನ |
ಬಿರಿದು ಪಾಪಾಸಕ್ತರ ||
ತರಿದು ಭೂಭಾರವ | ಪರಿಹರಿಸಲ್ಕವತರಿಸಿದ ಮಾಯಾ |
ನರಹರಿ ನಿನ್ನನು | ಮರೆಹೊಕ್ಕೆನು ಶಿರ |
ವರಿಯುವನಗ್ರಜ | ಕರುಣದಿ ರಕ್ಷಿಸು |
ಹರಣವನುಳಿಪಿ || ಶರಣು || ೨೮೨ ||

**ಭಾಮಿನಿ**

ಎಂದು ವಂದಿಸಿ ಕರಪುಟಾಂಜಲಿ |
ಯಿಂದ ನಿಂದಿರಲೆರಗಿ ರಘುಪತಿ |
ಗೆಂದನನಿಲಜ ಸಹಜ ವೈಷ್ಣವನಿವನ ಸಲಹೆನುತ ||
ಚಂದದಿಂ ಪಿಡಿದೆತ್ತಿ ರವಿಕುಲ |
ಚಂದ್ರನಭಯವನಿತ್ತು ಶರಣಗೆ |
ಸಿಂಧು ಬಂಧವ ನೋಡಿ ಲಂಕೆಗೆ ಪೊರಟ ಶುಭ ದಿನದಿ || ೨೮೩ ||

**ವಾರ್ಧಕ**
ಚಂದದಿಂ ಕಪಿಸುಭಟವೃಂದ ನೆಗೆದಾರ್ಭಟಿಸಿ |
ದಂಡು ನಡೆವಬ್ಬರಕೆ ಡೆಂಡೆಣಿಸೆ ದಿಗ್ದಂತಿ |
ಕುಂದಿದಂ ಕಮಠ ಗಿರಿ ಕಂದರಗಳಲ್ಲಾಡೆ ಸಿಂಧು ಕುದಿದುಕ್ಕಿತೇಳು ||
ತಂಡ ತಂಡದ ತೆರೆಗಳಂದದಿಂದಾಕಡಲ |
ಬಂಧವಂ ದಾಟಿ ನಡೆತಂದು ತ್ರಿಕುಟಾಚಲವ |
ಹೊಂದಿ ಹೊರವಲಯದೊಳ್ ಗುಂಡಾರ ಹೊಯ್ಸಿ ರಘುನಂದನಂ ವಾಲಿಸುತಗೆ || ೨೮೪ ||

**ಭಾಮಿನಿ**
ತೆರಳಿ ದಶಶಿರನೆಡೆಗೆ ಸಾಮದಿ |
ಧರಣಿಜೆಯನಿತ್ತೆರಗಿ ಸೋದರ |
ಗರಸುಪಟ್ಟವ ಗೈದು ಬಾಳ್ವುದು ಮಿಕ್ಕರಾಹವಕೆ ||
ಪರಿಜನರ ಮೇಳೈಸಿ ಯಮ್ಮಯ |
ಹೊರೆಗೆ ಬಹುದೆಂದರುಹಿ ಬಾರೆನ |
ಲೆರಗಿ ಬೋಳ್ಕೊಂಡೈದಿ ಕಂಡನು ಪುರದ ವೈಭವವ || ೨೮೫ ||

**ಕಂದ ಪದ್ಯ**
ಅರರೇ ಖಳ ಸಂಸ್ಕೃತಿಯ |
ಚ್ಚರಿಯಂ ಪೆರ್ಚಿಸುತಿಹುದೈ ಸಿರಿಗೆಣೆಯಿಲ್ಲಿಳೆಯೊಳ್ ||
ವರ ರತ್ನಾಳಿ ಸುವರ್ಣಂ |
ಪೆರತಿರದೀಪುರ ಗೋಪುರ ನೆಲ ಸೌಧಂಗಳ್ || ೨೮೬ ||

**ಪಂತುವರಾಳಿ - ಅಷ್ಟ**
ಸಿರಿಯಿದು | ಬಾಳ | ಲರಿದು ನಾಗರಿಕ ವೈ | ಖರಿಯಿದು || ಪ ||
ಮನ | ಕರಗುವದಿದ ಕಂಡು | ಬರಿದೆ ಯೋಚನೆಯೆಂದು ||
ತೆರಳಿ ಪೊಕ್ಕಾ ರಾವಣೇಂದ್ರನ  ಸರಿಸದಲಿ ನಿಲುತಾಕ್ಷಣ || ಸಿರಿ || ಅ. ಪ. ||
ಆಲದಿ | ಖಳ | ಲೋಲ ಗದ್ದುಗೆಯ ವಿ | ಶಾಲದಿ | ಗೈದು |
ಮೇಲೇದಾರ್ಸನವ ಸ | ಮ್ಮೇಳದಿ | ಸುರ | ಪಾಲನ ಮೊಮ್ಮ ವಾ | ಚಾಲದಿ |
ಪೇಳ್ದ | ಮೇಲುವರಿವ ದೈತ್ಯ | ಜಾಲದಿ ||
ಅಹ | ಕೇಳಿ ಬಲ್ಲಿರೆ ಧರ್ಮ | ಶೀಲ ಶ್ರೀ ರಘುರಾಮ ||
ಪಾಳಯದ ಕಟ್ಟಾಳ್ಗಳೊಳು ಬಲ | ಶಾಲಿ ವಾಲಿಯ ಬಾಲ ನಾನಹೆ || ಸಿರಿ || ೨೮೭ ||
ಬಲ್ಲೆವು | ಕಡು | ಖುಲ್ಲ ಮರ್ತ್ಯನ ಕೃತ್ಯ | ವೆಲ್ಲವು | ಹೆಣ್ಣ |
ನಲ್ಲಿ ದುರಾಚಾರವಲ್ಲವು | ಇದಿ | ರಲ್ಲಿ ವಾಲಿಯ ಗೆಲಲಿಲ್ಲವು |
ಜೀವ | ಗಳ್ಳನಿಗೆಣೆ ಯಾವ | ನಿಲ್ಲವು ||
ಬರಿ | ಜಳ್ಳು ಮಾನವನ ನೆ | ಮ್ಮಲ್ಲಿ ಬಣ್ಣಿಸದಿರು ||
ಹಲ್ಲ ಮುರಿವನು ರಾವಣೇಶ್ವರ | ನಿಲ್ಲಿಸೆಂದ ಪ್ರಹಸ್ತನು || ಸಿರಿ || ೨೮೮ ||
ಯಾರಯ್ಯ | ಖಳ ರಾವಣನೆಂಬ ಮಹರಾಯ | ಪರ |
ನಾರಿಯ ಕದ್ದ ವಿ | ಚಾರಿಯ | ಜಗ | ಮೂರಕುಬ್ಬಸ ದುಃಖ |
ಕಾರಿಯ | ಕೇಳ್ವ |  ಪಾರುಪತ್ಯವನಿತ್ತ | ನಾರಾಯ ||
ರಘು | ವೀರನಂಗನೆ ಯಿತ್ತು | ಪೌರುಷಗಳ ಬಿಟ್ಟು ||
ಸೇರಿ ಬಾಳ್ವನೊ ಮೀರಿದರೆ ಘನ | ಘೋರ ಯುದ್ಧವದೋರಿ ಸಾಯ್ವನೊ || ಸಿರಿ || ೨೮೯ ||

**ಭಾಮಿನಿ**
ಇಂತೆನಲು ದನುಜೇಂದ್ರ ಬೊಬ್ಬಿರಿ |
ದಂತಕನ ಹೆತ್ತಯ್ಯನೊ ಕ |
ಲ್ಪಾಂತ ವಡಬನೊ ತಿಳಿಯೆನೆನೆ ಖತಿಮಸಗಿ ಕಿಡಿಯಿಡುತ ||
ತುಂಟನನು ಬಂಧಿಸುವುದೆನೆ ಖಳ |
ತಿಂತಿಣಿಯು ಮುಸುಕಲ್ಕೆ ನುಗ್ಗರೆ |
ದಂತರಿಕ್ಷಕೆ ಜಿಗಿದು ಸೇರ್ದನು ಪಡೆಯನಂಗದನು || ೨೯೦ ||

**ಕೇದಾರಗೌಳ - ಝಂಪೆ**
ಸಂಧಿ ಮುರಿದಿಹ ವಾರ್ತೆಯ | ಕೇಳಿ ರಘು |
ನಂದನನು ತಾಳಿ ಖತಿಯ ||
ಕಂಡು ಕಪಿಬಲಕಾಜ್ಞೆಯ | ನಿತ್ತ ಪುರ |
ಕಿಂದೆ ಮುತ್ತಿರಿ ಲಗ್ಗೆಯ || ೨೯೧ ||
ಅಪ್ಪಣೆಯ ಕೊಂಡೆರಗುತ | ಇನಜ ಮುಂ |
ತಪ್ಪ ಭಟ ರುರಿದೇಳುತ ||
ಅಪ್ಪಳಿಸಿ ಪುರದುರ್ಗವ | ಕೆಡಹಿ ಕಾಯ್ |
ದಿಪ್ಪ ಸಮ ಖಳ ವರ್ಗವ || ೨೯೨ ||
ಮಡುಹಿ ಮುಂದೈದುತಿರಲು | ಚಾರರದ |
ನುಡಿಯೆ ಹರಿಜಿತನಾಗಳು ||
ಸಿಡಿಲಿನಂತಾರ್ಭಟಿಸುತ | ಕೃವ್ಯಾದ |
ಪಡೆವೆರೆದು ಪರುಠವಿಸುತ || ೨೯೩ ||

**ಮುಖಾರಿ - ಏಕ**
ಬಂದನಾ ಶಕ್ರುಜಿತನು ರಣಕೆ | ವೈರಿ ಮಾರಣಕೆ |
ಬಂದ ನಾ ಶಕ್ರುಜಿತನು ರಣಕೆ || ಪಲ್ಲ ||
ತಂಡ ತಂಡದ ಖಳ ಮಂದಿ | ಗಜ ರಥ ಹಯ |
ವೃಂದ ಪಾತಕ ಶಸ್ತ್ರ ಬಂಡಿ || ಸಂದಣಿಸುತ ರಣ |
ದುಂದುಭಿರವಕೆ ವ | ಸುಂಧರೆಯದುರ | ಲ್ಕಂದು ದಶಾನನ |
ನಂದನನಾಹವ | ಖಂಡಪರಶುವೆನೆ || ಬಂದ || ೨೯೪ ||
ಪುರವ ಮುತ್ತಿದ ರಿಪು ಭಟರ | ಚಂಡಾಡುತಸುರ |
ತರಳ ಹೊಕ್ಕನು ಕಪಿನಿಕರ || ಕರಿ ಕದಳಿಯ ಹಿಂ |
ಡರೆವಂದದಿ ಬಡಿ | ದುರುಳಿಸುತಿರಲದ |
ನರಿತು ಮಹೋಗ್ರದಿ | ತರಣಿಜ ತಡೆದ || ಬಂದ || ೨೯೫ ||

**ಶಂಕರಾಭರಣ - ಮಟ್ಟೆ**
ಹೆಣ್ಣಿನಾಸೆಗಾಗಿ ಮರೆಯೊ | ಳಣ್ಣನಸುವ ಹೀರಿದಧಮ |
ಮಣ್ಣುಗೂಡಿಸುವೆನು ವಿಶಿಖ | ಗಣ್ಣ ತಡೆದರು ||
ವಹ್ನಿನಯನನೇಕೆ ಪರರ | ಹೆಣ್ಣಿಗಳುಪಿದಸುರನಣುಗ |
ನಿನ್ನ ಕೊಲಲು ರವಿಜಗಗ್ರ | ಗಣ್ಯವೆನದಿರು || ೨೯೬ ||
ಎನುತ ಭಾರಿ ಶಿಲೆಯೊಳಿಡಲು | ಜುಣುಗುತಸುರ ದಿವ್ಯ ಶರವ |
ನಿನಜನಂಗಕೆಸೆಯೆ ಮರೆದು | ತನುವ ಮಲಗಿದ ||
ಜನಕನಿರವ ಕಂಡು ವಾಲಿ | ಯಣುಗನುರಿಯನುಗುಳುತಾಗ |
ದನುಜನಂಗಕೆತ್ತಿ ಗಿರಿಯ | ನಿನಿತು ಪೇಳಿದ || ೨೯೭ ||
ಎಲವೊ ದನುಜ ಹರಿಯ ಹಗೆಯ | ಬಳಸಿ ಬದಕಲುಂಟೆ ಸರಿದು |
ದಿಳೆಯ ರುಣವೆನುತ್ತಲೆರಗೆ | ಖಳನು ಸವರುತ ||
ಮುಳಿದು ಘೋರ ಶಕ್ತಿಯಿಂದ | ಘಳಿಲನಂಗಕಿಡಲು ಮೂರ್ಛೆ |
ದಳೆಯಲರಿತು ಮರನ ಮುರಿದು | ಕಲಿ ಮರುತ್ಸುತ || ೨೯೮ ||
ಕಡುಹಿನಿಂದ ಬಡಿಯಲದರ ಕಡಿದು ದನುಜನುರುತರಾಸ್ತ್ರ |
ಗಡಣದಿಂದ ಮುಸುಕೆ ಹನುಮ | ಪುಡಿಯ ಗೈದನು ||
ಕಿಡಿಯ ಸೂಸುತಾಗಳಸುರ | ನಡರಿ ನಭವನಂಧಕಾರ |
ವಡಸಿ ಮಾಯದಿಂದ ಪ್ಲವಗ | ಪಡೆಯ ತರಿದನು || ೨೯೯ ||

**ಭಾಮಿನಿ**
ಸಿಡಿಲು ಮಿಂಚುಗಳಿಂದ ಕಲ್ಪದ |
ಕಡೆಯ ಮೇಘದ ತೆರದೊಳವನಿಗೆ |
ರುಧಿರ ಮಾಂಸಗಳುದುರಲದ್ಭುತ ಬಾಣವೃಷ್ಟಿಯಲಿ ||
ಕೆಡಹುತಿರೆ ರಿಪುಬಲವ ಕಂಪಿಸು |
ತಡಿಗಡಿಗೆ ಸುರನಿಕರ ಹಾಯೆನ |
ಲೊಡೆಯನಡಿಗೊಂದಿಸಿ ವಿಭೀಷಣ ನುಡಿದ ವಿನಯದಲಿ || ೩೦೦ ||

**ಸೌರಾಷ್ಟ್ರ - ಅಷ್ಟ**
ದೇವ ಕಂಡೆಯ ರಣ | ಕಿಂದ್ರಾರಿಯೈತಂದ | ರಾಘವೇಂದ್ರ || ದೈತ್ಯ |
ರಾವಣ ಸುಕುಮಾರ | ನತುಲ ಪರಾಕ್ರಮ | ರಾಘವೇಂದ್ರ || ೩೦೧ ||
ಅಂಧಕಾರವ ಗೈದ | ನಡಗಿ ಬಾಂದಳದೊಳು | ರಾಘವೇಂದ್ರ || ಕಪಿ |
ವೃಂದವ ಕೊಂದುದ | ಕೆಣೆಯುಂಟೆ ಮಾಯಾವಿ | ರಾಘವೇಂದ್ರ || ೩೦೨ ||
ವಾಯುಸಂಭವ ಮುಖ್ಯ | ರಾಯತಿಗೆಡಿಸಿದ | ರಾಘವೇಂದ್ರ || ಖಳ |
ಕಾಯಕವನು ಪರಿ | ಹರಿಸಿ ಭೃತ್ಯರ ಕಾಯೊ | ರಾಘವೇಂದ್ರ || ೩೦೩ ||

**ಕಂದ ಪದ್ಯ**
ಇಂತೆನೆ ಲಕ್ಷ್ಮಣನುರಿದೆ |
ದ್ದಂತಕನೆನೆ ಪಲ್ಗಡಿವುತ ಕೊಂಡಸ್ತ್ರಗಳಂ ||
ಕಂತುಪಿತನ ಪದಕೆರಗು |
ತ್ತಂ ತಳುವದೆ ಪೊರಟಾಗ್ರಹದಿಂ ಖಳಗೆಂದಂ || ೩೦೪ ||

**ನಾದನಾಮಕ್ರಿಯೆ - ಅಷ್ಟ**
ಎಲವೊ ಖಳಾಧಮ ಮರೆಯೊಳು | ಹೇಡಿ |
ಗೊಳದಿದಿರಾಗೆಮ್ಮ ಧುರದೊಳು ||
ಛಲವ ನೀ ಮೆರೆಸಬೇಕಲ್ಲದೆ | ಇಂಥ |
ಕಳವಿನಳವಿ ನೀತಿಯಪ್ಪುದೆ || ೩೦೫ ||
ಎನುತ ರಾಮನ ಸಿರಿ ಚರಣವ | ನೆನೆ |
ದನುಗೊಳಿಸುತ ವೈಷ್ಣವಾಸ್ತ್ರವ ||
ಕನಲಿ ಕರ್ಣಾಂತಕೆ ಸೆಳೆಯುತ್ತ | ಬಿಡೆ |
ಕ್ಷಣದಿ ಮಾಯವ ಪರಿಹರಿಸುತ್ತ || ೩೦೬ ||
ಖಳನ ತೇರ್ಹಯಗಳ ಖಂಡಿಸೆ | ಧರೆ |
ಗಿಳಿದನ್ಯ ರಥದಿ ಪ್ರಕಾಶಿಸೆ ||
ಬಲು ಶರದೊಳು ರಾಮನನುಜನು | ಮೂರ್ಛೆ |
ಗೊಳಿಸಿ ಕೊಂದನು ಮಿಕ್ಕಸುರರನ್ನು || ೩೦೭ ||

**ಮಾರವಿ - ಏಕ**
ಕಿಡಿಯುಗುಳುತ ಖಳ | ನೊಡನೇಳುತ ನರ | ರಧಮ ಸತಿಯ ತುಡುಕಿ ||
ವಿಧಿಸಿದಳಲ ತವ | ರುಧರದಿ ತಣಿಸುವೆ | ಖಡುಗಕೆ ಬಲಿಯಿಕ್ಕಿ || ೩೦೮ ||
ಬಲ್ಲೆನೆಲ್ಲವೊ ಹಂ | ಗಳ್ಳನಣುಗ ಛಲ | ಸಲ್ಲದು ನಿನಗೆನುತ ||
ಬಿಲ್ಲಿಗೆ ಬಲುಶರ | ನಿಲ್ಲಿಸಿ ಬಿಡಲದ | ನೆಲ್ಲವ ಖಂಡಿಸುತ || ೩೦೯ ||
ಉರಿವ ಮಹಾ ಫಣಿ | ಶರವನುಗಿಯೆ ಸಾ | ವಿರವಾಯ್ತದ ಬಿಡಲು ||
ಪರಿಗಣನೆಯ ಮಿ | ಕ್ಕರಿಗಳ ಬಂಧಿಸು | ತುರುಳಿಸೆ ಶೀಘ್ರದೊಳು || ೩೧೦ ||

**ಭಾಮಿನಿ**
ಶರದ ಬಲುಹೆಂತುಟೊ ಮಹೀಧರ |
ತರಳೆ ಕೇಳ್ ಬಿಗಿವಡೆದು ರಾಘವ |
ವರ ವಿಭೀಷಣ ಸಹಿತಲುರುಳಿದರಖಿಲ ನಾಯಕರು ||
ತಿರುಗೆ ದಾನವ ಪುರಿಗೆ ನಿಶಿಯೊಳು |
ಗರುಡದೇವನು ಬರಲು ಬಂಧನ |
ಹರಿದು ನೃಪನೀಕ್ಷಿಸಿದನುಳಿದವರೊಡನೆ ನಿಜ ಬಲವ || ೩೧೧ ||

**ವಾರ್ಧಕ**
ಕಂಡ ಕಡೆಯಲಿ ಕಪಿಗಳಟ್ಟುಮಯ ಬೆಟ್ಟುಮಯ |
ದಿಂಡುರುಳುವಮಿತ ಗಾಯಾಳಮಯ ಸೀಳಮಯ |
ಸಂದಣಿಸಿ ನೆಲಸಿದರುಣಾಂಬುಮಯವಂಬುಮಯ ತುಂಡಿಸಿದ ವೃಕ್ಷ ಮಯವು ||
ತಂಡ ತಂಡದ ಖಳರ ಮುಂಡಮಯ ರುಂಡಮಯ |
ಖಂಡಿಸಿದ ಕರಿತುರಗ ದಿಂಡಮಯ ಖಂಡಮಯ |
ಸಂದುಡಿದು ಕೆಡೆದ ಕರಚರಣಮಯ ಕರುಣಮಯದಿಂದೆಸೆವ ರಣಕಣವನು || ೩೧೨ ||

**ಭಾಮಿನಿ**
ಕಾಣುತವನಿಪ ಮರುಗಲೌಷಧ |
ದ್ರೋಣಗಿರಿಯೊಳಗಿಹುದದರ ಪವ |
ಮಾನಿ ತರಲಿ ಸುಷೇಣ ಬದುಕಿಪನೆಂದ ಜಾಂಬವನು ||
ಭಾನು ಮಾರ್ಗದಿ ತೆರಳಿ ಮುಖ್ಯ |
ಪ್ರಾಣ ತರೆ ಮೂಲಿಕೆಯ ಕೊಂಡಾ |
ಶ್ರೇಣಿ ಮೃತಸಂಜೀವಿನಿಯೊಳೆಬ್ಬಿಸಿದನೆಲ್ಲರನು || ೩೧೩ ||

**ಕಂದ ಪದ್ಯ**
ಉದಯದಿ ಕೈಗಲಸುತ ಖಳ |
ಗಡಣದೊಡನೆ ದೇವ ನರಾಂತಕ ರಳಿಯಲ್ಕಾಗಲ್ ||
ಒಡೆಯನಿಗೆ ಪರಿಚರರರುಹ |
ಲ್ಕದನಾಲಿಸುತತ್ಯುಗ್ರದಿ ಕಿಡಿಯಿಡುತಸುರಂ || ೩೧೪ ||

**ಸೌರಾಷ್ಟ್ರ - ತ್ರಿವುಡೆ**
ಕಂಡರೋಡುವ ಮನುಜ ಮರ್ಕಟ |
ತಂಡವೆಮ್ಮನು ಕೆಣಕಿ ಜೀವಿಸೆ |
ಗಂಡುಗಲಿ ತಾನೆನಿಸಿ ಫಲವೇ | ನಿಂದು ರಣದಿ || ೩೧೫ ||
ಬಡಿದು ಕೋತಿಗಳಡಗ ಶಾಕಿನಿ |
ಗಡನಕೌತಣ ಬಡಿಸಿ ರಘುಜನ |
ಕೆಡಹಿ ಸುಲಿಸುವೆ ಪಿಡಿ ದನುಜ ಕುಲ | ಗೆಡುಕನನ್ನು || ೩೧೬ ||
ಬರಲಿ ಭೈರವ ಚಾಪವಾಹಿಮ |
ಕಿರಣಹಾಸ ವಿಧಾತರಥವೆಂ |
ದುರವಣಿಸಲತಿಕಾಯನಯ್ಯನ | ಚರಣಕೆರಗಿ || ೩೧೭ ||

**ಭಾಮಿನಿ**
ಮಂಡೆ ಬಲಿತಿಹುದೆಂದೆನುತ ಹೆ |
ಬ್ಬಂಡೆಯನು ಹಾಯ್ವಪರೆ ಪಿತ ಕೈ |
ಗುಂಡಿನಲಿ ಬ್ರಹ್ಮಾಂಡ ಭಾಂಡವನೊಡೆಯಲೆಳಸುವರೆ ||
ಚಂಡ ವೈಶ್ವಾನರನ ಕರ್ಪುರ |
ಖಂಡವಿದಿರಿಪುದುಂಟೆ ಸಮರೋ |
ದ್ದಂಡ ರಘುಪತಿಯಸ್ತ್ರಕಿದಿರಿಲ್ಲಹಿತ ಬೇಡೆಂದ || ೩೧೮ ||

**ಜಂಜೂಟಿ - ಅಷ್ಟ**

ತಾತ ಯೇನಿದು ಮರುಳಾಟ | ವೇದವೇತ್ತ ವಿಖ್ಯಾತ ಸಾಮ್ರಾಟ ||
ಖ್ಯಾತಿ ಯೇನಿದು ರಘು ನಾಥನ | ಹಗೆ ಸರ್ವ ||
ಘಾತವಲ್ಲದೆ | ರೀತಿಯಪ್ಪುದೆ | ನೀ ತಿಳಿಯೆಯಾ | ನೀತಿ ಕೋವಿದ || ತಾತ || ೩೧೯ ||
ಅಖಿಲ ಬ್ರಹ್ಮಾಂಡವ ರಚಿಸಿ | ಜೀವ ನಿಖಿಲದಂತರ್ಯಾಮಿಯೆನಿಸಿ ||
ಸಕಲ ತನ್ನೊಳಗೈಕ್ಯ | ಗೊಳಿಸಿ | ಮೇಣ್ ಸೃಜಿಸುವ ||
ಶಕುತ ಸಾಕ್ಷಾ | ದ್ವಿಷ್ಣು ರಘುಪತಿ |
ಪ್ರಕೃತಕೀ ಹಗೆ | ಯುಕತವೇ ತೆಗೆ || ತಾತ || ೩೨೦ ||
ಖರ ವಿರಾಧರ ತಲೆಗಳೆದ | ಮಹ |
ಶರಧಿಯುದ್ಧಕೆ ಸೇತು ಬಲಿದ || ತರಿದನೆಮ್ಮವರನೆ |
ಲ್ಲರ ಧುರ ದೊಳು ರಘು || ವರಗೆ ಸೀತೆಯ | ನಿತ್ತು ಸಹಜಗೆ |
ಧರೆಯ ಪಟ್ಟವ | ಗೈವುದುಚಿತವು || ತಾತ || ೩೨೧ ||

**ಭಾಮಿನಿ**

ಇದಿರು ನಿಲದಿರು ಹೇಡಿ ಫಡ ಹೆ |
ತ್ತೊಡಲ ಭಾರಕ ತೊಲಗು ತನ್ನಯ |
ದೃಢವ ನೀನೇನ್ ಬಲ್ಲೆ ಬಿಡುವೆನೆ ತೊಟ್ಟ ಛಲಗಳನು ||
ಮೃಡನೆ ತಡೆದರು ಬಿಡೆನೆನುತ ದಶ |
ವದನನೇಳಲ್ಕರಿತು ಹೆರವರ |
ಹೃದಯವಾರ್ಗಳವರಿಯಲೆನುತತಿಕಾಯನುತ್ಸಹದಿ || ೩೨೨ ||

**ಕೇದಾರಗೌಳ - ಝಂಪೆ**

ಜೀಯ ತಾ ವೀಳಯವನು | ಬರಿದೆ ಮನ | ನೋಯದಿರು ರಿಪು ಬಲವನು ||
ಸಾಯಬಡಿವೆನು ಸಹಸವ | ನೋಡೆನಲು | ರಾಯನಿತ್ತನು ನೇಮವ || ೩೨೩ ||
ತಂದೆಯನು ಬೀಳ್ಕೊಳ್ಳುತ | ತಾಯ್ಗೆರಗಿ | ಚಂದದಿಂ ನೇಮಗೊಳುತ ||
ದಂಡೆ ತುಳಸಿಯ ಕೊರಳೊಳು | ಧರಿಸುತ ಶ್ರೀ | ಪುಂಡ್ರ ರೇಖೆಯ ಪಣೆಯೊಳು || ೩೨೪ ||
ಭರದಿ ಮಣಿರಥವೇರುತ | ಕರದಿ | ಧನು | ಶರವಾಂತು ಬಲವೆರಸುತ ||
ಭರಿತ ಹರುಷದೊಳುಬ್ಬುತ | ತನ್ನವರ | ಕರೆ ಕರೆದು ನುಡಿದ ನಗುತ || ೩೨೫ ||

**ವಾರ್ಧಕ**

ಬನ್ನಿ ಪ್ರಾಕ್ತನಪುಣ್ಯ ಕರ್ಮಫಲ ಸೇರ್ದುದದೊ |
ಬನ್ನಿರೆಲ್ಲರ ಭಾಗ್ಯ ರವಿಯುದಯಮಾದುದದೊ |
ಬನ್ನಿರಖಿಲೇಷ್ಟಾರ್ಥ ಸುರಧೇನು ಕರೆವುದದೊ ಬನ್ನಿರೈ ಬನ್ನಿರೆಲ್ಲ ||
ಬನ್ನಿ ಸಂಸಾರ ಕಡಲುತ್ತರಿಪ ನಾವೆಯದೊ |
ಬನ್ನಿ ಭವಬಂಧನಗಳನ್ನರಿವ ಪರಶುವದೊ |
ಬನ್ನಿರೆಮ್ಮುದ್ಧಾರ ಕರ್ತೃ ಭಗವಂತನದೊ ಬನ್ನಿರೀಪ್ಸಿತ ಪೊಂದಲು || ೩೨೬ ||

**ಕಾಂಬೋಧಿ - ಝಂಪೆ**

ಉಚ್ಚರಿಸುತಿಂತು ನಡೆ | ದಚ್ಯುತನ ಸೈನ್ಯವನು |
ನುಚ್ಚುನೂರಾಗೆ ಖಂಡಿಸಿದ ||
ಎಚ್ಚರಿಸಲದ ವಿಭೀ | ಷಣ ರಘುಜಗೆರಗಿ ಖತಿ |
ಪೆರ್ಚಿ ಸೌಮಿತ್ರನಿದಿರಾದ || ೩೨೭ ||
ಕಾಣುತತಿಕಾಯ ಖಳ | ಸೇನೆಗಳ ನಿಲಿಸಿ ರಾ |
ಮಾನುಜನೊಳೆಂದ ತವನಾಮ ||
ಏನಿಹುದು ರವಿಕುಲ ಲ | ಲಾಮನೋ ಲಕ್ಷ್ಮಣನೊ |
ನೀನರುಹಿಸೆನಲು ನಿಸ್ಸೀಮ || ೩೨೮ ||

ದನುಜ ಕೇಳ್ಳೆ ನಿನ್ನ | ಮನಕೆ ತೋರಿದ ತೆರದೊ |
ಳೆಣಿಸಬಹುದೆಂದ ಲಕ್ಷ್ಮಣನು ||
ರಣಕದಾವವನಾದ | ರೆಣಿಕೆಯೇನೆಮ್ಮಾತ್ಮ |
ಚಿನುಮಯಾರ್ಪಣವೆನುತ್ತವನು || ೩೨೯ ||

**ಭಾಮಿನಿ**

ಪಾವನಾತ್ಮಕ ನೀನೆ ಜಗದಧಿ |
ದೈವವೆಂಬುದ ಬಲ್ಲೆನಿದೊ ಸ |
ದ್ಭಾವದಿಂದರ್ಚಿಸುವೆ ಶಸ್ತ್ರದೊಳೆನುತ ತೆಗೆದೆಚ್ಚ ||
ಭಾವಶುದ್ಧದಿ ಗೈವ ಷೋಡಶ |
ದಾ ವಿಧಾನದ ಪೂಜೆಗಳ ಹ |
ರ್ಷಾವಹದಿ ಕೈಕೊಂಡು ಲಕ್ಷ್ಮಣನೆಂದ ಪೊಗಳುತ್ತ || ೩೩೦ ||

**ಪಂಚಾಗತಿ - ಮಟ್ಟೆ**

ಭಳಿರೆ ವೈಷ್ಣವಾಗ್ರಗಣ್ಯ | ಧರೆಯೊಳುಂಟೆ ನಿನ್ನ ಪೋಲು |
ವಲಘು ಭಕ್ತರದರೊಳಸುರ | ಕುಲದೊಳೆಂದನು || ೩೩೧ ||
ಭಕ್ತಿಯಿಂದಲಧಿಕ ರಣದಿ | ಶಕ್ತಿ ಮೆರೆಸಿ ಚಿತ್ತ ವಲಿಸಿ |
ಮುಕ್ತಿ ಪದವ ಪಡೆವೆನೆನುತ | ರಕ್ಕಸಾತ್ಮಜ || ೩೩೨ ||
ಘಟ್ಟನುಲಿವುತಕ್ಷಯಾಸ್ತ್ರ | ವೃಷ್ಟಿಗರೆಯಲಷ್ಟ ದೆಸೆಯೊ |
ಳಟ್ಟಿ ಹೊಯ್ದುದರಿಯದಾಯ್ತು | ಸೃಷ್ಟಿ ನಭಗಳು || ೩೩೩ ||
ಅಕ್ಷಯಾತ್ಮನನುಜನದರ | ತಕ್ಷಣದಲಿ ಸವರುತವನ |
ವಕ್ಷಕಿಡಲು ದಿವ್ಯ ಶರದಿ | ಲಕ್ಷ್ಯಗೆಟ್ಟನು || ೩೩೪ ||

**ಭಾಮಿನಿ**

ಸಾಯಕದಿ ಸೌಮಿತ್ರಿ ದೈತ್ಯ ನಿ |
ಕಾಯವನು ಮರ್ದಿಸಿದನೆದ್ದತಿ |
ಕಾಯ ಕೊನೆಯಾಯ್ತಕಟ ಪಿತನಾಯುಷ್ಯಕೆಂದೆನುತ ||
ಕಾಯ ಶಾಶ್ವತವಲ್ಲ ಮಿಕ್ಕಿನ |
ಮಾಯೆ ನಮಗೇಕೆನುತ ಕಮಲದ |
ಳಾಯತಾಕ್ಷನ ಹೃದಯ ಪೀಠದಿ ನಿಲಿಸಿ ನುತಿಸಿದನು || ೩೩೫ ||

**ಕಂದ ಪದ್ಯ**

ಜಯ ವೇದೋದ್ಧಾರ ಮಹೀಧರ |
ಜಯತು ಹಿರಣ್ಯಕ ಹರ ನರಹರಿ ಮಾರಮಣಂ ||
ಜಯ ಬಲಿಬಂಧನ ಭಾರ್ಗವ |
ಜಯ ರಘುವರ ಸುರವಂದಿತ ವಾಸುಕಿ ಶಯನಂ || ೩೩೬ ||

**ಪಂತುವರಾಳಿ - ಮಟ್ಟೆ**

ತಡವದೇಕೆ ವೀರ ತೊಡು ನೀ |
ನೊಡನೆ ಜಡಜಭವ ಶರ ||
ಒಡನೆ ರಾಮನಡಿಯ ಕೂಡಿ |
ನಡೆವೆ ದೃಢದಿ ಕಿಂಕರ || ೩೩೭ ||
ಎನುತ ಭಾರಿ ಧನುವಗೊಂಡು |
ಕಣೆಯ ಸುರಿಸಲು ||
ಕ್ಷಣದಿ ವನಜಜಾಂಡ ನಡುಗಿ |
ತನಿತು ಭಯದೊಳು || ೩೩೮ ||

ಕಡಿವುತಂಣನಡಿಯ ನೆನವು |
ತೊಡನೆ ಲಕ್ಷ್ಮಣ ||
ಬಿಡಲಚಾಸ್ತ್ರ ಝಡಿದು ಶಿರವ |
ಕಡಿದುದಾಕ್ಷಣ || ೩೩೯ ||

**ಭಾಮಿನಿ**

ಭಾನುಪಥದಲಿ ನೆಗೆದು ಶಿರ ಹರಿ |
ವಾಣದಾರತಿಯೆನೆ ಸುಳಿದು ಗೀ |
ರ್ವಾಣ ವಂದಿತನಂಘ್ರಿಗುರುಳಿತು ರಾಮ ರಾಮೆನುತ ||
ದಾನವಾಧಿಪನರಿತು ಲಯದ ಕೃ |
ಶಾನುವೆನೆ ಖತಿ ಮಸಗಿ ಸಮರಕೆ |
ತಾನೆ ಸನ್ನಹವಾಗಿ ಪೊರಟನು ಸೇನೆ ಸಹಿತಾಗಿ || ೩೪೦ ||

**ಸೌರಾಷ್ಟ್ರ - ತ್ರಿವುಡೆ**

ರಣಕೆ ಬಹ ದಶಶಿರನ ರಘುಪತಿ |
ಯನುಜ ಕಂಡಡಹಾಯ್ದು ರೋಷದಿ |
ಜನನಿಗಳುಪಿದ ಪಾಪಿ ಕೊಲುವೆನು | ಕ್ಷಣದಿ ನಿನ್ನ || ೩೪೧ ||
ಗಳಹದಿರು ನರರಧಮ ನೀತಿಯ |
ನುಳಿದು ಭಗಿನಿಯ  ನಾಸಿಕವನರಿ |
ದಳಲ ಖಳ ತವ ರುಧಿರ ಜಲದಲಿ ಕಳೆವೆನೆಂದ || ೩೪೨ ||
ಎನುತಲೀರ್ವರು ಸೆಣಸುತಿರೆ ವಿಭೀ |
ಷಣನೆಣಿಸುತೆಂತಹುದೊ ಲಕ್ಷ್ಮಣ |
ಗೆನುತ ಗದೆಗೊಂಡಿದಿರು ಬರೆ ರಾ | ವಣನರಿವುತ || ೩೪೩ ||
ನೋಡುತೊಡನುರಿದುರಿದು  ರೋಷದೊ |
ಳೌಡುಗಡಿಯುತ ಸಾಯದಹಿತನ |
ಕೂಡಿ ಬಂದೆಯ ತನ್ನಿದಿರು ಕುಲ | ಗೇಡಿಯೆನುತ || ೩೪೪ ||
ತನಗೆ ಮಯನೊಲಿದಿತ್ತ ಶಕ್ತಿಯ |
ದನುಜನಿಡೆ ಕಂಡನಿಮಿಷರು ಹಾ |
ಯೆನಲು ರಾಘವನನುಜ ಮನದೊಳ | ಗೆಣಿಸುತಾಗ || ೩೪೫ ||

**ಭಾಮಿನಿ**

ಅಳಿವ ನಿಶ್ಚಯ ಶರಣನೆಮ್ಮ |
ಗ್ಗಳಿಕೆ ಫಲಿಸದೆನುತ್ತ ಮನದು |
ಮ್ಮಳದಿ ಶರಕಡಹಾಯ್ದು ಮಲಗಿದನಚಲ ನಿದ್ರೆಯಲಿ ||
ಘಳಿಲನೀತನನೊಯ್ವೆನೆಂದೆನು |
ತಿಳಿಯೆ ರಥದಿಂದಿಳೆಗೆ ದಾನವ |
ಬಲಿದು ಮುಷ್ಟಿಯ ಮರುತ ಸುತನಡಹಾಯ್ದು ಖಳಪತಿಯ || ೩೪೬ ||

**ದೇಶಿ - ಅಷ್ಟ**

ಭಳಿರೆ ರಾವಣ | ಲಲನೆಯ ಕದ್ದೊಯ್ದ ||
ಒಲವಿನಿಂ ಮೈ ತಿಳಿಯದವನನು | ಕೊಲಲು ಬಗೆದೆಯ ಕಳವಿಲಿ || ೩೪೭ ||
ಕರೆಸು ಬ್ರಹ್ಮನ | ಬರಿಸು ಶಕ್ರನ ನಿನ್ನ ||
ಹರಣವುಳುಹಲು | ಹರನ ಸ್ಮರಿಸೆನು | ತೆರಗಿದನು ನಡು | ಶಿರದೊಳು || ೩೪೮ ||
ಹತ್ತು ಬಾಯೊಳ | ಗೋಕರಿಸಿದು ಬಿಸಿ ||
ನೆತ್ತರವ ಕಾ | ರುತ್ತ ರಾವಣ | ಪೃಥ್ವಿಗೊರಗೆ ಮ | ರುತ್ಸುತ || ೩೪೯ ||

**ಭಾಮಿನಿ**
ತಪ್ಪಿದೆನು ರಾಮಾಯಣದ ಬದ |
ಲಪ್ಪುದ್‌ಹನುಮಾಯಣವೆನುತ ಜಲ |
ದುಪ್ಪಟೆಯನೆದೆಗೊತ್ತಿ ದಾನವನೆದ್ದನಂತರಿಸಿ ||
ತಪ್ಪುವವರಾವಲ್ಲ ಘಾಯದೊ |
ಳಿರ್ಪೆ ನಡೆಯೆನುತಟ್ಟಿ ಭವನಕೆ |
ಸರ್ಪಶಯನನ ಹೊರೆಗೆ ತಂದಿಳುಹಿದನು ಲಕ್ಷ್ಮಣನ || ೩೫೦ ||

**ನೀಲಾಂಬರಿ - ಆದಿ**
ಆಗಮವೇನೆಂದೆನುತ | ರಾಘವನೀಕ್ಷಿಸುತಳುತ ||
ಏಗುಣ ಸುಂದರ ಧೀರ | ಸಾಗರ ಸಾಂತ್ವ ಗಭೀರ || ೩೫೧ ||
ಬೇಡವೆಂದರೆ ಮಗನೆ | ಕಾಡಿಗೈದೆನ್ನೊಡನೆ ||
ಕೇಡಾಯ್ತು ನಿನಗಕಟ | ನಾದಿನಿಗೇನೊರೆವೆ ದಿಟ || ೩೫೨ ||
ತಾಯಿಗೀ ಮುಖವಿಂತು | ಸಾಯದೆ ತೋರುವದೆಂತು ||
ಮಾಯಾವಾಯ್ತಿನವಂಶ | ಶ್ರೇಯ ಮತ್ತೇನಾಶ || ೩೫೩ ||

**ಭಾಮಿನಿ**
ನೋಯಲೇಕರೆಘಳಿಗೆ ಸೈರಿಸು |
ಜೀಯ ತಹೆನೌಷಧಿಯ ಲಕ್ಷ್ಮಣ |
ರಾಯಗಳಿವಿಲ್ಲೆನುತ ವಾಯುಜ ತೆರಳುತಭ್ರದಲಿ ||
ಕಾಯಕದ ಖಳ ಕಾಲನೇಮಿಯ |
ಕಾಯವನು ನಿಗ್ರಹಿಸುತಚಲವ |
ಪ್ರೀಯದಿಂ ತರಲೆಬ್ಬಿಸಿದನು ಸುಷೇಣನಖಿಲರನು || ೩೫೪ ||

**ವಾರ್ಧಕ**
ಮಿತ್ರನುದಯದಿ ಕೈಕಸಾತ್ಮಜಂ ರಿಪುಸುಭಟ |
ಮೊತ್ತ ಬದುಕಿದುದರಿತು ಕುಂಭಕರ್ಣನನೆಬ್ಬಿ |
ಸುತ್ತ ಜನಮುಖದಿ ಮಗುಳಿತ್ತು ನೇಮವ ಸಮರಕಟ್ಟಿದಂ ಸೇನೆ ಸಹಿತ ||
ಪೃಥ್ವಿಯದುರಲು ಘಟಶ್ರೋತ್ರ ಬಲ ಸಹಿತ ಮುಂ |
ದೊತ್ತಿ ಕಪಿಮೋಹರವ ತುತ್ತು ಗೈವುತ ಕಾಲ |
ಮೃತ್ಯುವಂತುರವಣಿಸುತೆತ್ತಲೋಡಿದರು ಬೆಂಬೊತ್ತಿ ಬರಿಗೈವುತಿರ್ದ || ೩೫೫ ||

**ಭಾಮಿನಿ**
ತಿಂದು ತೇಗಿದನಸುರ ಖಳರಿ |
ನ್ನೊಂದು ಕಡೆಯಲಿ ಮಡುಹುತಿರೆ ಕಪಿ |
ವೃಂದ ಬರಿದಾದುದ ವಿಭೀಷಣ ಕಂಡು ರಘುಪತಿಗೆ ||
ಎಂದನೇಳ್ಳೈ ದೇವ ಕದನಕೆ |
ಬಂದನತಿಬಲ ಕುಂಭಕರ್ಣನ |
ಮುಂದೆ ನಿಲುವವರಿಲ್ಲ ನೀ ಹೊರತೆನಲು ಭೂವರನು || ೩೫೬ ||

**ಭೈರವಿ - ಮಟ್ಟೆ**
ಶರಧಿ ಘೋಷದಿ | ಧುರಕೆ ರೋಷದಿ ||
ಮರುತಸುತನ ಹೆಗಲನೇರಿ | ತೆರಳತುಗ್ರದಿ || ೩೫೭ ||
ಸತ್ತ ಹೆಣಗಳ | ನೆತ್ತಿ ಕೈಗಳ ||
ತುತ್ತುಗೈವ ಧೂರ್ತ ಸತ್ವ | ವಿತ್ತ ತೋರೆಲ || ೩೫೮ ||
ತ್ಯಾಗಿ ಸತಿಯಳ | ಮೂಗನರಿದೆಲ ||
ಜೋಗಿಯೆನಿಸಿ ಭೋಗಕೆಳಸಿ | ಸಾಗಿದೆಯ ಛಲ || ೩೫೯ ||
ಭೋಗಿ ನಾ ಖರೆ | ತ್ಯಾಗಕೇನ್ ಕೊರೆ ||
ಯೋಗದರ್ಥ ಲೋಗದೈತ್ಯ | ರೇಗಳರಿವರೆ || ೩೬೦ ||

ಸುಡು ಸುನೀತಿಯ | ಅಡಗಿ ಕೋತಿಯ ||
ಮಡುಹಿದಧಮನೆನುತ ಶಸ್ತ್ರ | ಗಡಣ ವೃಷ್ಟಿಯ || ೩೬೧ ||

**ಭಾಮಿನಿ**
ಕೆಡಹೆ ರಘುವರ ತರಿದನೀಪರಿ |
ಝಡಿದು ಹೆಣಗಿದರುರು ಮಹಾಸ್ತ್ರದಿ |
ಕುದಿದವಬುಧಿಗಳುರಿಗೆ ತ್ರೈಜಗ ಕಮರೆ ಸುಮನಸರು ||
ಮಡುಹು ಬೇಗದೊಳೆನುತ ಮೊರೆಯಿಡ |
ಲೊಡನೆ ಖಂಡಿಸೆ ಕರಯುಗವ ಖಳ |
ನೊದೆದು ಕಪಿಗಳ ಸದೆಯೆ ಪದಗಳ ಕಡಿದನವನೀಶ || ೩೬೨ ||

**ಸೌರಾಷ್ಟ್ರ - ತ್ರಿವುಡೆ**
ಉರುಳುತಿಳೆಗೆ ಮಹಾದ್ರಿಯೆನೆ ಬೊ |
ಬ್ಬಿರಿದು ಹೊರಳುತಸಂಖ್ಯ ಬಲಗಳ |
ನರೆಯಲಚ್ಯುತ ನಿಚ್ಚಟಾಸ್ತ್ರದಿ | ಶಿರವ ಕಡಿದ || ೩೬೩ ||
ಭೀಮಬಲ ಮಕರಾಕ್ಷ ಸಾರಣ |
ಧೂಮ್ರಲೋಚನ ಖಡ್ಗ ವೃಶ್ಚಿಕ |
ರೋಮ ಮುಖ್ಯಸುರೌಘವಳಿದುದು | ರಾಮ ಶರದಿ || ೩೬೪ ||
ಅರಿವುತಿದ ಶಕ್ರಾರಿ ಪಿತನಡಿ |
ಗೆರಗಿ ಪೇಳಿದ ಕರುಣಿಸಪ್ಪಣೆ |
ಮರುಗಲೇಕೆ ನಿಕುಂಭಿಳೆಯೊಳ | ಧ್ವರವ ಗೈದು || ೩೬೫ ||
ಹುತವಹನನಿಂ ಪಡೆದು ಸಾಯಕ |
ರಥ ಧನುವ ಮೇಳೈಸಿ ರಿಪುಗಳ |
ಮಥಿಸದಿರೆ ತವ ಸುತನೆ ತೆಗೆ ತೆಗೆ | ವ್ಯಥೆಯನೆಂದು || ೩೬೬ ||
ತೆರಳಿ ಹೋಮವನೆಸಗೆ ಧೂಮವ |
ಪರಿಕಿಸುತ ಸರಮೇಶನಿರದೆ |
ಚ್ಚರಿಸಿ ಕೆಡಿಸಿದನೆಂದು ರಘುಪತಿ | ಗೆರಗುತಾಗ || ೩೬೭ ||

**ಭಾಮಿನಿ**
ಓ ರಘೋತ್ತಮನವಧರಿಪುದೀ |
ರಾರು ವತ್ಸರ ಸುರತ ನಿದ್ರಾ |
ಹಾರ ವರ್ಜಿತಗಲ್ಲದಳುಕುವನಲ್ಲವವನೆಂದ ||
ಊರ್ಮಿಳಾಪತಿ ಕೇಳಿ ನಸುನಗು |
ತಾರಮೇಶನಿಗೆರಗಿ ಮನದಲಿ |
ಬೇರೆ ಯೋಚನೆಯೇಕೆ ಕಳುಹಿಸು ತಾನೆ ಸಮನೆಂದು || ೩೬೮ ||

**ತುಜಾವಂತು - ಮಟ್ಟೆ**
ಲಕ್ಷ್ಮಣಾಂಕ ನಡೆದ ಸಮರಕೆ | ತರುಬುತಯುತ |
ಲಕ್ಷ ಪ್ಲವಗ ತತಿಯ ಸಹಯಕೆ || ಪಲ್ಲ ||
ಲಕ್ಷ್ಮಣಾಂಕ ಪೊರಡೆ ಸಮರ | ಕಕ್ಷಿಗಿಡಿಯನುಗುಳಿ ರೋಷ |
ವುಕ್ಕಿ ಹರಿಗಳೈದಿ ಭರದಿ | ರಕ್ಕಸೇಂದ್ರರೊಡೆಯನಣುಗ |
ನಿಕ್ಕೆಲದಲಿ ಹೊಕ್ಕುಹೊಯ್ದರು || ಉಗುಳು ಮೂತ್ರ |
ವಿಕ್ಕಿ ಮುಖವ ಕೆಡಿಸಿ ನಲಿದರು | ದಿವಿಜರರಲ |
ತಕ್ಷಣದಲಿ ವೃಷ್ಟಿಗರೆದರು || ಲಕ್ಷ್ಮಣಾಂಕ || ೩೬೯ ||
ಕಾಣುತಸುರ ಕೆರಳಿ ಲಯದ | ಸ್ಥಾಣುವೆನೆ ಮಹಾಂತ ಕಿಡಿಯ |
ಸೋನೆಗರೆವುತೊಡನೆ ಸಿಂಹ | ಧ್ವಾನದಿಂದ ಕರದಿ ಬಿಲ್ |
ಬಾಣವಾಂತು ರಥವನಡರುತ || ಮುತ್ತಿದಹಿತ |
ವಾನರೇಂದ್ರ ಬಲವ ಕೆಡಹುತ | ಬರಲು ತಡೆದು |
ಭಾನುಕುಲಜನೆಂದ ಗಜರುತ || ಲಕ್ಷ್ಮಣಾಂಕ || ೩೭೦ ||

**ಭೈರವಿ - ಏಕ**
ಎಲವೊ ಖಳಾಧಮ ನಿನ್ನ | ಶಿರ | ವಿಳುಹಿ ತೆಗೆವೆ ನೀ ಮುನ್ನ ||
ಕಳವಿನೊಳೆಮ್ಮರಿಯ ಪಡೆಯ | ಗೆಲಿ | ದಳವಿಯನೆನೆ ಪಲ್ಮೊರೆದ || ೩೭೧ ||
ಗೆಲುವ ಪರಾಕ್ರಮ ಸರಿಯೆ | ಹೆಂ | ಗಳ ನಾಸಿಕವಲ್ಲರಿಯೆ ||
ಕೊಳುಗುಳಕೆಮ್ಮೊಳು ಸುರರು | ಮೇ | ಣಳುಕುವರಜ ಹರಿಹರರು || ೩೭೨ ||
ಎನುತ ಮಹಾಸ್ತ್ರವನುಗಿದು | ರಘು | ಜನಿಗೆಸೆಯಲ್ಕದ ಮುರಿದು ||
ದನುಜಗಿಡಲು ಬಿರು ಶರದಿ | ಕಡಿ | ದನು ಖಳನತ್ಯಬ್ಬರದಿ || ೩೭೩ ||

**ಭಾಮಿನಿ**
ಮುಂತೆ ಬಂಣಿಸಲವರ ಧುರವನ |
ನಂತಗರಿದತಿ ಬಲರು ಸರಿಸಮ |
ಪಂಥದಿಂದೆಚ್ಚಾಡಲುರು ದಿವ್ಯಾಸ್ತ್ರ ಸಂಘದಲಿ ||
ಎಂತಹುದೊ ಲಕ್ಷ್ಮಣಗೆನುತ ಸುರ |
ತಿಂಥಿಣಿಯು ತರಹರಿಸುತಿರೆ ಕಡಿ |
ದಂತರಿಕ್ಷಕೆ ಜಿಗಿದು ಖಳಶಿರವುರುಳಲವನಿಯಲಿ || ೩೭೪ ||

**ಕಂದ**
ಅರಿತು ದಶಾನನನೆಡೆಗೈ |
ತರುತನುಚರರತಿ ಭಯದಿಂ ಮರುಗುತ ಬೆಸಸಲ್ ||
ಒರಗಿದನಿಳೆಯೋಳ್ ಬರಸಿಡಿ |
ಲೆರಗೆ ಮಹಾತರುವುರುಳ್ವೋಲ್ ದಾನವರೆರೆಯಂ || ೩೭೫ ||

**ಸಾಂಗತ್ಯ - ರೂಪಕ**
ಹಾ ಕುಮಾರಕ ವಂಶ | ರಾಕಾಸುಧಾಂಶು ಹಾ |
ನಾಕೇಶಜಿತ ಕೀರ್ತಿಹಾರ ||
ಲೋಕ ದುರ್ಜಯ ರಿಪು | ಭೀಕರ ಸುಗುಣ ಹಾ |
ಹಾ ಕಂದ ಶರಧಿ ಗಭೀರ || ೩೭೬ ||
ಅಡಗಿದೇನ್ಯೆ ಚಿತ್ತ | ಜಡಜ ಭಾಸ್ಕರ ಪೆತ್ತ |
ಒಡಲಿದರಾಸೆ ಮತ್ತೇನು ||
ಕಡಿದು ಸೀತೆಯ ವೈರಿ |ಪಡೆಯ ಭಸ್ಮವ ಗೈದು |
ಇಡುವೆನಗ್ನಿಗೆ ಕಾಯವಿದನು || ೩೭೭ ||
ಒಡನೆದ್ದು ಖಡುಗವ | ಝಡಿಯೆ ಕಾಣುತಮಾತ್ಯ |
ತಡೆದು ಹೆಂಗೊಲೆ ಹೇಯವಯ್ಯ ||
ಕದನದಿ ಖ್ಯಾತಿಯ | ಪಡೆವುದೆಂದೆನೆ ಶುಕ್ರ |
ನೊಡನೆ ಹೊಕ್ಕನು ನಿಕುಂಭಿಳೆಯ || ೩೭೮ ||

**ಭಾಮಿನಿ**
ಮಾರಣಾಧ್ವರ ಗೈವುತಿರಲದ |
ನಾ ರಘೂದ್ವಹನಿಗೆ ವಿಭೀಷಣ |
ಸಾರಿ ಕಪಿಬಲ ಸಹಿತಲೈದಿದ ಮಖವ ಭಂಗಿಸಲು ||
ಸಾರೆ ಸನಿಹದೊಳಿಹ ಪತಿವ್ರತೆ |
ನಾರಿ ಮಂಡೋದರಿ ಮಹಾಸಿಯ |
ಭೋರನುಗಿದಡಹಾಯ್ದು ತಡೆದಳು ಕಾರ್ಯವೇನೆನುತ || ೩೭೯ ||

**ಮಾರವಿ - ಮಟ್ಟೆ**
ಕಾರ್ಯವುಂಟನಾರ್ಯನ | ದುಷ್ಕಾರ್ಯ ಭಂಗವರಿಯೆ ಪುಣ್ಯ |
ಕಾರ್ಯಪದಕೆ ಬಂದೆ ಸ್ವಾಮಿ | ಕಾರ್ಯವತ್ತಿಗೆ || ೩೮೦ ||
ನಾಯಿ ಬಗುಳಲೇಕೆ ಹೆತ್ತ | ತಾಯಿಗಳುಪಿದಧಮ ಪೊರೆದ |
ರಾಯಗಧಿಕ ಸ್ವಾಮಿಯಾವ | ನೈ ವಿಭೀಷಣ || ೩೮೧ ||

ಅರಸನಾದರೇನು ಧರ್ಮ | ವರಿಯದಾತ ವಧ್ಯ ಪರರ |
ತರುಣಿಗಳುಪಿದವನ ಸೇವೆ | ಸರಿಯೇನತ್ತಿಗೆ || ೩೮೨ ||
ತಪ್ಪದೊಂದಕಸಮ ಪ್ರಾಜ್ಞ | ನಪ್ಪವನ ಕೊಲ್ಲುವರೆ ಪ್ರಿಯನೊ |
ಳಿಪ್ಪ ಗುಣವ ಮರೆಯೆ ದೋಷಿ | ಯಹೆ ವಿಭೀಷಣ || ೩೮೩ ||
ಅರಿತ ಪ್ರಾಜ್ಞೆಯಿಂತು ದುಷ್ಟಾ | ಚರಣೆಗೊಪ್ಪುಗೊಟ್ಟಮೇಲೆ |
ಇರದು ಧರ್ಮಕೆಡೆಯು ಮತ್ತೇ | ನೊರೆವುದತ್ತಿಗೆ || ೩೮೪ ||

**ಕಂದ ಪದ್ಯ**

ನೀತಿಯಿದಲ್ಲೆಂದಖಿಲರ್ |
ನಾಥನ ತಿಳುಹಿದರಾಂ ಬೇಡಿದೆ ಕಾಲ್ವಿಡಿದನಿಶಂ ||
ಮಾತದ ಮೀರ್ದನೆನುತ್ತಭಿ |
ಘಾತಕ್ಕಿಂತಿದಿರಿಪರೇಂ ಭ್ರಾತೃ ಘಾತಕಿ ತೊಲಗೈ || ೩೮೫ ||

**ಭಾಮಿನಿ**

ವಾಲಿಸುತನದನಾಲಿಸುತ ಹೆಣ್ |
ಮೂಳಿಗೆನಿತಧಟೆನುತಲಾ ನೀ |
ಲಾಳಕಿಯನಡಹಾಯ್ದು ಕೈಗೊಡಲುಡೆಯ ಸೆರಗಿಂಗೆ ||
ಬಾಲೆಯದನೀಕ್ಷಿಸುತ ರೋಷಾ |
ಭೀಳ ನಯನದಿ ಕಿಡಿಯಿಡುತ ಘಡ |
ಖೂಳ ತೊಲಗೆಂದುಲಿದು ಝಳಪಿಸಲಸಿಯನಾಕ್ಷಣದಿ || ೩೮೬ ||

**ವಾರ್ಧಕ**

ನಾರಿಯೆಂ ಶತಕೋಟಿ ಸೂರ್ಯ ಕಿರಣಗಳೊ ಮದ |
ನಾರಿಯದ್ಭುತ ಲಯದ ನಿಟಿಲ ವಹ್ನಿಯೊ ತಿಳಿವ |
ನಾರಿಲ್ಲವೆನೆ ಜ್ವಲಿಸುತಾ ಹರಿ ಸುದರ್ಶನಂ ನಾರಿಯಂ ಬೆಂಬಲಿಸಿತು ||
ನಾರಿಗಳ ಶಿರವ ದಿಗ್ಬಲಿ ಹೊಡೆದು ತ್ರೈ ಜಗದಿ |
ನಾರಿಯೆನಿಸುವೆ ಪತಿಗೆನಲು ಪರಿಕಿಸುತ ಧೈರ್ಯ |
ನಾರಿ ಕಡಿದೆಣ್ದೆಸೆಗೆ ಕಾಲ್ದೆಗೆದರಹಿತರಿನ್ನಾರಿಗಳ ಮೀರೆ ವಿಧಿಯ || ೩೮೭ ||

**ಭಾಮಿನಿ**

ಹೊಳೆವ ಸೂರ್ಯ ಸಹಸ್ರ ದೀಪ್ತಿಯ |
ಝಳಕೆ ದೆಸೆಗೆಟ್ಟಾದಶಾನನ |
ಘಳಿಲನೆದ್ದಡಿಗೆರಗಿ ನಿಂದನು ತಾಯೆ ಸಲಹೆನುತ ||
ಕೆಲಕೆ ಸರಿದಭಿನಮಿಸಿ ದುಃಖದೊ |
ಳಿಳಿವ ಕಂಬನಿಯಿಂದ ಕಾಂತನ |
ಗಳವ ಬಿಗಿವಡೆದಪ್ಪಿ ನುಡಿದಳು ಮಯನ ಸುತೆಯಳುತ || ೩೮೮ ||

**ಶಂಕರಾಭರಣ - ಏಕ**

ಹವನವಳಿದು ಶಕ್ತಿಯೊಲುಮೆ | ಸವೆದುದಯ್ಯೋ ವಿಧಿಯ ದುಷ್ಟ||
ಹವಣವೆಂತೊ ನಿಲಿಸೀ ಸಮರ | ಸವನವ ಕಾಂತ || ೩೮೯ ||
ನಿಲಿಸಲುಂಟೆ ಧುರವ ಜಗದಿ | ಹಳಿವದೊಂದೆ ಸಾಕು ಕಳವಿ ||
ನಳವಿಗಂಜಿದಪಯಶಂಗ | ಳೊಳಿತೇನೆ ಕಾಂತೆ || ೩೯೦ ||
ಕದ್ದ ಫಲಕನರ್ಘ ಬಲವಿ | ದಗ್ಧವಾಯ್ತಿನ್ನಾದರವಳ ||
ಬದ್ಧ ವೀರಗಿತ್ತು ಕುಲವ | ನುದ್ಧರಿಸು ಕಾಂತ || ೩೯೧ ||
ಬದ್ಧ ವೀರನೊಬ್ಬನೇ ಪ್ರ | ಸಿದ್ಧವೆನ್ನಾತ್ಮಜರ ತರಿದ ||
ಕ್ಷುದ್ರರಸುವಗೊಳದೆ ಫಲವೇ | ನಿರ್ದು ನಾ ಕಾಂತೆ || ೩೯೨ ||
ಸಂದ ಸುತರೈತಹರೇ ನಿನ್ನ | ಕಂಡು ಬದುಕಬಹುದೆಂಬಾಸೆ ||
ಕೊಂದು ಕೊಲಿಸಿಕೊಂಬುದೀಗ | ಚಂದವೇ ಕಾಂತ || ೩೯೩ ||

**ಸೌರಾಷ್ಟ್ರ - ತ್ರಿವುಡೆ**
ಕೊಲುವನಾವವನೆಲೆಗೆ ಲೋಕವ |
ಗೆಲಿದು ಬೊಮ್ಮನ ವರದಿ ರಜತಾ |
ಚಲವ ಬೆರಳಿಂದೆತ್ತಿದಗೆ ನರ | ಹುಳುಗಳಿದಿರೆ || ೩೯೪ ||
ನರನೆ ರಾಘವನಿಳಿಯ ಭಾರವ |
ತರಿಯಲವತರಿಸಿರುವ ಶ್ರೀಹರಿ |
ಕರವ ಮುಗಿವೆನು ಕಾಂತ ಬಿಡು ಹಗೆ | ಸರಸವಲ್ಲ || ೩೯೫ ||
ಲೋಕ ಮಾತೆಯನಿತ್ತು ರಾಮನ |
ಶ್ರೀಕರಾಂಘ್ರಿಯ ಸೇರಲಿಹ ಪರ |
ಸೌಖ್ಯವಹುದೆಂದೊಂದಿಸಿದಳ | ತ್ಯಾ ಕುಲದಲಿ || ೩೯೬ ||

**ಭಾಮಿನಿ**
ಬಲ್ಲೆ ರಘುವರನಿರವ ಸಾಮವ |
ನೊಲ್ಲೆನೆಂದಿಗು ಮಣಿದು ಬದುಕುವ |
ನಲ್ಲೆ  ಸೆಣಸಿದು ಹಿಂಗುವವನಲ್ಲೆಂದಿನಾಹವದಿ ||
ಮಲ್ಲ ಸಹಸದಿ ಸೆರೆವಿಡಿದು ರಘು |
ವಲ್ಲಭನನವನರಸಿಗೊಪ್ಪಿಸಿ |
ಸಲ್ಲಲಿತ ವೈಭವದಿ ಬೀಳ್ಕೊಡುವೆನು ವಿಮಾನದಲಿ || ೩೯೭ ||

**ಕಂದ ಪದ್ಯ**
ಛಲವಂ ಸಾಧಿಪೆನಳಿಯಲ್ |
ತಳೆವೆಂ ಶಾಶ್ವತ ದೈವ ಸಾಮಿಪ್ಯವನುಂ ||
ಉಳಿದವರಾರ್ ಮಿತ್ರುವ ನೀ |
ತಿಳಿದಿಂತಳುವರೆ ವೀರರಮಣಿ ಸೈರಿಪುದಳಲಂ || ೩೯೮ ||

**ವಾರ್ಧಕ**
ಕುರುಳ ನೇವರಿಸಿ ಕಂಬನಿಯೊರಸಿ ಕಾಮಿನಿಯ |
ತೆರಳಿಸಿ ನಿಜಾಲಯಕೆ ಹರಿಯ ಧುರಕೆನುತ ಕಾ |
ದಿರಿಸಿದುರು ಬಲ ಶಸ್ತ್ರವೆರೆದು ಘನ ಸಾಹಸವ ಮೆರೆದು ಸಿರಿವರನ ರಣದಿ ||
ಸೆರೆವಿಡಿವೆನೆನುತಲುರವಣಿಸಿ ರಥವೇರ್ದಸುರ |
ರರಸ ಪೊರಮಡಲವನಿ ಕಂಪಿಸಿತು ಕಪಿಕಟಕ |
ಮರಣ ಭಯದಿಂದೋಡುತಿರೆ ರಘೂದ್ವಹ ಚಾಪ ಶರವಾಂತು ರಿಪುದಹನಕೆ || ೩೯೯ ||

**ಭಾಮಿನಿ**
ತೆರಳುತಿರಲರಿತನಿಮಿಷಾಧಿಪ |
ಕರೆದು ಮಾತಲಿಯೊಡನೆ ಯಮ್ಮಯ |
ವರರಥವ ಮೇಳವಿಸಿ ಸಹಕರಿಸೆನೆ ರಘೂತ್ತಮನ ||
ಹೊರಗೆ ನಡೆತಂದೆರಗಿ ಸೂಚಿಸೆ |
ಕರವ ಪಿಡಿದಸುರಾರಿ ಸ್ಯಂದನ |
ವರವನೇರ್ದೊಡನಸುರಗೆಂದನು ಗಜರಿ ಘರ್ಜಿಸುತ || ೪೦೦ ||

**ಶಂಕರಾಭರಣ - ಮಟ್ಟೆ**
ಖುಲ್ಲ ದನುಜ ನಿಲ್ಲು ಕಳವಿ | ನಲ್ಲಿ ಸತಿಯ ತಂದ ದುರುಳ |
ಚಲ್ಲ ಬಡಿವೆ ಕ್ಷಣದೊಳೆಂದ | ಫುಲ್ಲಲೋಚನ || ೪೦೧ ||
ಕಳವಿನಲ್ಲಿ ಪ್ಲವಗ ಪತಿಯ | ಗೆಲಿದನ್ಯಾರು ಸತಿಯ ಮೂಗ |
ನಿಳುಹಿದಧಮ ನಿಲು ನಿಲೆಂದ | ಕಲಿ ದಶಾನನ || ೪೦೨ ||
ಓಡಿ ಬಲಿಯ ಚರನ ನೋಡಿ | ವೇದವತಿಯ ಶಾಪಗೊಂಡ |
ಹೇಡಿ ಕಾರ್ತವೀರ್ಯ ಸೆರೆಗೆ | ದೂಡಿಸಿದನಲ || ೪೦೩ ||

ದಂಡ ನಡೆಸುತಖಿಲ ಬ್ರ | ಹ್ಮಾಂಡವನ್ನು ಗೆಲಿದ ಸತ್ವ |
ದಂದವರಿಯದಾದೆ ಮನುಜ | ಮಂದಮತಿಯಲ || ೪೦೪ ||
ಬಲ್ಲೆ ಮಿಥಿಲೆಗೈದಿ ಹರನ | ಬಿಲ್ಲಿನಡಿಯೊಳುರುಳಿದುದ ನಾ |
ಸಲ್ಲಲಿತದಿ ಮುರಿದು ಗೆಲಿದೆ | ಫುಲ್ಲನೇತ್ರೆಯ || ೪೦೫ ||

**ಭೈರವಿ - ಅಷ್ಟ**

ಮೃಡನಾವಾಸದ ಗಿರಿಯ | ನೆಗಹಿ ತೋಷ |
ಪಡಿಸಿ ತ್ರಿಪುರ ವೈರಿಯ || ಪಡೆದೆ ಬೇಕಾದ ಸಂ |
ಪದವ ಕಾರ್ಮುಕ ತನ | ಗಿದಿರೆ ನೀನರಿಯೆಯಯ್ಯ || ೪೦೬ ||
ಅರಿತೆಹೆವೈ ಸದ್ಯಕೆ | ಪರನಾರಿ ತ |
ಸ್ಕರನೆಂಬ ಪರಿಯ ಜೋಕೆ || ತುರುಣಿಯನಿತ್ತೆನ್ನ |
ಚರಣಕೆರಗು ನಿನ್ನ | ಹರಣವನುಳುಹಲಿಕೆ || ೪೦೭ ||
ಮಾನಿನಿ ಮಣಿಗಳನು | ಭಂಗಿಸಲಪ್ಪ |
ಹಾನಿಯೇನೆಂಬುದನು || ನೀನರಿವಡೆ ತಂದೆ |
ನಾ ನಾರಿ ನಿನಗೇಕೆ | ಕಾನನ ತಿರುಗಲಿಕೆ || ೪೦೮ ||

**ಮಾರವಿ - ಏಕ**

ಅರರೆ ಖಳಾಧಮ | ಪರಿಕಿಸು ವನಸಂ |
ಚರರೆಮ್ಮಯ ಬಲುಹ || ಶಿರವರಿದವನಿಯ |
ಹೊರೆಯ ಕಳೆವೆ ಫಥ | ದುರುಳನೆನುತ ಶರವ || ೪೦೯ ||
ತೂರಲದರ ಪುಡಿ | ಹಾರಿಸಿ ದಶಗಳ |
ಘೋರಿಡುತಾಗ್ರಹದಿ || ಧಾರಿಣಿ ಕಂಪಿಸೆ |
ಹೇರಿದನುರು ಶರ | ವಾರವ ವಿಗ್ರಹದಿ || ೪೧೦ ||
ಖಂಡಿಸಿ ಸಮರೋ | ದ್ದಂಡ ರಘೂದ್ವಹ |
ತುಂಡಿಸೆ ಚಾಪವನು || ಕೊಂಡನ್ಯವ ಮುಂ |
ಕೊಂಡು ದನುಜ ಶರ | ವೃಂದದಿ ಮುಸುಕಿದನು || ೪೧೧ ||

**ವಾರ್ಧಕ**

ದಾನವಾಧಿಪನಸಮ ಬಾಣಕಿತಿ ಮಿತಿಯಲ್ಲ |
ಚೂರ್ಣಿಸುವ ರಘುಪತಿಯ ತ್ರಾಣಕೆಣೆ ತೊಣೆಯಿಲ್ಲ |
ಜಾಣರವರುರು ಶಕ್ತಿ ಸೋನೆಯಿಂದೆಚ್ಚಾಡಲೇನೆಂಬೆನದ್ಭುತವನು ||
ಕಾಣದಾಯ್ತವನಿ ನಭವೇಣ್ದೆಸೆಯೊಳುರಿ ಗೆದರಿ |
ಭಾನು ಪಥಕೆಡರಾಯ್ತು ಕ್ಷೋಣಿಯೀರೇಳ್ಕಮರಿ |
ಪ್ರಾಣಕುಬ್ಬಸವಾದುದೇನು ಸತ್ವಾಧಿಕನೊ ಕೌಣಪೇಂದ್ರಂ ಧರೆಯೊಳು || ೪೧೨ ||

**ಭಾಮಿನಿ**

ಧರೆಯ ಮರುಕವ ಕಂಡು ಜಾನಕಿ |
ಯರಸನುರೆ ದಿವ್ಯಾಸ್ತ್ರದಿಂ ದಶ |
ಶಿರವನೊಮ್ಮೆಗೆ ಕಡಿದನರಿತನಿಮಿಷರು ಘೇಯೆನಲು ||
ಮರಳಿ ಚಿಗಿಯುತ್ತಿರ್ದವದನರಿ |
ದರಿದು ಮೈಸಿರಿಗುಂದಿ ಮನದೊಳು |
ಮರುಗಿದನು ರಘುನಾಥನಚ್ಚರಿಯೇನಿದೆಂದೆನುತ || ೪೧೩ ||

**ವಾರ್ಧಕ**
ಏನಿದದ್ಭುತವರಿದಡಾನಿವನ ಶಿರವರಿದ |
ಡಾನುವನಹಾ ಚಿಗುರಿ ದಾನವನ ಕೊಲುವ ಗುರಿ |
ಕ್ಷೀಣವಾಯ್ತುಮಮ ನುಡಿದೇನು ತಾನಿತ್ತ ನುಡಿ ಹಾನಿಯಾಯ್ತುಕಟ ಜಗದಿ ||
ಭಾನುಕುಲಜರ ಕೀರ್ತಿ ಮ್ಲಾನವಾದುದು ಪೂರ್ತಿ |
ತಾನುದಿಸಿ ದಿಟವಲಾ ಮಾನಿನಿಯ ಬಿಡಿಸೆ ಬಲ |
ಹೀನನಾದೆನೆನುತ್ತಲಾ ನರೇಂದ್ರಂ ಪೊತ್ತ ಮೌನದಿಂದಿರೆ ಕಾಣುತ || ೪೧೪ ||

**ವಸಂತ ತೋಡಿ - ಅಷ್ಟ**
ಏನೋ ರಾಘವ | ದೀನ ಮುದ್ರೆಗಳು | ತ್ರಾಣಿಯರರೆ ಮಗು |
ಳೇನು ಮೌನಗಳು || ಪಲ್ಲ ||
ದೇವನೆನುತ ನಂಬಿ | ದಾ ವಿಭೀಷಣಗಿಂಬಿ |
ನ್ಯಾವ ಕಡೆಯೊಳುಂಟು | ಸಾವು ಸನಿಹ ಬಂತು || ಏನೊ || ೪೧೫ ||
ರಣದೊಳೆನ್ನನು ಜೈಸಿ | ವನಿತೆಯ ಮೇಳೈಸಿ |
ಮನೆಯ ಸೇರುವ ಭ್ರಾಂತು | ಕನಸಾಗಿ ಹೋಯ್ತು || ಏನೊ || ೪೧೬ ||
ಹರನ ಧನುವನೆತ್ತಿ | ಮುರಿದ ಮಹಾ ಶಕ್ತಿ |
ಮರೆಸಬಾರದೆ ಮಿಗೆ | ಮರುಕವೇನಿದು ತೆಗೆ || ಏನೊ || ೪೧೭ ||

**ಭಾಮಿನಿ**
ಭರಿತ ಗರ್ವದೊಳಿಂತು ರಾವಣ |
ಜರೆಯೆ ಕೆಂಗಿಡಿಗೆದರಿ ರಾಘವ |
ಕೆರಳಿ ತುಡುಕಲು ಧನುವ ಪರಿಕಿಸುತಲಿ ವಿಭೀಷಣನು ||
ದುರುಳನೆದೆಯೊಳಗಿದೆ ಸುಧಾರಸ |
ಭರದಿ ತೆಗೆಯೆನೆ ವಿಲಯ ವಹ್ನಿಯ |
ಶರವನುರಕಿಡಲಸುರ ಮೈಮರೆತಾಗ ಚಿನ್ಮಯನ || ೪೧೮ ||

**ವಾರ್ಧಕ**
ಕಂಡನಸುರೇಂದ್ರನಖಿಲಾಂಡ ನಾಯಕನ ವಪು |
ಮಂಡಲದಿ ಭೂ ವ್ಯೋಮ ಪಾತಾಳ ಲೋಕ ಮಾ |
ಖಂಡಲಾದಿತ್ಯ ವಸು ರುದ್ರ ಮರುದಮರ ಗಣ ಸಿಂಧು ನಭ ದಶದಿಶಗಳ ||
ಸಂದ ಖಳ ನರ ಭುಜಗ ಸಂದಣಿಗಳಮಿತ ಋಷಿ |
ಮಂಡಳಿಯ ಗ್ರಹ ತಾರ ನಿವಹ ತಿರ್ಯಗ್ಜಂತು |
ವೃಂದ ನದಕಾಂತಾರ ಗಿರಿ ನಿಕರ ಸಹಿತನ್ಯಮೊಂದಿಲ್ಲದಾ ವಿಶ್ವವ || ೪೧೯ ||

**ಮಧುಮಾಧವಿ - ತ್ರಿವುಡೆ**
ಕಂಡು ಪುಳಕೋತ್ಸವದಿ ರಘುವರ |
ಗೆಂದನೊಲಿದೆಯ ದೇವ ತನ್ನಯ ||
ಗಂಡುತನಕಿದೆ ಸಾಕು ಫಲಿಸಿತು |
ಕೊಂಡ ಕಾರ್ಯ ಸರಾಗದಿ || ಕಂಡ ತೆರದಿ || ೪೨೦ ||
ಮಹಿಮ ತವ ಚರಣಾಗ್ರಹಾನು |
ಗ್ರಹವಭಿನ್ನಗಳದರೊಳಾ ಸಂ ||
ನ್ನಿಹಿತ ಪಥವೆನಿಪತಿ ವಿರೋಧವ |
ಗ್ರಹಿಸಿ ಹಗಲಿರುಳೆನ್ನದೆ || ಅರಸುತಿರ್ದೆ || ೪೨೧ ||
ವಂಚಿಸಿದೆ ಬಲುತೆರದೊಳರಸಿ ಪ |
ಳಂಚಿಸಿದೆನಡಿಗಡಿಗೆ ತಿಳಿದರ ||
ಸಂಚೆಗಮನೆಯ ನೆವದಿ ದರುಶನ |
ಸಂಚಿತವಿದಾಯ್ತಿಂದಿಗೆ || ಪುಣ್ಯವೊದಗೆ || ೪೨೨ ||

ಸಿರಿ ಪದಾಬ್ಜಕೆ ಹರಣಗಾಣಿಕೆ |
ಇರಿಸಿಹೆನು ಕೈಕೊಂಡು ಬಿಡದು ||
ದ್ಧರಿಸಿ ಮುನ್ನಿನ ಚರಣ ಸೇವೆಯ |
ಹರಿಯೆ ನೀ ಕೃಪೆಗೈವುದು || ಶರಣಗೊಲಿದು || ೪೨೩ ||
ತನುವಿನಾಶೆಗಳಿಲ್ಲ ಮಾತೆಯ |
ಮಣಿದು ಬಿಡುವವನಲ್ಲ ನಿಶ್ಚಯ ||
ರಣಕೆ ಬೆದರುವುದಿಲ್ಲೆನುತ್ತುರು |
ಕಣೆಯ ವೃಷ್ಟಿಯ ಗರೆದನು || ದನುಜ ವರನು || ೪೨೪ ||

**ಕಾಂಬೋಧಿ - ಝಂಪೆ**
ಕಡಿವುತದ ನೃಪತಿ ಕುಂ | ಭಜದತ್ತ ವಿಧಿ ವಿಷ್ಣು |
ಮೃಡ ಶಕ್ತಿ ಶರವ ಸಿಂಜಿನಿಗೆ ||
ಇಡಲು ತ್ರೈಜಗ ನಡುಗಿ | ತಡಿಗಡಿಗೆ ಬಲವೆರಡು |
ಬೆದರಿ ಕಣ್ಮುಚ್ಚಿತರೆಘಳಿಗೆ || ೪೨೫ ||
ಪರಿಕಿಸುತಲಸುರ ಪ್ರತಿ | ಶರವಿಡದೆ ದೃಢ ಮನದಿ |
ಹರಿಯ ಧ್ಯಾನಿಸುತ ನಿಂದಿರಲು ||
ಭರದಿ ಕಡಿವಡೆದು ಗರ | ಗರನೆ ಬಾಂದಳದಿ ಶಿರ |
ತಿರುಗಿ ರಘುಪತಿಯ ಚರಣದೊಳು || ೪೨೬ ||
ಮಾಲೋಲ ಶರಣೆಂದು | ಬೀಳಲದ ನೆಗಹಿ ಕರು |
ಣಾಳು ತಕ್ಕೈಸಿ ಧರೆಗಿಡಲು ||
ಪೇಳಲೇನಾತ್ಮ ಸಿರಿ | ಯಾಳಿದನೊಳೈಕ್ಯತೆಯ |
ತಾಳಿತನಿಮಿಷರು ಜಯವೆನಲು || ೪೨೭ ||
ಕಂಡು ಮೇಲಾಯ್ತು ಖಳ | ಸಂದಣಿಯನಮಿತ ಶರ |
ವೃಂದದಿಂ ತರಿದ ಭೂಪತಿಯು ||
ಸಂದರಾಹವದಿ ತೊಂ | ಬತ್ತು ಕೋಟಿ ನಿಶಾಟ |
ರಿಂದಿಗೊಳಿತಾಯ್ತು ವಸುಮತಿಯು || ೪೨೮ ||
ಮರುಗುತಿದ ತೆರಳಿ ಚರ | ರರುಹೆ ಹಾಯೆಂದು ಮಯ |
ತರಳೆ ಹಂಮೈಸಿ ಚೇತರಿಸಿ ||
ತರಹರಿಸುತೈದಿ ನಿಜ | ಹರಣದೊಲ್ಲಭನ ಶವ |
ಕೆರಗಿ ತೆಗೆದಪ್ಪಿ ಕಾತರಿಸಿ || ೪೨೯ ||

**ಸಾವೇರಿ - ಆದಿ**
ಏನಿದು ಮುನಿಸು ಕಾಂತ | ಮಾತಾಡು ಪ್ರಿಯ |
ಮಾನಿನಿಯೊಳು ವಿಕ್ರಾಂತ ||
ನೀನಾಗಿ ಸಮರದೊಳು | ರಘುಪತಿಗಿತ್ತೆ |
ಪ್ರಾಣವನಿಂದಿನೊಳು || ೪೩೦ ||
ವರ ಭುಜಬಲ ವೀರ್ಯದಿ | ನಿನ್ನನು ಪೋಲು |
ವರ ಕಾಣೆ ಮೂಲೋಕದಿ ||
ಸುರನರನುತ ಧೀಮಂತ | ತವ ಕಾಂತೆಗಿಂತ |
ಪರದೇಶಿತನವೆ ಕಾಂತ || ೪೩೧ ||
ಪರನಾರಿಗಳುಪಿದಡೆ | ಇಂತಪ್ಪುದೆಂದು |
ಧರಣಿಗಾದರ್ಶನಾದೆ ||
ಅರಿತು ಸೌಖ್ಯದಿ ಬಾಳಲಿ | ಜಗವೆಂದು ಲಕ್ಷ್ಮೀ |
ವರನ ಪಾದದೊಳುರುಳಿ || ೪೩೨ ||

**ಭಾಮಿನಿ**

ದೇವ ನೀನೀಜಗಕೆ ಭಕ್ತರ |
ಭಾವವರಿತೊಲಿದುದ್ಧರಿಪ ಕರು |
ಣಾವನಧಿ ಸತಿಗೀಯೊ ಕಾದಲನೊಡನೆ ಸದ್ಗತಿಯ ||
ಜೀವ ತಾನೈದಿಹನು ಮಿಗೆ ನಿ |
ರ್ಜೀವವೀಜಡ ತನುವ ಜತೆಯಲಿ |
ಪಾವಕಂಗರ್ಪಿಸುವೆನಪ್ಪಣೆಯೀವುದೆನೆ ಕೇಳಿ || ೪೩೩ ||

**ಆರ್ಯಸವಾಯ್ - ಏಕ**

ಭಲಾ ಭಲಾ ನಿ | ಶ್ಚಲ ಸುವ್ರತೆ ನಿನ |
ಗೊಲಿದುದು ಮನ್ಮನ ದಿಟವಮ್ಮ ||
ಇಳೆಯ ಮನುಜರಘ | ಗಳೆವುದು ಭಕ್ತಿಗ |
ಳಲಿ ಭಜಿಸಲು ಪತಿವ್ರತೆ ನಿನ್ನ || ೪೩೪ ||
ಶ್ರುತಿಸಮ್ಮತವತಿ | ಹಿತವವನಿಗೆ ಪತಿ |
ಜತೆಯಲಿ ಸತಿ ಪೊಂದಲು ಚಿತೆಯ ||
ಚ್ಯುತಿಯಿಲ್ಲದ ಸ | ದ್ಗತಿಯಿತ್ತಿಹೆ ಮಹಾ |
ಸತಿ ಬಿಡು ಬಿಡು ಮನಸಿನ ವ್ಯಥೆಯ || ೪೩೫ ||
ಕಾದಲನೊಡನೆ ವಿ | ನೋದದಿ ನಡೆ ಮನ |
ವಾದ ತೆರದಿ ಸದ್ಗುಣ ಶೀಲೆ ||
ಬೇಡು ವರವ ದಯ | ಮಾಡುವೆನೆನಲು ರ |
ಮಾಧವನಡಿಗೆಡೆದಾ ಬಾಲೆ || ೪೩೬ ||

**ಭಾಮಿನಿ**

ಹೇ ಸುಮಂಗಲಚರಿತ ಮಗುಳಿ |
ನ್ನೇಸು ದೋಷಿಗಳುದಿಸಿದರೆಯು ವಿ |
ಭೀಷಣನ ತೆರ ಸ್ವಜನದ್ರೋಹಿಗಳೊಗೆಯದಿರಲಿಳೆಗೆ ||
ಆಸೆ ಬೇರೊಂದಿಲ್ಲ ತನ್ನ ವಿ |
ಲಾಸದಖಿಲ ಸುವಸ್ತು ನಿಚಯವು |
ಮೀಸಲವನಿಜೆಗದನು ಸ್ವೀಕರಿಸುವುದು ಮಮತೆಯಲಿ || ೪೩೭ ||

**ವಾರ್ಧಕ**

ಎನುತ ಭಕ್ತಿಯೊಳೆರಗಲಸ್ತೆನುತಲಾ ಸತಿಯ |
ಚಿನುಮಯಂ ಬೀಳ್ಕೊಟ್ಟೊಡೈದಿ ಪತಿಯೊಡನೆ ಚಿತಿ |
ಯನು ಪೊಕ್ಕು ಹರುಷ ಮಿಗಿಲಮಲ ಸಿರಿ ಸಾಯುಜ್ಯವನು ಪೊಂದಲವಳಿತ್ತಲು ||
ಜನಕಜೆಯ ಬಂಧನವ ಬಿಡಿಸಿ ಕರೆತರೆ ವಿಭೀ |
ಷಣ ರಾಮಚಂದ್ರನಪ್ಪಣೆಯಾಂತು ಭೂಸುತೆಗೆ |
ಮಣಿದು ವಾರ್ತೆಯ ಬೆಸಸಲತಿ ಹರುಷ ಭಾರದಿಂದಿನಿಯನೆಡೆಗೈತಂದಳು || ೪೩೮ ||

**ಭಾಮಿನಿ**

ಪತಿಯ ಕಂಡತ್ಯಧಿಕ ಹರ್ಷಾ |
ತ್ವತಿತ ಬಾಷ್ಪದಿ ತೊಳೆವುತಂಗವ |
ಪತಿಕರಿಸಿ ಪೊರೆಯೆಂದಳಂಗನೆಯಡಿಗೆ ಮುಡಿಯಿರಿಸಿ ||
ಪತಿತಪಾವನ ಸರಿದು ಸತಿ ಖಳ |
ಪತಿಯ ಬಂದಿಯೊಳಿರ್ದು ಸದ್ಯಕೆ |
ಪತಿತಳಹೆ ಚಿತಿಗಿಳಿಯದಾಂ ಪರಿಗ್ರಹಿಸಲರಿದೆಂದ || ೪೩೯ ||

**ಕೊರವಿ - ಆದಿ**
ಪೇರ್ಮೆಯಿದುವೆ ಸ | ದ್ಧರ್ಮಕೆ ಜಗದೊಳು |
ಕೂರ್ಮೆಯೆಂಬುದಿನಿತಿಲ್ಲ ||
ಧರ್ಮಶಾಸ್ತ್ರ ಕೃತ | ಕರ್ಮಕೆನುತ ಮಿಗೆ |
ನಿರ್ಮಿಸೆ ಚಿತೆಯ ರಮಾನಲ್ಲ || ೪೪೦ ||
ಕಾಣುತಲಾ ವನ | ಜಾನನೆ ಪತಿಪದ |
ಕಾನಿಸಿ ಮುಡಿಯ ಮುಗಿದು ಕೈಯ್ಯ ||
ಪ್ರಾಣದೊಡೆಯ ತವ | ಮಾನಿನಿಯೊಳವ ನಿ |
ಧಾನಿಸನಲ ಸೋಂಕಲು ಮೈಯ್ಯ || ೪೪೧ ||
ಧಾರ್ಮಿಕ ತವ ಸಹ | ಧರ್ಮಿಣಿಯೇ ದೃಢ |
ಕರ್ಮಯೋಗಿ ಜನಕಾತ್ಮಜೆಯೆ ||
ನಿರ್ಮಲತೆಯ ಜಗ | ಸಮ್ಮೀಕ್ಷಿ ಪುದೆನು |
ತೊಮ್ಮೆಯೆ ಜಿಗಿದಳು ಸುರರುಲಿಯೆ || ೪೪೨ ||

**ಭಾಮಿನಿ**
ಪರಮ ಪಾತಿವ್ರತ್ಯದುರಿಗುರಿ |
ಸರಿದು ನಿಲಲಭ್ರುದಲಿ ಸುಮನಸ |
ರೊರೆದರವನಿಜೆಯೆಡೆಗೆ ಕಲ್ಮಷ ಸೋಂಕದೆಂದೆನುತ ||
ತರಣಿ ಕುಲದೇಳಿಗೆಗೆ ತಕ್ಕವ |
ಳರಸಿಯನು ಸ್ವೀಕರಿಸು ಸಂಶಯ |
ವಿರಿಸಬೇಡೆಮ್ಮಾಜ್ಞೆ ಯೆಂದನು ನಭದಿ ದಶರಥನು || ೪೪೩ ||

**ವಾರ್ಧಕ**
ಸುರರ ಮೊರೆ ಪಿತನಾಜ್ಞೆಯುರಿಗಿಳಿದು ಕೊಂಕದಿಹ |
ಸಿರಿಮುಡಿಯ ಸುಮದ ಪರಿಯರಿತು ನಿಶ್ಯಂಕೆಯಿಂ |
ಧರಣಿಜೆಯ ಕರೆದಪ್ಪಿ ಕರುಣದಿಂ ಕೋಸಲೇಶ್ವರ ಪರಿಗ್ರಹಿಸುತವಳ ||
ಧುರದಿ ಮಡಿದಿಹ ಕಪಿಗಳಂ ಬದುಕಿಸುತ ಲಂಕೆ |
ಯರಸು ಪಟ್ಟವ ವಿಭೀಷಣಗಿತ್ತು ಪುಷ್ಪಕದಿ |
ತರುಣಿ ಯವರಜ ನಿಖಿಲ ಪರಿವಾರದೊಡನೆ ಸತ್ವರದಿ ಪುರಕೈತಂದನು || ೪೪೪ ||

**ಭಾಮಿನಿ**
ಮರುಗುತಿತ್ತಲು ಭರತನಗ್ರಜ |
ನೊರೆದವಧಿಯಾಯ್ತೆನುತ ವೈಶ್ವಾ |
ನರನ ಕುಂಡದಿ ಸ್ಥಾಪಿಸುತ ಬಲವಂದು ಭಕ್ತಿಯಲಿ ||
ಕರವ ಮುಗಿದಾ ಹರಿಯ ಚರಣವ |
ಸ್ಮರಿಸಿ ವಹ್ನಿಯ ಪೊಗುವೆನೆಂಬನಿ |
ತರಲಿ ರಾಘವನಿಳಿದು ತೆಗೆದಪ್ಪಿದನು ಸೋದರನ || ೪೪೫ ||

**ಸೌರಾಷ್ಟ್ರ - ತ್ರಿವುಡೆ**
ಅನುಜನನು ತಕ್ಕೈಸಿ ಭವನವ |
ಚಿನುಮಯಾತ್ಮಕ ಪೊಕ್ಕು ಮರುಗುವ |
ಜನನಿಯರ ಸಂತೈಸಿದರು ದರು | ಶನವನಿತ್ತು || ೪೪೬ ||
ಪರಿಜನರ ಮನ್ನಿಸುತ ಗುರುವರ |
ನೊರೆದ ಸುಮುಹೂರ್ತದಿ ರಘೂದ್ವಹ |
ಮೆರೆವ ಸಿಂಹಾಸನವನೇರ್ದನು | ತರುಣಿ ಸಹಿತ || ೪೪೭ ||
ಪುಣ್ಯ ಪುರುಷನ ಶಿರದಿ ಋಷಿಗಳು |
ಪುಣ್ಯ ಜಲದಭಿಷೇಕವೆಸಗೆ ಸು |
ವರ್ಣದಾರತಿ ಯೆತ್ತಿದರು ಸುರ | ಕನ್ನಿಕೆಯರು || ೪೪೮ ||

**ವಾರ್ಧಕ**
ಹರನು ಪರಶಿವೆಗೊರೆದ ವರ ಪುಣ್ಯ ಚರಿತೆಯಿದ |
ಹರಿಯು ಪ್ರೇರಿಸಿದಂತೆ ಬರೆದು ಪ್ರಕಟಿಸಿದೆನು |
ತ್ತರ ಕನ್ನಡದಿ ಸಿದ್ಧಪುರದ ಬೆಳಸಲಿಗೆ ಯ | ಮ್ಮಿರವು ಬುಧ ವಿಠಲಾಖ್ಯನ ||
ತರಳ ಗಣಪತಿಯೆಂದು ಕರೆವರೆನಗೀ ಧರೆಯೊ |
ಳಿರುವ ವಿದ್ವನ್ಮಣಿಗಳೆನ್ನೆರಡನೆಯ ಕೃತಿಯೊ |
ಳಿರುವ ದೋಷವ ತಿದ್ದಿ ಮೆರೆಸಲಿಷ್ಟಾರ್ಥಮಂ ಸ್ಮರಪಿತಂ ಕರುಣಿಸುವನು || ೪೪೯ ||

**ಮಂಗಲ ಪದ**

**ಧವಳಾರ - ಏಕ**
ಮಂಗಲಂ ಜಯ ಮಂಗಲಂ ||
ಮಂಗಲಂ ಮತ್ಸ್ಯಗೆ ಕೂರ್ಮನಿಗೆ |
ಮಂಗಲಂ ವರಹಗೆ ನರಹರಿಗೆ ||
ಮಂಗಲಂ ವಟು ವಾಮನ ಮೂರ್ತಿಗೆ ಜಯ |
ಮಂಗಲಂ ಭಾರ್ಗವರಾಮನಿಗೆ || ಜಯ ಮಂಗಲಂ || ೪೫೦ ||
ಕುಶಿಕ ಸವನ ಸಂರಕ್ಷಣಗೆ |
ಶಶಿಧರಕಾರ್ಮುಕ ಭಂಜನಿಗೆ ||
ವಸುಧಿಜೆ ನೆವದಿಂದಸುರರ ಮರ್ದಿಸಿ |
ರಸೆಯ ಪೊರೆದ ರಘು ರಾಮನಿಗೆ || ಜಯ ಮಂಗಲಂ || ೪೫೧ ||
ಮಂಗಲ ಬೌದ್ಧಗೆ ಕಲ್ಕ್ಯನಿಗೆ |
ಮಂಗಲಂ ಸುಜನೋದ್ಧಾರಕಗೆ ||
ಮಂಗಲ ಶೇಷಾಚಲದೊಳು ನೆಲೆಸಿಹ |
ರಂಗನಾಯಕ ಶ್ರೀನಿವಾಸನಿಗೆ || ಜಯ ಮಂಗಲಂ || ಶ್ರೀ || ೪೫೨ ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಬೆಳಸಲಿಗೆ ಕೃತಿ ಸಂಪುಟ, ದಿ. ಬೆಳಸಲಿಗೆ ಗಣಪತಿ ಹೆಗಡೆ ಕೃತಿ ಪ್ರಕಾಶನ, ಸಿದ್ದಾಪುರ, ಉತ್ತರ ಕನ್ನಡ

**ಪ್ರಸಂಗ ಪ್ರತಿ ಆಧಾರ:** ಕವಿಯ ಮೂಲ ಕೃತಿ

**ಪ್ರಸಂಗ ಪ್ರತಿ ಕೊಟ್ಟವರು:** ಸುರೇಶ್ ಹೆಗಡೆ, ಬೆಳಸಲಿಗೆ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಬರವಣಿಗೆ:** ಶಶಿಕಲಾ ಮೂರ್ತಿ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ ಎಂ. ಎನ್.

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ